ಸಾಹಿತ್ಯ ದಾಸೋಹ – ೨೦೩

ಭಾರತ ಸ್ವಾತಂತ್ರ್ಯದ
ಅಮೃತ ಮಹೋತ್ಸವ ವರ್ಷ
೨೦೨೨



೦೯ ಜುಲೈ ೨೦೨೨ರ
ದಾಸೋಹದಲ್ಲಿ
ಪ್ರಸ್ತುತಪಡಿಸಿದ ಬರಹಗಳು



ಸಮನ್ವಯ ಸಮಿತಿ * ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಎಲ್ಲರಿಗೂ ಶ್ರೀ ಶುಭಕೃತ್ ಸಂವತ್ಸರದ ಶ್ರಾವಣ ಮಾಸದ ಸಾಲು ಹಬ್ಬಗಳ ಆತ್ಮೀಯ ಶುಭಾಶಯಗಳು.

ಜುಲೈ ತಿಂಗಳ ಒಂಬತ್ತನೇ ತಾರೀಖಿನಂದು ನಡೆದ ೨೦೩ನೇ ನೋಡಿಯೋ ದಾಸೋಹದ ಪ್ರಸ್ತುತಿಗಳ ಸಂಕಲನವನ್ನು ಇ-ಪುಸ್ತಕ ರೂಪದಲ್ಲಿ ನಿಮ್ಮ ಮುಂದಿಡಲು ಅತೀವ ಸಂತಸವೆನಿಸುತ್ತಿದೆ.

೨೦೦ನೇ ದಾಸೋಹವನ್ನು ಒಂದು ಹಬ್ಬದಂತೆ ವೇದಿಕೆಯಲ್ಲಿ ಆಚರಿಸಿ ಮತ್ತೆ ವೆಬಿನಾರ್‌ಗೆ ಮರಳಿದ್ದೇವೆ. ಈ ತಂತ್ರಜ್ಞಾನದ ವೇದಿಕೆ ಎಲ್ಲರಿಗೂ ಅನುಕೂಲವಾಗಿದೆ, ಸಮಯ ಉಳಿಸಿದೆ ಮತ್ತು ದೇಶ ವಿದೇಶದಲ್ಲಿರುವ ಎಲ್ಲರನ್ನೂ ಬೆಸೆದಿದೆ.

೨೦೩ನೆಯ ದಾಸೋಹದ ಅಧ್ಯಕ್ಷತೆ ವಹಿಸಿದ್ದವರು ವೇದಿಕೆಯ ವಿದ್ವನ್ಮಣಿ, ಸಕಲ ಕಲಾವಲ್ಲಭೆಯಾದ ಶ್ರೀಮತಿ ರತ್ನಾ ಮೂರ್ತಿಯವರು, ಎಲ್ಲಾ ಪ್ರಸ್ತುತಿಗಳನ್ನು ತಮ್ಮಲ್ಲಿರುವ ವಿದ್ವತ್ತಿನೊಂದಿಗೆ ಸಹೃದಯತೆ ಬೆರೆಸಿ ವಿಶ್ಲೇಷಣೆ ಮಾಡಿದ ಸುದೀರ್ಘ ಮಂಡನೆ ಚೇತೋಹಾರಿಯಾಗಿತ್ತು. ಅವರ 'ಅಧ್ಯಕ್ಷೀಯ ಅವಲೋಕನ'ದ ಪೂರ್ಣ ಪಾಠ ಈ ಸಂಚಿಕೆಯಲ್ಲಿದೆ.

ಇನ್ನು ಈ ಸಲದ ಎಲ್ಲಾ ಪ್ರಸ್ತುತಿಗಳು ತಮ್ಮ ವಸ್ತು ವೈವಿಧ್ಯತೆಯಿಂದ, ನಾವೀನ್ಯದಿಂದ, ಜೀವನ್ಮುಖಿಯಾದ ಚಿಂತನೆಗಳಿಂದ ಕೂಡಿದ್ದು, ಅತ್ಯುತ್ತಮ ಗುಣಮಟ್ಟದ್ದಾಗಿದ್ದವು. ನಮ್ಮ ಈ ವೇದಿಕೆಯು ಸಾಹಿತ್ಯ ಲೋಕದಲ್ಲಿ ಅನೇಕ ವಿಶೇಷತೆಗಳನ್ನು ಸಾಧಿಸುತ್ತಾ ಮುಂದುವರೆಯುತ್ತಿರುವದು ಅಭಿಮಾನದ ಸಂಗತಿ.

ಸುಂದರ ಮುಖಪುಟದೊಂದಿಗೆ ವಿನ್ಯಾಸಗೊಳಿಸಿ ಈ ಸಂಚಿಕೆಯನ್ನು ಸಿದ್ಧಪಡಿಸಿ, ಬಿಡುಗಡೆಗೊಳಿಸಿದ ಶ್ರೀ ಶೃಂಗೇಶ್ವರ ಶರ್ಮರಿಗೆ, ದಾಸೋಹವನ್ನು ದಾಖಲಿಸಿ ಎಲ್ಲ ಕಡೆಯಿಂದಲೂ, ಎಲ್ಲರಿಗೂ, ಬೇಕೆಂದಾಗ ನೋಡುವಂತೆ ಯೂಟ್ಯೂಬ್‌ನಲ್ಲಿ ಚಿತ್ತರಿಸಲು ತಾಂತ್ರಿಕ ನೆರವು ನೀಡಿದ ಗುರುರಾಜ ಶಾಸ್ತ್ರಿಯವರಿಗೆ, ಆದರದ ಆತಿಥ್ಯ ನೀಡಿದ ಶ್ರೀಮತಿ ರೇಣುಕಾ ದೇಸಾಯಿಯವರಿಗೆ ಹಾಗೂ ದಾಸೋಹದಲ್ಲಿ ಭಾಗವಹಿಸಿದ ಪ್ರಸ್ತುತಿಕಾರರು ಮತ್ತು ವೀಕ್ಷಕರೆಲ್ಲರಿಗೂ ಧನ್ಯವಾದಗಳು.

ಎಂದಿನಂತೆ ನಿಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ ...

ಮುಖಪುಟದ ಚಿತ್ರ : 'ಸ್ವಾತಂತ್ರ್ಯದ ಅಮೃತ ಮಹೋತ್ಸವ' ಚಿತ್ರ ಕೃಪೆ – ಅಚಿತರಜಾಲ

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೦೩

ಕಾರ್ಯಕ್ರಮ ವರದಿ : ಹು.ವಾ.ಶ್ರೀಪ್ರಕಾಶ್

ದಿನಾಂಕ ೦೯.೦೭.೨೨ರಂದು ಶನಿವಾರ ೩.೩೦ಕ್ಕೆ ಶ್ರೀಮತಿ ರತ್ನಾಮೂರ್ತಿಯವರ ಅಧ್ಯಕ್ಷತೆಯಲ್ಲಿ ಅಂತರಜಾಲ ವೇದಿಕೆ ಮುಖೇನ ೨೦೩ನೆಯ ಸಾಹಿತ್ಯ ದಾಸೋಹ ಕಾರ್ಯಕ್ರಮ ಆರಂಭವಾಯಿತು. ಶ್ರೀ ವಿಠಲ್ ಇಜೇರಿಯವರು ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ಅಧ್ಯಕ್ಷರನ್ನು ಪರಿಚಯಿಸಿದರು.

ಶ್ರೀಮತಿ ರತ್ನಾ ಮೂರ್ತಿ (ಎಸ್.ಎಂ.ನಾಗರತ್ನ) ಅವರು ಬಿಷಪ್ ಕಾಟನ್ ಬಾಲಕಿಯರ ಶಾಲೆಯ ನಿವೃತ್ತ ಶಿಕ್ಷಕಿಯಾಗಿದ್ದು, ಕವಿಯಾಗಿ, ಸಾಹಿತಿಯಾಗಿ, ಆಕಾಶವಾಣಿ ಕಲಾವಿದೆಯಾಗಿ, ಗಮಕ ವ್ಯಾಖ್ಯಾನಕಾರಾಗಿಯೂ ಪ್ರಸಿದ್ಧರಾಗಿದ್ದಾರೆ. ಸಮಾಜ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಅತ್ಯಂತ ಚಟುವಟಿಕೆಯ ವ್ಯಕ್ತಿ. ಶಾಲಾ ಕಾಲೇಜು ದಿನಗಳಂದಲೂ ಸಾಹಿತ್ಯ, ಕಲೆ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿರುವ ಇವರು, ಕಾವ್ಯ, ಸಣ್ಣಕಥೆ, ಕಥನ ಕವನ, ಕಾದಂಬರಿ, ನಾಟಕ, ಅನುಭವ ಕಥನ, ಮಕ್ಕಳ ಸಾಹಿತ್ಯ, ಕೀರ್ತನ ಸಾಹಿತ್ಯ, ಮುಂಡಿಗೆ ಸಾಹಿತ್ಯ ಇತ್ಯಾದಿ ಎಲ್ಲಾ ಪ್ರಕಾರಗಳಲ್ಲಿ ಕೃಷಿಮಾಡಿದ್ದು, ಈವರೆಗೆ ಇವರ ೨೭ ಕೃತಿಗಳು ಪ್ರಕಟವಾಗಿವೆ. ಇವರ ಎರಡು ಕೃತಿಗಳು ಅಂಧರ



ಬ್ರೈಲ್ ಲಿಪಿಗೂ ಲಿಪ್ಯಂತರಗೊಂಡಿದ್ದು, ಇವರ ಕವನವು ಮುಂಬಯಿಯ ಏಳನೆಯ ತರಗತಿಯ ಪಠ್ಯಪುಸ್ತಕದಲ್ಲಿ ಹಾಗೂ ಮುಂಡಿಗೆಗಳು, ಕೀರ್ತನೆಗಳು, ಉಗಾಭೋಗಗಳು ಗಮಕ ಪಠ್ಯದಲ್ಲೂ ಸೇರ್ಪಡೆಯಾಗಿವೆ. ಸಾವಿರಾರು ಕೀರ್ತನೆಗಳು, ಉಗಾಭೋಗಗಳು, ಮೀರಿ ಮುಂಡಿಗೆಗಳು, ವಚನಗಳು ಮತ್ತು ದಂಡಕಗಳನ್ನು ರಚಿಸಿರುವರಲ್ಲದೆ, ಇತ್ತೀಚೆಗೆ ವಿಶಿಷ್ಟವಾದ ಮಂಡಲ ಚಿತ್ರಕಲೆಯಲ್ಲೂ ವಿಶೇಷ ಆಸಕ್ತಿ ಬೆಳೆಸಿಕೊಡು ಹಲವಾರು ಸುಂದರ ಮಂಡಲ ಚಿತ್ರ ರಚಿಸಿರುತ್ತಾರೆ.

ರತ್ನಾ ಮೂರ್ತಿಯವರು ಪದ್ಯಾನುವಾದ ಮಾಡಿರುವ ಸಂಪೂರ್ಣ ಶ್ರೀಮದ್ಭಗವದ್ಗೀತೆಯು 'ಗೇಯಗೀತಾಧಾರೆ' ಎಂಬ ಶೀರ್ಷಿಕೆಯಲ್ಲಿ ಹಾಗೂ ಇವರ ಹಲವಾರು ಕಥೆಗಳು, ಅನುಭವ ಕಥನ ಮತ್ತು 'ದಿನಕ್ಕೊಂದು ದೇವನುತಿ' ಎಂಬ ಶೀರ್ಷಿಕೆಯಲ್ಲಿ ಸ್ವರಚಿತ ಕೀರ್ತನೆಗಳ ಗಾಯನದ ವಿಡಿಯೋ ಸಹ ಯುಟ್ಯೂಬ್‌ನಲ್ಲಿ ಪ್ರಸಾರವಾಗುತ್ತಿವೆ.

ರತ್ನಾ ಮೂರ್ತಿಯವರ ಬರಹಗಳು ನಾಡಿನ ಹಲವಾರು ದಿನಪತ್ರಿಕೆ, ನಿಯತಕಾಲಿಕಗಳು ಹಾಗೂ ಅಂತರ್ಜಾಲ ಪತ್ರಿಕೆಗಳಲ್ಲೂ ಪ್ರಕಟವಾಗಿದ್ದು, 'ತರಂಗ'ದಲ್ಲಿ ಇವರ ಮಕ್ಕಳ ಕತೆಗಳು ಎರಡು ಬಾರಿ ಧಾರಾವಾಹಿಯಾಗಿ ಪ್ರಕಟವಾಗಿವೆ. ವಿದ್ಯಾವಾಚಸ್ಪತಿ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಸಂಪಾದಿಸಿರುವ 'ಹರಿದಾಸರ ೧೦,೦೦೦ ಕೀರ್ತನೆಗಳು' ಎಂಬ ಬೃಹತ್ ಗ್ರಂಥದಲ್ಲಿ ರತ್ನಾ ಮೂರ್ತಿ ವಿರಚಿತ ಸುಮಾರು ೫೦೦ಕ್ಕೂ ಹೆಚ್ಚು ಕೀರ್ತನೆಗಳು ಮತ್ತು ಉಗಾಭೋಗಗಳಿವೆ 'ವಿಶ್ವವಾಣಿ ದಿನಪತ್ರಿಕೆ'ಯ ಗುರುವಾರದ ಸಂಚಿಕೆಯಲ್ಲಿ ನಿಯತವಾಗಿ 'ಗೌರಮ್ಮನ ವಚನಗಳು' ಪ್ರಕಟವಾಗುತ್ತಿವೆ.

ಅಖಿಲ ಕರ್ನಾಟಕ ಗಮಕ ಸಮ್ಮೇಳನಗಳಲ್ಲಿ ಹಲವು ಗೋಷ್ಠಿಗಳ ಅಧ್ಯಕ್ಷತೆಯ ವಹಿಸಿರುವ ರತ್ನಾ ಮೂರ್ತಿಯವರಿಗೆ ಕನಕಪುರದಲ್ಲಿ ನಡೆದ ಜಿಲ್ಲಾ ಗಮಕ ಸಮ್ಮೇಳನದ ಅಧ್ಯಕ್ಷ ಸ್ಥಾನದ ಗೌರವ ಲಭಿಸಿದೆ. ಮೂಡಬಿದರೆಯ ೨೦೧೭ರ ಆಳ್ವಾಸ್ ನುಡಿಸಿರಿಯಲ್ಲಿ ಕಾರ್ಯಕ್ರಮ ನೀಡಿರುವರಲ್ಲದೆ, ೮೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಕಾವ್ಯ ಪ್ರಚಾರದಲ್ಲಿ ಗಮಕ ಮತ್ತು ಕೀರ್ತನ ಕಲೆಗಳ ಪಾತ್ರ' ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡನೆ ಮಾಡಿರುತ್ತಾರೆ. ಸಾಹಿತ್ಯರತ್ನ, ದಾಸಸಾಹಿತ್ಯ ರತ್ನ, ಮುಂಡಿಗೆಯ ರತ್ನ, ವಚನ ರತ್ನ, ಮುಂಡಿಗೆಶ್ರೀ, ಮುಂಡಿಗೆ ಸಾಮ್ರಾಜ್ಞಿ, ಗಮಕ ಶಾರದೆ ಎಂದೆಲ್ಲ ವಿದ್ವದ್ವಲಯದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಗೊರೂರು ಪ್ರತಿಷ್ಠಾನದ ಕಾವ್ಯ ಪ್ರಶಸ್ತಿ, ಕಾಕೋಳು ಸರೋಜಾರಾವ್ ಕಾದಂಬರಿ ಪ್ರಶಸ್ತಿ, ಗುಣಸಾಗರಿ ನಾಗರಾಜ್ ಮಕ್ಕಳ ಪುಸ್ತಕ ಪ್ರಶಸ್ತಿ, ಬ.ನ.ಸುಂದರರಾವ್ ದತ್ತಿನಿಧಿ ಬಹುಮಾನ, ಬನಶಂಕರಮ್ಮ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪುಸ್ತಕ ಪ್ರಶಸ್ತಿ, ಕನ್ನಡ ಸೇವಾರತ್ನ ಪ್ರಶಸ್ತಿ, ಮುಂತಾಗಿ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ

ಸಹನಾ ಅಂಗವಿಕಲರ ಸೇವಾ ಸಂಸ್ಥೆಯ ಟ್ರಸ್ಟಿಯಾಗಿ ಅಂಧರ ಶ್ರೇಯೋಭಿವೃದ್ಧಿಗಾಗಿಯೂ ಕೆಲಸ ಮಾಡುತ್ತಿರುವ ರತ್ನಾ ಮೂರ್ತಿ, ಶ್ರೀವಾಗ್ದೇವಿ ಗಮಕ ಕಲಾ ಪರಿಷತ್ತಿನ ಟ್ರಸ್ಟಿಯೂ ಆಗಿದ್ದಾರೆ. ವೃದ್ಧಾಶ್ರಮಗಳ ಹಿರಿಯ ಜೀವಗಳಿಗೆ ರಾಮಾಯಣ, ಮಹಾಭಾರತ, ಭಾಗವತ ಇತ್ಯಾದಿ ಕಥೆಗಳನ್ನು ಹೇಳುತ್ತಾ ಅವರೊಂದಿಗೆ ಕಾಲ ಕಳೆಯುವುದು, ರತ್ನಾಮೂರ್ತಿಯವರ ಮೆಚ್ಚಿನ ಹವ್ಯಾಸಗಳಲ್ಲೊಂದು.

ಹೀಗೆ ಶ್ರೀ ಇಜೇರಿಯವರು ದಾಸೋಹದ ಅಧ್ಯಕ್ಷತೆ ವಹಿಸಿರುವ ಶ್ರೀಮತಿ ರತ್ನಾ ಮೂರ್ತಿಯವರ ಬಹುಮುಖ ಪ್ರತಿಭೆಯನ್ನು ಸವಿವರವಾಗಿ ಪರಿಚಯಿಸಿ, ಅವರನ್ನೂ, ಎಲ್ಲ ಸಭಿಕರನ್ನೂ, ಕಾರ್ಯಕ್ರಮಕ್ಕೆ ಸ್ವಾಗತಿಸಿದರು

ನಂತರ ಪ್ರಾಸ್ತಾವಿಕ ಮಾತುಗಳನ್ನಾಡಿದ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ವೇದಿಕೆ ಹಮ್ಮಿಕೊಂಡಿರುವ ಮುಂದಿನ ಕಾರ್ಯಕ್ರಮಗಳ ಬಗ್ಗೆ ಹೇಳಿದರು. ಅಗಸ್ಟ್ ೧೩ರಂದು ಸಾಹಿತ್ಯ ದಾಸೋಹ, ೨೧ರಂದು 'ಕನ್ನಡ ಶಬ್ದ ಪ್ರಪಂಚಕ್ಕೆ ಪ್ರೊ. ಜಿ.ವೆಂಕಟಸುಬ್ಬಯ್ಯನವರ ಕೊಡುಗೆ' ಎಂಬ ಬಗ್ಗೆ ಶ್ರೀ ಜಿ.ವಿ.ಅರುಣರವರು ಆಯ್ಕೆ ಮಾಡುವ ಅತಿಥಿಯೊಬ್ಬರು ನೀಡಲಿರುವ ಉಪನ್ಯಾಸ, .ಸೆಪ್ಟೆಂಬರ್ ೧೮ರಂದು ಶ್ರೀಮತಿ ರಾಧಿಕಾ ಗುಜ್ಜರ್ ಅವರಿಂದ ಶ್ರೀಮತಿ ರತ್ನಾಮೂರ್ತಿಯವರ ಸಮಗ್ರ ಕೃತಿಗಳ ಅವಲೋಕನ, ಖೋ ಕಾದಂಬರಿಯ ಪ್ರಕಟಣಾಪೂರ್ವ ಸಿದ್ಧತೆಗಳು, ಸಪ್ನಾ ಬುಕ್ ಹೌಸ್ ಪ್ರಕಟಿಸಲಿರುವ ಡಾ.ಪ್ರಧಾನ ಗುರುದತ್ತರು ಬರೆದ 'ಪ್ರಾ. ಎಚ್ಚೆಸ್ಕೆಯವರ ಬದುಕು ಬರಹ' ಕೃತಿಯ ಬಿಡುಗಡೆ ಬಗೆಗಿನ ಪೂರ್ವಭಾವೀ ಸಮಾಲೋಚನೆಗಳು ಮುಂತಾದ ಚಟುವಟಿಕೆಗಳ ಬಗ್ಗೆ ವಿವರಿಸಿದರು.

ನಂತರ ವೇದಿಕೆಯ ಒಟ್ಟು ಹತ್ತೊಂಬತ್ತು ಸದಸ್ಯರು ತಮ್ಮ ಕತೆ, ಕವನ, ಲೇಖನ ಮುಂತಾದ ಸ್ವರಚಿತ ಪ್ರಸ್ತುತಿಗಳನ್ನು ಮಂಡಿಸಿದರು.

ಕೊನೆಯಲ್ಲಿ ಅಧ್ಯಕ್ಷತೆವಹಿಸಿದ್ದ ಶ್ರೀಮತಿ ರತ್ನಾಮೂರ್ತಿಯವರು ಮಾತನಾಡಿ, ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದರು. ಈ ವೇದಿಕೆ ನನ್ನನ್ನೂ ಸೇರಿದಂತೆ ಎಲ್ಲರನ್ನೂ ಬೆಳೆಸುತ್ತಾ ಬಂದಂತಹ ಅದ್ಭುತ ಮಾನಸಿಕ ಸ್ಪರ್ಶವುಳ್ಳ ವೇದಿಕೆ ಎಂದು ಅಭಿಮಾನ ವ್ಯಕ್ತಪಡಿಸಿ, 'ವಿಮರ್ಶೆ ನನ್ನ ಅಳವಿನದಲ್ಲ. ಆದುದರಿಂದ ಇಂದಿನ ವಿವಿಧ ಬಗೆಯ ಪ್ರಸ್ತುತಿಗಳ ಅವಲೋಕನವನ್ನಷ್ಟೇ ಮಾಡಿದ್ದೇನೆ ಎಂದು, ಎಲ್ಲ ಪ್ರಸ್ತುತಿಗಳ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. .

ಸಾಹಿತ್ಯ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲ ರವರು ಕಾರ್ಯಕ್ರಮದ ನಿರ್ವಹಣೆ ಮಾಡಿದರು. ಇದೇ ಸಂದರ್ಭದಲ್ಲಿ, ಶ್ರೀ ಎಸ್. ಶೃಂಗೇಶ್ವರ ಶರ್ಮರವರು ಪಿಡಿಎಫ್ ರೂಪದಲ್ಲಿ ಸಿದ್ಧಪಡಿಸಿದ, ಜೂನ್ ತಿಂಗಳನಲ್ಲಿ ನಡೆದ 'ಸಾಹಿತ್ಯ ದಾಸೋಹ – ೨೦೨'ರ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಜಿ.ಮೀಟ್ ಸಭೆಯ ಆತಿಥ್ಯ ನಿರ್ವಹಿಸಿದ ಶ್ರೀಮತಿ ರೇಣುಕಾ ದೇಸಾಯಿಯವರು ಕೊನೆಯಲ್ಲಿ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ದಾಸೋಹದಲ್ಲಿ ಪ್ರಸ್ತುತಿಪಡಿಸಿದ ಎಲ್ಲ ಬರಹಗಳು ಹಾಗೂ ಶ್ರೀಮತಿ ರತ್ನಾ ಮೂರ್ತಿಯವರ 'ಅಧ್ಯಕ್ಷೀಯ ಅವಲೋಕನ' ಈ ಸಂಚಿಕೆಯ ಒಳಗಿನ ಪುಟಗಳಲ್ಲಿ ಲಭ್ಯವಿದೆ.

'ಸಾಹಿತ್ಯ ದಾಸೋಹ – ೨೦೩'ರ ಸಂಪೂರ್ಣ ಕಾರ್ಯಕ್ರಮವನ್ನು 'ಸಾಹಿತ್ಯ ದಾಸೋಹ'ದ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.

*****

ಅಭಿಮನ್ಯುವಿಗೆ ನ್ಯಾಯ

– ಬೆಂಶ್ರೀ ರವೀಂದ್ರ

ಝಿಲ್ಲೆಂದು ಚಿಮ್ಮಿದ ರಕ್ತ
ಅಲ್ಲಿದ್ದ ಕತ್ತರಿಸಿದ ಬಟ್ಟೆಗಳ ಮೇಲೆ ಚಿಲ್ಲಾಗಿ ಬಿತ್ತು
ಕತ್ತ ಮೇಲಿದ್ದ ಅಳತೆಯ ಟೇಪು ಕೆಳಗೆ ಬಿದ್ದು
ಅನಾಥವಾಯ್ತು
ಹೊಲಿಗೆ ಹಾಕುವ ಯಂತ್ರ
ಹಾಕಿದ್ದ ಹೊಲಿಗೆ ಬಿಚ್ಚತೊಡಗಿತು

ಅವನ ಮನ ಝಿಲ್ಲೆನ್ನಲಿಲ್ಲ
ನಕ್ಕ, ಘೂತ್ಕರಿಸಿದ
ಮರಳುಗಾಡಿನ ಭಂಟ
ಮನಮರುಳು ಮರಳಮನ
ಹುಲ್ಲಿನ ಎಸಳೂ ಹುಟ್ಟದಲ್ಲಿ
ಒಯಸಿಸ್ಗಳು ಬತ್ತಿಹೋಗಿವೆ
ಬಿಸಿಲ್ಗುದುರೆಯೇರಿ ಸ್ವರ್ಗಕ್ಕೆ ಹೊರಟಿದ್ದಾನೆ.

ಆದರೆ
ಕುದುರೆಯ ಕಾಲುಗಳು ಹೂತುಹೋಗಿವೆ
ನೂರಾರು ವರ್ಷಗಳ ಹಿಂದೆ
ಅದು ಕಾಲನೆತ್ತದು
ಅವ ಲಗಾಮು ಎಳೆಯುತ್ತಲೇ ಇದ್ದಾನೆ
ಮುಂದೆ ಬರಲಾರ,
ನಿಮ್ಮನ್ನೆ ಕರೆಯುತ್ತಿದ್ದಾನೆ
ಆಗದೆಂದರೆ ಕತ್ತಿ ಝಳಪಿಸುತ್ತಾನೆ
ಅವನೇ ಕೊನೆ ಅವನೇ ಸತ್ಯ ಅನ್ನುತ್ತಿದ್ದಾನೆ
ಅತ್ತರೂ ಸತ್ತರೂ
ಅವಗೆ ಕಾಲನ ನೆತ್ತರು ಬೇಕಾಗಿದೆ

ಬುವಿಯ ಗೋಳಕ್ಕಿನ್ನು ಚಾರ್ವಾಕ
ಮರಳಲಾರ ; ಪ್ರಶ್ನೆಗಳನೆತ್ತಲಾರ
ನಿರಂಕುಶಮತಿಗೆಲ್ಲಿ ಅವಕಾಶ
ಹೊಸತು ಹೊಸಕುವ ಹುನ್ನಾರ

ನರಸಿಂಹಯ್ಯನವರೆ
ಪ್ರಶ್ನೆಗಳನ್ನು ಕೇಳದೆ ಒಪ್ಪಬೇಡಿರೆಂದು ಕಲಿಸಿದರಲ್ಲವೆ
ಇವ ನೋಡಿ ನಡೆದಿದ್ದೆ ದಾರಿ,
ಎಳೆದಿದ್ದೆ ಲಕ್ಷ್ಮಣರೇಖೆಯೆನ್ನುತ್ತಾನೆ; ಹುಚ್ಚುಖೋಡಿ.

ಇವನ ಕಿವಿಯೊಳಗೆ/ಮಿದುಳೊಳಗೆ ಯಾರೋ ಕೂತಿದ್ದಾರೆ
ಒಂದೇ ಸಮ ಕೂಗುತ್ತಿದ್ದಾರೆ
ಇವನದಲ್ಲದ ಇವನ ನಾಲಗೆಯಾಡುತ್ತಿದೆ
ರಕ್ತಬೀಜನ ಸಂತತಿ,
ತೊಟ್ಟು ರಕ್ತದಲಿ ಸಾವಿರಾರು ರಕ್ತಬೀಜರು
ಕಾಳಿಯೆಂದು ನಾಲಗೆಯ ಚಾಚುವಳೊ?

ಯಾರದೊ ಎಲ್ಲಿಯದೊ ಒರಲಿಗೆ
ಕನ್ನಡಿಯಾದೆಯಲ್ಲ ಗೆಳೆಯ
ಈಗ ಕನ್ನಡಿಯೂ ಒಡೆಯಿತು
ನಿನ್ನವರಿಗೆ ನೀನು ಚೂರ್ಚೂರು ಕನ್ನಡಿಯ ಗಂಟಾದೆಯಲ್ಲ
ಪಾದರಸದಂತವರು ಪಾದರಸ ಕುಡಿಸಿ ಪಾರಾಗುವರು
ನಿನ್ನ ಮೇಲೆ ತಮ್ಮ ಬಟ್ಟೆಯ ಹೊದಿಸುವರು
ಬಟ್ಟೆ ಕತ್ತರಿಸುವವ ನೀವನವರ ಬಟ್ಟೆಗೆ ಬಟ್ಟೆಯಾದೆ

ಕತ್ತರಿಸಿದ ಕೊರಳು
ಬಿಗಿಯಾಗಿದೆ ಧರ್ಮದ ಉರುಳು
ಮಲಿನ ಕರುಳು ಊರೇ ಕುರುಳು
ಮಾನವನಾದನೆ ಧರ್ಮದ ಯಂತ್ರ
ಒಳಹೊರ ವಿದ್ರೋಹದ ಕುತಂತ್ರ
ಮತದಾಸೆಗೆ ಕಿಲುಬಾಡಳಿತ ಜಂತ್ರ

ಈಗ ಅನಿವಾರ್ಯ ಕೃಷ್ಣ
ಸುದರ್ಶನವ ರವಿಗಡ್ಡವಿಟ್ಟು ಜಯದ್ರಥರನ್ನು
ಸಂಹರಿಸಲೇಬೇಕು
ಮಹಾಭಾರತ ರಂಗದಲಿ ಅಭಿಮನ್ಯುಗಳ ಕೊಲೆಗೆ
ನ್ಯಾಯನೀಡಲೇಬೇಕು.

***

ತಪ್ಪಿದ ದುರಂತ

– ಮಹಾಬಲ

ಇತ್ತೀಚೆಗೆ ಜಾರ್ಖಂಡ್ ರಾಜ್ಯದ ದೇವಘರ್ ಜಿಲ್ಲೆಯಲ್ಲಿರುವ ಬಾಬಾ ವೈದ್ಯನಾಥ ದೇವಸ್ಥಾನಕ್ಕೆ ಹೋಗಿದ್ದೆವು. ಪ್ರವಾಸ ಸಂಸ್ಥೆಯ ಕಾರ್ಯಕ್ರಮ ರಾಜಗಿರ್‌ನಲ್ಲಿ ಮುಕ್ತಾಯವಾದ್ದರಿಂದ ನಾವು ನಾಲ್ಕು ಜನ ಪ್ರವಾಸಿಗಳು ರಾಜಗಿರ್ ನಿಂದ ಒಂದು ಕಾರು ಮಾಡಿಕೊಂಡು 196 ಕಿಮೀ ದೂರದ ದೇವಘರ್‌ಗೆ ಪ್ರಯಾಣ ಬೆಳೆಸಿದೆವು.

ದೇವಘರ್ ತಲುಪಿ ವಸತಿ ಹುಡುಕಿ ಊಟ ಮುಗಿಸಿದೆವು. ಆಗ ಮಧ್ಯಾಹ್ನ ಮೂರು ಗಂಟೆ. ದೇವಸ್ಥಾನಕ್ಕೆ ಸಂಜೆ ಏಳು ಗಂಟೆಗೆ ಬಂದು ಕರೆದುಕೊಂಡು ಹೋಗುವುದಾಗಿ ಅಲ್ಲಿನ ಪಂಡಿತ್ ಸುಧೀರ್ ಶರ್ಮ ಹೇಳಿದ್ದರು. ನಮ್ಮ ಸಹಪ್ರಯಾಣಿಕರಾಗಿದ್ದ ಬೆಂಗಳೂರಿನವರೇ ಆದ ಯೋಗಾನರಸಿಂಹ ಅವರನ್ನು ನಾನು, "ಹೇಗೂ ಸಮಯವಿದೆ, ನಮ್ಮ ಸುಪರ್ದಿಯಲ್ಲೇ ಕಾರೂ ಇದೆ. ಇಲ್ಲಿಂದ ಮೂವತ್ತು ಕಿಮೀ ದೂರವಿವ ಪ್ರಸಿದ್ಧ ತ್ರಿಕೂಟ ಪರ್ವತಕ್ಕೆ ಹೋಗಿ ಬರೋಣವೇ?" ಎಂದು ಕೇಳಿದೆ. ಅವರು ಅರೆಮನಸ್ಸಿನಿಂದ ಒಪ್ಪಿದರು. ಏಕೆಂದರೆ ಅವರ ಗಮನವೆಲ್ಲ ದೇವಸ್ಥಾನ ಮತ್ತು ಐದು ಗಂಟೆಗೆ ಹೋಟೆಲ್ ಬಳಿ ಬರುತ್ತೇನೆಂದು ಹೇಳಿದ್ದ ಪಂಡಿತ್ ಸುಧೀರರತ್ತಲೇ ಇತ್ತು.



ತ್ರಿಕೂಟ ಪರ್ವತವು ಜಾರ್ಖಂಡ್ ರಾಜ್ಯದ ದೇವಘರ್ ಪಟ್ಟಣದಿಂದ ಮೂವತ್ತು ಕಿಮೀ ದೂರದಲ್ಲಿ ಡುಮ್ಕ ಮಾರ್ಗದಲ್ಲಿದೆ. ಮೂರು ಪರ್ವತ ಶೃಂಗದಿಂದ ಕೂಡಿರುವುದರಿಂದ ಅದಕ್ಕೆ ತ್ರಿಕೂಟ ಪರ್ವತ ಎಂಬ ಹೆಸರು. ಇದರ ಸರಾಸರಿ ಎತ್ತರ 2470 ಅಡಿ. ಒಂದು ಅಗಲವಾದ ಬಂಡೆಯಿದ್ದು ಅದು ರಾವಣನು ಪುಷ್ಪಕ ವಿಮಾನ ನಿಲ್ಲಿಸಿದ ಸ್ಥಳ ಎನ್ನುತ್ತಾರೆ. ರಾವಣ ಆತ್ಮಲಿಂಗವನ್ನು ಕೈಲಾಸದಿಂದ ತರುವಾಗ ಮಾರ್ಗಮಧ್ಯ ಸಂಧ್ಯಾವಂದನೆಯ ಸಮಯವಾಯಿತೆಂದು ಅದನ್ನು ಅಲ್ಲಿದ್ದ ಗೊಲ್ಲ ಬಾಲಕನಿಗೆ ನೀಡಿ ವಿನಂತಿಸುತ್ತಾನೆ. ಮೂರು ಬಾರಿ ನಿನ್ನ ಹೆಸರು ಕರೆಯುತ್ತೇನೆಂದೂ, ಅದರೊಳಗೆ ನೀನು ಬಾರದಿದ್ದರೆ ನೆಲಕ್ಕೆ ಇಡುತ್ತೇನೆಂದೂ ವಿಷ್ಣುರೂಪಿಯಾದ ಬಾಲಕ ಷರತ್ತು ಹಾಕುತ್ತಾನೆ. ಒಮ್ಮೆ ನೆಲಕ್ಕಿಟ್ಟರೆ ಅದು ಅಲ್ಲೇ ಸ್ಥಿರವಾಗಿರುತ್ತದೆ. ಇಂಥದೇ ಕಥೆಯನ್ನು ನಮ್ಮ ಗೋಕರ್ಣದಲ್ಲೂ ಹೇಳುತ್ತಾರೆ.

ತ್ರಿಕೂಟ ಒಂದು ರುದ್ರರಮಣೀಯ ಪ್ರಕೃತಿಯ ತವರು. ಹಿಮ ಆವರಿಸಿದಾಗ ಇದನ್ನು ಛೋಟಾ ಹಿಮಾಲಯ ವೆಂದೂ ಕರೆಯುತ್ತಾರಂತೆ.

ಅಂತೂ ನಾನು, ನನ್ನ ಪತ್ನಿ ಮತ್ತು ಯೋಗಾನರಸಿಂಹ ದಂಪತಿಗಳು ಕಾರಿನಲ್ಲಿ ತ್ರಿಕೂಟ ಪರ್ವತದತ್ತ ಹೊರಟೆವು.

ಅಲ್ಲಿ ತಲುಪಿದಾಗ ಮಾರ್ಗದರ್ಶಿ ಒಬ್ಬ ಬಂದು ಮೇಲೆ ಹೋಗಲು ಮೆಟ್ಟಲುಗಳು ಇದ್ದರೂ ಇಲ್ಲಿ ವಿಪರೀತ ಕೋತಿಕಾಟ ಇರುವುದರಿಂದ ಹೊಸದಾಗಿ ಬಂದವರು ಕೇಬಲ್ ಕಾರಿನಲ್ಲಿ ಹೋಗುವುದು ಉತ್ತಮ ಮಾರ್ಗವೆಂದೂ ಟಿಕೇಟಿನ ಮೊತ್ತದ ಜತೆ ನೂರ ಐವತ್ತು ರೂಪಾಯಿ ಕೊಟ್ಟರೆ ತಾನು ಬಂದು ಮಾರ್ಗದರ್ಶನ ಮಾಡುವುದಾಗಿಯೂ ಹೇಳಿದ. ನಮಗೂ ಅದು ಸರಿಯೆಂದು ತೋರಿತು. ಅಪರಿಚಿತ ಸ್ಥಳದಲ್ಲಿ ನಮ್ಮ ಸ್ವಂತ ಬುದ್ಧಿಯ ಪ್ರಯೋಗ ಬೇಡವೆನಿಸಿ ಅವನೊಂದಿಗೆ ಹೊರಟೆವು. ಆಗ ಮಧ್ಯಾಹ್ನ ಮೂರು ಮೂರೂಕಾಲು ಸಮಯ. ಕೇಬಲ್ ಕಾರಿನಲ್ಲಿ ಕುಳಿತು ಪರ್ವತದ ಶೃಂಗ ತಲುಪಿದೆವು. ಬಹಳ ಸುಂದರ ನೋಟ, ಭರ್ರನೆ ಬೀಸುವ ಗಾಳಿ, ಸುತ್ತಲೂ ಹಸಿರು, ಪುರಾಣ ಇತಿಹಾಸದ ಕುರುಹುಗಳು ಎಲ್ಲವನ್ನೂ ಅನುಭವಿಸಿ ದೇವಘರ್‌ಗೆ ವಾಪಸು ಬಂದೆವು.

ಅಂದು ರಾತ್ರಿ ಮತ್ತು ಮಾರನೆಯ ದಿನ ಬೆಳಿಗ್ಗೆ ಬಾಬಾ ವೈದ್ಯನಾಥ ಧಾಮಕ್ಕೆ ಹೋಗಿ ದರ್ಶನ ಹಾಗೂ ಪ್ರಸಾದ ಪಡೆದು ಹತ್ತು ಗಂಟೆಯ ಹೊತ್ತಿಗೆ ಪಟ್ನಾದತ್ತ ಚಲಿಸಿದೆವು. ಏಳು ಗಂಟೆಯ ಪ್ರಯಾಣದ ನಂತರ ಪಟ್ನಾದ ಬುದ್ಧ ಇನ್ ಹೋಟೆಲ್ ತಲುಪಿ ವಿಶ್ರಾಂತಿ ಪಡೆಯುತ್ತಿದ್ದೆವು.

ಇದ್ದಕ್ಕಿದ್ದಂತೆ ನನ್ನ ಮೊಬೈಲಿಗೆ ಒಂದು ಫೋನ್. ರಾಜಗಿರ್‌ವರೆಗಿನ ಪ್ರವಾಸದಲ್ಲಿ ನಮ್ಮ ಸಹಪ್ರವಾಸಿಯಾಗಿದ್ದ ರುದ್ರಮುನಿಯವರದ್ದು. "ಆರಾಮೇನ್ರಿ ಸಾಹೇಬರಾ?" ಎಂದು ಆತಂಕದಲ್ಲೇ ಕೇಳಿದರು.

"ಚೆನ್ನಾಗಿದ್ದೇವೆ ಮಾಸ್ತರ್ರೆ" ಎಂದು ಉತ್ತರಿಸಿದೆ.

"ನಿಮಗೇನೂ ಅಪಾಯ ಆಗಿಲ್ಲ ತಾನೇ, ನೀವು ಅಕ್ಕಾವ್ರು,, ನಿಮ್ಮ ಜತೆ ಹೊರಟಿದ್ದ ಯೋಗಣ್ಣ, ಅವರ ಮನಿಯಾಕೆ ಎಲ್ಲ ಕ್ಷೇಮ ಹೌದಲ್ಲೋ?"

ನನಗೇಕೋ ರುದ್ರಮುನಿಯವರು ಕುಶಲೋಪರಿ ವಿಚಾರಿಸಿದ ರೀತಿಯೇ ವಿಲಕ್ಷಣವಾಗಿ ಕಂಡಿತು.

"ಎಲ್ಲ ಚೆನ್ನಾಗಿದ್ದೇವೆ. ಹೋಟೆಲಿನಲ್ಲಿ ಕೂತು ಆರಾಮಾಗಿ ಕಾಫಿ ಕುಡೀತಾ ಇದ್ದೀವಿ, ಏನು ಸಮಾಚಾರ?" ಕೇಳಿದೆ.

"ಅಲ್ರಪಾ, ನಿಮಗೆ ವಿಷಯ ಗೊತ್ತಿಲ್ಲೇನು?'' ಎಂದು ಕೇಳಿದರು.

"ಯಾವ ವಿಷಯ?" ಕೇಳಿದೆ.

''ನೀವು ದೇವಘರ್ ಹತ್ತಿರ ತ್ರಿಕೂಟ ಪರ್ವತಕ್ಕೆ ಹೋಗಬೇಕು ಅಂದಿದ್ದೀರಿ. ಹೋಗಿದ್ದರೇನು?"



"ಮೊನ್ನೆ ಹೋಗಿದ್ದೆವು."

"ಎಷ್ಟು ಹೊತ್ತಿಗೆ?"

''ಮೂರು ಗಂಟೆ ಹದಿನೈದು ನಿಮಿಷದ ಹೊತ್ತಿಗೆ'' ಎಂದೆ.

"ನಾಲ್ಕೂವರೆ ಹೊತ್ತಿಗೆ ಅಲ್ಲಿ ಎರಡು ಕೇಬಲ್ ಕಾರುಗಳು ಢಿಕ್ಕಿ ಹೊಡೆದು ಇಬ್ಬರು ಸತ್ತಿದ್ದಾರಂತೆ. ಕೇಬಲ್ ಕಾರಿನಲ್ಲಿ ಸಿಕ್ಕಿದವರನ್ನು ಹೊರತರಲು ಇಂಡಿಯನ್ ಏರ್‌ಫೋರ್ಸ್ ಹೆಲಿಕಾಪ್ಟರು ಬಂದಿದೆಯಂತೆ. ಕೆಲವರು ನಲವತ್ತು ಗಂಟೆ ಕಾಲ ಕೇಬಲ್ ಕಾರಿನಲ್ಲೇ ಸಿಕ್ಕಿಬಿದ್ದರಂತೆ. ರಕ್ಷಣೆ ಮಾಡುವಾಗ ಒಬ್ಬ ಹೆಣ್ಣುಮಗಳು ಹೆಲಿಕಾಪ್ಟರಿನಿಂದ ಬಿದ್ದು ಸತ್ತಳಂತೆ. ಇವು ಯಾವುದೂ ನಿಮಗೆ ತಿಳೀದೆ?"

ನಾವು ನಾಲ್ಕು ಗಂಟೆಗೆ ಪರ್ವತದ ತುದಿಯಿಂದ ವಾಪಸಾಗಿದ್ದೆವು. ಮುಂದಿನ ಟ್ರಿಪ್ಪಿನಲ್ಲಿ ಈ ದುರಂತ ಸಂಭವಿಸಿತ್ತು. ರುದ್ರಮುನಿಯವರಿಗೆ ವಿವರಿಸಿದೆ.

"ಬಾಬಾ ವೈದ್ಯನಾಥನೇ ನಿಮ್ಮನ್ನ ಕಾಪಾಡಿದ ಬಿಡ್ರಿ. ಕ್ಷೇಮವಾಗಿ ಬೆಂಗಳೂರಿಗೆ ಬರ್ರಿ" ಎಂದು ಫೋನ್ ಇಟ್ಟರು.

ಅಂದರೆ ನಮಗೂ ಅಪಘಾತಕ್ಕೂ ಕೇವಲ ಇಪ್ಪತ್ತು ನಿಮಿಷದ ಅಂತರ ಅಷ್ಟೆ. ಯೋಗಾನರಸಿಂಹ ಅವರಿಗೆ ಈ ವಿಷಯ ತಿಳಿಸಿದಾಗ ಅವರು, "ಅಲ್ಲಿಗೆ ಬರಲು ನನಗೆ ಅರ್ಧ ಮನಸ್ಸು ಇತ್ತು. ಅದು ಈಗ ನಿಜ ಅನ್ನಿಸ್ತಾ ಇದೆ. ಹೋಗ್ಲಿಬಿಡಿ ನಾವು ಅಲ್ಲಿ ಸಿಕ್ಕಿಕೊಳ್ಳಲಿಲ್ಲವಲ್ಲ" ಎಂದರು.

ನಾವು ಪರ್ವತ ಪ್ರದೇಶಗಳಿಗೆ ಪ್ರವಾಸ ಹೋದಾಗ ಕೇಬಲ್ ಕಾರ್, ಟ್ರಾಲಿಗಳಲ್ಲಿ ಹೋಗುವುದು ಸಾಧಾರಣವಾದ ವಿಷಯವೇ. ದಿನಪತ್ರಿಕೆ ಓದದೆ ಟಿವಿ ನೋಡದೆ ಇದ್ದುದರಿಂದ ನಮಗೆ ಆ ದುರಂತದ ವಿಷಯವೇ ತಿಳಿದಿರಲಿಲ್ಲ.

ವಾಪಸು ಬರುವಾಗ ಪಟ್ನಾ ಏರ್‌ಪೋರ್ಟಿನ ಟಿವಿಯಲ್ಲಿ ದುರಂತದ ದೃಶ್ಯ ಬಿತ್ತರವಾಗುತ್ತಿತ್ತು. ಹೆಲಿಕಾಪ್ಟರಿನಿಂದ ಬಿಸಾಡಿದ ಹಗ್ಗ ಹಿಡಿದು ಕೊಳ್ಳಲಾಗದ ವಯಸ್ಸಾದ ಮಹಿಳೆ ಜಾರಿ ಜನ ನೋಡುತ್ತಿದ್ದಂತೆಯೇ ಬಿದ್ದು ಸತ್ತದ್ದು ಎದೆ ನಡುಗಿಸುವಂತಿತ್ತು. ಸದ್ಯ! ಈ ದುರಂತ ನಾಟಕದಲ್ಲಿ ನಾವು ಪಾತ್ರಧಾರಿಗಳಾಗಲಿಲ್ಲ ಎಂಬುದೇ ಸಮಾಧಾನ.

*****

ಸಣ್ಣ ಕತೆ

ಕಾರ್ಮೋಡದಲ್ಲೊಂದು ಸೂರ್ಯಕಿರಣ

– ನಾಗರತ್ನ ಚಂದ್ರಶೇಖರ್

"ಮದುವೆಯಾಗಿ ಮೂರು ವರ್ಷ ಆಯ್ತಲ್ಲ, ಏನೂ ಸಮಾಚಾರ ಇಲ್ವ" ಈ ಮಾತುಗಳನ್ನು ಸೀತಕ್ಕನಿಗೆ ನೆಂಟರಿಷ್ಟರಿಂದ ಆಗಾಗ್ಗೆ ಕೇಳಿಸಿಕೊಂಡು ಬೇಸರವಾಗಿತ್ತು.

"ಈಗಿನ ಕಾಲದ ಮಕ್ಕಳು, ನಾವು ಏನೂ ಹೇಳಕ್ಕಾಗಲ್ಲಮ್ಮ, ಮಗ, ಸೊಸೆ ಇಬ್ಬರೂ ವಿದ್ಯಾವಂತರು, ಉದ್ಯೋಗಸ್ಥರು, ಅವರೇ ನಿರ್ಧರಿಸಿಕೊಳ್ಳುತ್ತಾರೆ" ಎಂದು ಸಿದ್ಧ ಉತ್ತರವನ್ನು ಕೊಡುತ್ತಲೇ ಇದ್ದರು.

"ಈಗ್ಲೇ ಮಕ್ಕಳು, ಮರಿ ಅಂತ ಮಾಡ್ಕೊಂತಾ ಕೂತರೆ ಕೆರಿಯರ್ ಗತಿ ಏನು? ಅಷ್ಟೊಂದು ಓದಿ, ರಾಂಕ್ ಪಡೆದು ಈಗ ತಾನೇ ಕೈ ತುಂಬಾ ಸಂಬಳ ಬರ್ತಾ ಇರೋ ಜಾಬ್ ಗತಿ ಏನು?" ಇಂತಹ ಆಲೋಚನೆಯನ್ನೇ ಗಟ್ಟಿಯಾಗಿ ಹಿಡಿದುಕೊಂಡಿದ್ದ ಮಾಧುರಿಯ ದಿಕ್ಕು ತಪ್ಪಿಸುವ ಸಂದರ್ಭ ಒದಗಿಯೇಬಿಟ್ಟಿತ್ತು.

"ಏಯ್... ಕಂಗ್ರಾಟ್ಸ್ ಕಣೆ, ವರ್ಕ್ ಫ್ರಂ ಹೋಂ ಪ್ರಾಡಕ್ಟ್ ಅಂತೂ ಲಾಂಚ್ ಆಯ್ತಲ್ಲ, ತುಂಬಾ ಸಂತೋಷ" ಮಾಧುರಿಯ ಆಪ್ತ ಗೆಳತಿ ಎರಡು ಮಕ್ಕಳ ತಾಯಿಯಾಗಿದ್ದ ರೋಹಿಣಿಯು ಅಭಿನಂದನೆಗಳನ್ನು ತಿಳಿಸಿ ಸಂಭ್ರಮಿಸಿದ್ದಳು.

"ನನ್ನ ಕಷ್ಟ ನನ್ಗೆ, ಕರೋನ ಅಂತ ಮನೆಕೆಲಸದವರನ್ನು ಬಿಡಿಸಿಬಿಟ್ಟಿದ್ದೇವೆ. ಅಪ್ಪ ಅಮ್ಮನ ಮನೆಗೂ ಹೋಗೋಕಾಗದಷ್ಟು ದೂರ. ನಮ್ಮತ್ತೆಗೆ ತುಂಬಾ ಕಷ್ಟವಾಗುತ್ತೆ, ಕಣೆ. ಗರ್ಭ ತೆಗೆಸಿಕೊಂಡುಬಿಡೋಣ ಅಂದ್ರೆ, ನನ್ನ ಗಂಡ ಬೇಡಾ ಅಂತಾನೆ".

"ಛೆ, ಛೆ...ಹಾಗೆ ಮಾತ್ರ ಮಾಡ್ಬೇಡ, ಸ್ವಲ್ಪ ಎಚ್ಚರಿಕೆಯಿಂದಿದ್ದರೆ ಸಾಕು, ಹೇಗೂ ಕರೋನಾದಿಂದಾಗಿ ಮನೆಯಿಂದ ಹೊರಗಿನ ಸುತ್ತಾಟ, ತಿನ್ನೋದು ಎಲ್ಲಾ ಬಂದ್ ಆಗಿದೆಯಲ್ಲ, ನಿಮ್ಮತ್ತೆ ಬೇರೆ ಒಳ್ಳೆ ರುಚಿರುಚಿಯಾದ ರಸಗವಳ ಮಾಡ್ತಾರೆ, ಏನೂ ತಾಪತ್ರಯವಾಗಲ್ಲ. ನಮ್ಮ ಫ್ಯಾಮಿಲಿ ಡಾಕ್ಟರ್ ಸುವರ್ಣ ಅವರನ್ನೂ ಪರಿಚಯಿಸುತ್ತೇನೆ, ಒಳ್ಳೇ ಗೈನಕಾಲಜಿಸ್ಟ್, ಶಿ ವಿಲ್ ಟೇಕ್ ಕೇರ್ ಆಫ್ ಯು." ಆಪ್ತ ಗೆಳತಿಯ ಭರವಸೆಯಿಂದ ಸ್ವಲ್ಪ ಗೆಲುವಾದಳು ಮಾಧುರಿ. ಶುಭ ಸಮಾಚಾರ ತಿಳಿದರೂ ಅದು ವೈದ್ಯರಿಂದ ಖಚಿತವಾದ ಮೇಲಷ್ಟೇ ಹೊರಗೆ ಸುದ್ದಿ ತಿಳಿಸಬೇಕು ಎಂದು ಮಗ, ಸೊಸೆಯ ತಾಕೀತಿನಂತೆ ಸೀತಕ್ಕನಿಗೆ ಮೊಮ್ಮಗುವಿನ ಕಾಣಲು ಯಾರು ಅಡ್ಡಿ ಮಾಡಿಯಾರು?

ತೆಳ್ಳಗೆ ಬಳುಕುವ ಬಳ್ಳಿಯಂತಿದ್ದ ಮಾಧುರಿಗಂತೂ ದಿನೇದಿನೇ ಉಬ್ಬುತ್ತಿದ್ದ ಹೊಟ್ಟೆಯೊಳಗಿರಬಹುದಾದ ಕೂಸಿನ ಭವಿಷ್ಯದ ಚಿಂತೆ. ಹೈದರಾಬಾದಿನಲ್ಲಿದ್ದ ಅಮ್ಮನ ಜೊತೆ ಕಾಲ ಕಳೆಯಬೇಕೆಂಬ ಬಯಕೆಗೆ ಹಲವಾರು ಅಡ್ಡಿ, ಆತಂಕಗಳು. ಒಂದು ರೀತಿಯ ಸೆಂಟ್ರಲ್ ಜೈಲಿನ ಖೈದಿಯಂತೆ ಹೆಜ್ಜೆ ಹೆಜ್ಜೆಗೂ ಎಚ್ಚರಿಕೆಯಿಂದ ತನ್ನ ಸುತ್ತಲೂ ಗೋಡೆಯೊಂದನ್ನು ನಿರ್ಮಿಸಿದ ಕಟ್ಟುಪಾಡಿನೊಳಗೆ ನಗುವುದೋ, ಅಳುವುದೋ ತಿಳಿಯದೆ ಚಡಪಡಿಸುತ್ತಿದ್ದಳು ಮಾಧುರಿ. ಇಷ್ಟು ವರ್ಷ ತಾಯ್ತನವನ್ನು ಮುಂದೂಡಿ ಈಗ ಇಂತಹ ಸಂದರ್ಭದಲ್ಲಿ ಗರ್ಭ ಧರಿಸಿ ತಪ್ಪು ಮಾಡಿದೆನೇನೋ ಎನ್ನುವ ತಪಿತಸ್ಥ ಮನೋಭಾವ. ಸೀತಕ್ಕನ ಮಾತೃ ಹೃದಯ ಪರಿಚಯವಿದ್ದವರಿಗೆ ಮಾಧುರಿಯು ಅವರ ಸೊಸೆಯಲ್ಲ, ಮಗಳೇ ಅನ್ನುವಷ್ಟು ಭರವಸೆ. ಅಕ್ಕಪಕ್ಕದವರಿಗೆ ಸೀತಕ್ಕನ ಅಡುಗೆಮನೆಯಿಂದ ಹೊರಬರುವ ವೈವಿಧ್ಯತೆಯ ರುಚಿ ಪಾಕಗಳ ಪರಿಮಳ ಮಾಧುರಿಯ ಅದೃಷ್ಟ, ಪುಣ್ಯದ ಲೆಕ್ಕ ಹೇಳುತ್ತಿದ್ದವು.

ಈ ಸಂದರ್ಭದಲ್ಲೇ ಹೈದರಾಬಾದಿನಲ್ಲಿದ್ದ ಮಾಧುರಿಯ ಅಜ್ಜಿಗೆ ಆರೋಗ್ಯ ಏರುಪೇರಾಗಿ ತೀರಿಹೋಗಿದ್ದರು. ನಿಬಂಧನೆಯಂತೆ ಶವ ಪರೀಕ್ಷೆ ಮಾಡಿದ ಮೇಲೆ ಕರೋನಾ ಪಾಸಿಟಿವ್ ಎಂದು ತಿಳಿದು ಶವಸಂಸ್ಕಾರ ಸರ್ಕಾರದ ನಿಯಮದಂತೆ ಮಣ್ಣು ಮಾಡಲಾಗಿತ್ತು. ಮನೆಯವರೆಲ್ಲಾ ಕ್ವಾರೆಂಟೈನ್‌ಗೆ ಒಳಗಾಗಿದ್ದರು.

ಮಾಧುರಿಯ ಆರೋಗ್ಯದ ದೃಷ್ಟಿಯಿಂದ ವಿಷಯವನ್ನು ಮುಚ್ಚಿಡಲೇಬೇಕಿತ್ತು. ಅವಳು ಆಗಾಗ ಅಜ್ಜಿಯಂದ ಮಗುವಿಗೆ ಎಣ್ಣೆ ಸ್ನಾನ ಮಾಡಿಸುವ ವಿಚಾರ ಹೇಳುತ್ತಿದ್ದಳು ಬೇರೆ.

ಪಡವಲಕಾಯಿಯಂತಿದ್ದ ಮಾಧುರಿ ಬೂದುಕುಂಬಳಕಾಯಿಯಂತಾಗಿದ್ದು ಅತ್ತೆಯವರ ಕಾಳಜಿ, ಆರೈಕೆಯಿಂದ ಎಂದು ಎಲ್ಲರೂ ಅಂದುಕೊಂಡಂತೆ ಇರಲಿಲ್ಲ ಪರಿಸ್ಥಿತಿ. ಅವಳ ಗರ್ಭದಲ್ಲಿ ಅವಳಿ ಮಕ್ಕಳಿರುವರೆಂಬ ಸುದ್ದಿ ಕೇಳಿ ಎಲ್ಲರಿಗೂ ಮತ್ತಷ್ಟು ಆತಂಕ.

"ವರ್ಕ್ ಫ್ರಂ ಹೋಂ ರಾತ್ರಿ ಹಗಲು ಮಾಡಿದ್ರಿಂದಲೇ ಈ ಬೋನಸ್ ಕಣೆ ನಿಂಗೆ" ಅಂತ ಗೆಳತಿ ರಾಧಿಕ ಕಿಚಾಯಿಸಿದ್ದಳು. ಒಬ್ಬನೇ ಮಗನ ಇಬ್ಬರು ಮಕ್ಕಳ ಆಗಮನಕ್ಕೆ ಸಿದ್ಧತೆಗಳನ್ನು ಸೀತಕ್ಕ ಈಗ ಮತ್ತಷ್ಟು ವೇಗ, ಶ್ರದ್ಧೆಯಿಂದ ಮಾಡಿ ದಣಿಯುವುದನ್ನು ನೋಡಿ ಮಾಧುರಿಗೂ ಸಂಕಟವಾಗುತ್ತಿತ್ತು. ಸೀಮಂತಕ್ಕಾದರೂ ಅಪ್ಪ, ಅಮ್ಮ, ಅಜ್ಜಿ ಬರುವಂತಿದ್ದರೆ ಚೆನ್ನಾಗಿತ್ತು ಎಂದು ಕೊಳ್ಳುತ್ತಿದ್ದಳು. ಆದರೆ ಬಸ್ಸುಗಳ ಓಡಾಟವೂ ನಿಯಂತ್ರಿತವಾಗಿದ್ದರಿಂದ ಆ ಸಂತೋಷವೂ ಅವಳಿಗೆ ದಕ್ಕಲಿಲ್ಲ ಎಂದುಕೊಂಡೇ ದಿನ ದೂಡಿದಳು. ಯಾವ ಹೆಚ್ಚುವರಿ ಶಾಸ್ತ್ರ ಸಂಪ್ರದಾಯಗಳ ಸಂಭ್ರಮವಿಲ್ಲದೆ ಮನೆಯಷ್ಟಕ್ಕೆ ಮಾಧುರಿಯ ಉಡಿ ತುಂಬಿಸಿ ಶಾಸ್ತ್ರ ಮುಗಿಸಿದ್ದರು.

ಕರೋನಾದ ಭಯಾನಕ ದೃಶ್ಯಗಳು, ಸಾವು ನೋವಿನ ಸುದ್ದಿ ಸಮಾಚಾರಗಳನ್ನು ಮನೆಯಲ್ಲಿದ್ದ ಟಿ.ವಿ., ವೃತ್ತ ಪತ್ರಿಕೆಗಳಿಂದ ದೂರವಿರಿಸುವ ಹರಸಾಹಸ ಮಾಡಿ ಮನೆಯವರು ಹೈರಾಣಾದರು.

"ನಮ್ಮ ಮಕ್ಕಳಿಗೆ ಏನು ಹೆಸರಿಡುವುದು? ಹೆಣ್ಣಾದರೆ ಕರೀನಾ, ಗಂಡಾದರೆ ಕರೋನಾ ಅಂತಲಾ" ಅಂತ ಹಾಸ್ಯ ಮಾಡುತ್ತಿದ್ದವಳಿಗೆ ಈಗ ಎರಡು ಮಕ್ಕಳ ಢಬಲ್ ಧಮಾಕ ಎನ್ನುವ ಹಾಗಾಗಿತ್ತು.

ಗೊತ್ತಾದ ದಿನ, ದಿನ ತುಂಬಿದ ನಂತರ ಡಾ.ಸುವರ್ಣ ಅವರು ಕೆಲಸ ಮಾಡುತ್ತಿದ್ದ ನರ್ಸಿಂಗ್ ಹೋಂನಲ್ಲಿ ಎರಡು ಮುದ್ದಾದ ಪುಟ್ಟ ಶಿಶುಗಳಿಗೆ ಮಾಧುರಿ ತಾಯಿಯಾದಳು. ಒಂದೇ ಪಡಿಯಚ್ಚಿನಂತಿದ್ದ ಮುದ್ದಾದ ತನ್ನ ಮಕ್ಕಳನ್ನು ತೋರಿಸುತ್ತಾ ಗಂಡನಿಗೆ "ಸದ್ಯ ಗಂಡು ಮಗುವಾಗಿದ್ದರೆ ಕರೋನಾ ಅಂತ ಹೆಸರಿಡುವುದು ತಪ್ಪಿತು, ಈಗ ಎರಡೂ ಕರೀನಾಗಳೇ" ಎಂದು ಕಣ್ಣು ಮಿಟುಕಿಸಿದಳು. ಬಾಯೊಳಗೆ ಬೆರಳಿಟ್ಟು ಚೀಪುತ್ತಾ ಬೆಚ್ಚಗೆ ಮಲಗಿದ್ದ ಅವುಗಳನ್ನು ಆಶ್ಚರ್ಯದಿಂದ ನೋಡುತ್ತಿದ್ದವನು "ಅರೇ.....ನಾವೆಲ್ಲಾ ಬಾಯಿ, ಮೂಗು ಮುಚ್ಚಿಕೊಂಡೇ ಆರೇಳು ತಿಂಗಳಿಂದ ಓಡಾಡುತ್ತಿದ್ದೇವೆ, ಆದರೆ ಈ ಬೆರಳು ಚೀಪುವ ಮಕ್ಕಳಿಗೆ ಮುಂದೆ ಮಾಸ್ಕ್ ಹಾಕುವ ಅಭ್ಯಾಸ ಮಾಡೋದು ಹ್ಯಾಗೆ ಮಾಧುರಿ?" ಎಂದು ಕಿಚಾಯಿಸಿದಾಗ ಅಲಿದ್ದವರೆಲ್ಲಾ ಜೋರಾಗಿ ನಕ್ಕರು.

ಪುಟ್ಟ ಮಕ್ಕಳು ಬೆಚ್ಚಿ ಪಿಳಿ ಪಿಳಿ ಕಣ್ಣು ಬಿಟ್ಟವು. ಕಾರ್ಮೋಡದಲ್ಲೊಂದು ಸೂರ್ಯ ಕಿರಣ ಕಂಡಂತಾಗಿತ್ತು.

(ನಮ್ಮ ಬಂಧುಗಳ ಮನೆಯಲ್ಲಿ ನಡೆದ ಘಟನೆಗಳನ್ನು ಒಂದು ಕಥೆಯ ರೂಪದಲ್ಲಿ ಕೊಟ್ಟಿರುವೆ)

*****

ಮುದುಕಿಯ ಮನೆಗೆ ಹೋಗುವೆನು

– ಶಾಂತಿ ವಾಸು

ಹಳೆಯದನು ಮರೆಸದೆ ನೆನಪಿಸುವೆಡೆಗೆ ಹೊರಡಬೇಕಿದೆ, ನಾ ಇನ್ನೊಂದು ಮನೆಗೆ...
ಪ್ರೀತಿಯಿದೆ ಆಸ್ಥೆಯಿದೆ ಅಲ್ಲಿ, ನೋವೂ ಇದೆ. ಅದು ತಿಳಿಯದೇನೆನಗೆ?

ಒಂದು ಮನೆಯಲೆನ್ನ ಮಗುವಾಗಿ ಕಾಣಿಸಿತ್ತು, ಮತ್ತೊಂದರಲಿ ಬಾಲೆಯನು...
ಬೆಡಗಿಯ ಬಚ್ಚಿಟ್ಟ ಅದೇ ಕನ್ನಡಿಯು ಇಂದು ತೋರುತಲಿದೆ, ಚಿಕ್ಕ ಪ್ರಾಯವನ್ನಾರಂಭಿಸಿದ ಮುದುಕಿಯನು...

ಎನ್ನೀ ಮನೆಯ ನೋಡದೆ ಸತ್ತವರು ಸತ್ತರು, ಕಾಯಲಿಲ್ಲ ಎನ್ನನ್ಯಾರೂ ಹೋದವರು ಹೋದರು...
ಬಿಟ್ಟವರ ಬಿಟ್ಟೆ, ಸಿಕ್ಕವರ ಹಿಡಿದಿಟ್ಟೆ, ಪಯಣದಲಿ ಜೊತೆಯಾಗಿ ಈ ಮನೆಗೂ ಬಂದಿಹರನೇಕರು...

ಹೋದವರೆಲ್ಲಿದ್ದರೂ ಎನ್ನ ನೆನೆವಂತೆ, ನೆನೆಯಬೇಕಿದೆ ನಾನೆಲ್ಲರನು, ಈ ಮನೆಯಲಿರುವವರೆಗೆ...
ಬಳಸಿ ಬರುವೆ ಉಳಿಸಿಕೊಳುವೆ ಸೇತುವೆ ಕಟ್ಟಿ ಕಾಪಿಡುವೆನು ಎನ್ನ ನೆನಪನ್ನೆಲ್ಲರಲಿ, ನಾ ಶವವಾಗುವರೆಗೆ...

*****

ಸಣ್ಣ ಕತೆ

ಭಾಗೀರಥಿ

– ಸರಸ್ವತಿ ನಟರಾಜ್

"ಭಾಗೀರಥಿ, ನೀನು ಈ ಮನೆ ಬೆಳಕು. ನೀನು ಒಂದಿನ ಅಲ್ಲಿ ಇಲ್ಲಿ ಹೋದೆ ಅಂದ್ರೆ ಮನೆಯೆಲ್ಲ ಬಣಬಣ ಅನ್ಸುತ್ತೆ ಕಣೆ." ಅಂದಿದ್ದರು ಯಜಮಾನರು ನಾರಾಯಣರಾಯರು.

"ಸುಮ್ಮನಿರಿ ಅಂದ್ರೆ, ಕೇಳಿಸಿಕೊಂಡವರು ಯಾರಾದರೂ ನಗ್ತಾರೆ ಅಷ್ಟೇ. ಅಜ್ಜಿ ತಾತ ಆದ್ರೂ ಇವ್ರಿಬ್ರ ಸರಸ ನೋಡಿ ಅಂತ ತಮಾಷೆ ಮಾಡ್ತಾರೆ" ಅಂದಿದ್ದರು ಯಜಮಾನಿ ಭಾಗೀರಥಿ.

ಹಾಗೆ ಹೇಳುತ್ತಾ ಇದ್ದ ಯಜಮಾನರು ಹೋಗಿ ಆಗಲೇ ವಾರವಾಗಿ ಹೋಗಿದೆ. ವಾಕಿಂಗ್ ಮುಗಿಸಿ ಬಂದು "ಭಾಗಿ, ಸೆಖೆ! ಫ್ಯಾನ್ ಹಾಕು. ನೀರು.. ಬಾಯಾರಿಕೆ" ಅಂದವರು ಅಡುಗೆಮನೆಯಿಂದ ನೀರು ತಂದು ಫ್ಯಾನ್ ಸ್ವಿಚ್ ಹಾಕುವಷ್ಟರಲ್ಲಿ ಕುಸಿದು ಬಿದ್ದಾಗಿತ್ತು.

"ಮ್ಯಾಸಿವ್ ಹಾರ್ಟ್ ಅಟ್ಯಾಕ್" ಎಂದು ಹೇಳಿದರು ಡಾಕ್ಟರ್. ಇನ್ನೂ ಸಾವಿನ ಸುದ್ದಿ ಅರಗಿಸಿಕೊಳ್ಳೋಕೆ ಆಗ್ತಿಲ್ಲ ಭಾಗೀರಥಿಗೆ. "ನೀನೇ ಈ ಮನೆ ಬೆಳಕು ಅಂತ ಉಬ್ಬಿಸುತ್ತಿದ್ದ ಯಜಮಾನ ಭಾಗೀರಥಿಯ ಬಾಳಿನ ಬೆಳಕನ್ನು ಕಸಿದುಕೊಂಡು ಬಿಟ್ಟಿದ್ದ. ನಿಜವೇ ಇದು ನಿಜವೇ! ನೀರು ಬೇಕು ಅಂತ ಕೇಳಿದವರು ನೀರು ತರುವಷ್ಟರಲ್ಲಿ ಇಲ್ಲ ಅಂದ್ರೆ ಏನು ಅರ್ಥ? ಕಾಯಿಲೆ ಇಲ್ಲ, ಬಿದ್ದಿಲ್ಲ, ಒದ್ದಾಡಿಲ್ಲ, ಹೋಗೇಬಿಟ್ರು ಅಂದ್ರೆ?

ಬರುವವರು ಬರ್ತಿದ್ದರು, ಪಕ್ಕ ಕೂತು ಮನಸ್ಸಿಗೆ ತೋಚಿದ್ದನ್ನು ಹೇಳುತ್ತಿದ್ದರು. ಮಗ ಸೊಸೆಯನ್ನು ಮಾತಾಡಿಸಿಕೊಂಡು ಹೋಗುತ್ತಿದ್ದರು. ಅಕ್ಕ, ಭಾವ, ಭಾಗೀರಥಿಯ ತಮ್ಮನ ಹೆಂಡತಿ, ನಾರಾಯಣ ಅವರ ತಂಗಿ, ತಮ್ಮ ಎಲ್ಲ ಬಂದರು. ಅಕ್ಕ ಭಾವ ಇಲ್ಲೇ ಉಳಿದುಕೊಂಡರು. ಉಳಿದವರು ಕಾರ್ಯದ ಹೊತ್ತಿಗೆ 'ಮತ್ತೆ ಬರ್ತೀವಿ' ಅಂದುಕೊಂಡು ಹೋದರು. 'ಬರ್ತೀವಿ' ಅಂತ ಸಾವಿನ ಮನೆಯಿಂದ ಹೋಗುವಾಗ ಹೇಳಬಾರದಲ್ಲ, ಅದಕ್ಕೆ ಕೈ ಸನ್ನೆ, ಕುತ್ತಿಗೆ ಸನ್ನೆಯಿಂದ ಹೇಳಿ ಹೋದರು.

ಮನೆ ದೊಡ್ಡದಾಗಿತ್ತು. ಇಪ್ಪತ್ತು ವರ್ಷದ ಹಿಂದೆ ಸ್ವತಃ ನಾರಾಯಣರಾಯರೇ ನಿಂತು ಕಟ್ಟಿಸಿದ್ದು. ವಿಶಾಲವಾದ ಹಜಾರ, ಎರಡು ರೂಮುಗಳ ಮನೆ. "ಹಜಾರ ಹೇಗೂ ದೊಡ್ಡದಾಗಿದೆ, ಮನೆಯಲ್ಲೇ ಕಾರ್ಯಗಳನ್ನು ಮಾಡೋಣ" ಎಂದ ಮಗ. ಮನೆಯಲ್ಲಿ ಆದ್ದರಿಂದ ತೀರಾ ಹೆಚ್ಚಿನ ಜನರನ್ನು ಕರೆಯುವ ಹಾಗಿಲ್ಲ. ಹಾಗಾಗಿ ನಾರಾಯಣರಾಯರ ಸ್ವಂತ ಸೋದರಿಕೆಯವರು, ಭಾಗೀರಥಿಯ ಸ್ವಂತ ತಂಗಿ, ತಮ್ಮಂದಿರ ಸಂಸಾರ ಒಬ್ಬನೇ ಮಗನ ಅತ್ತೆ ಮಾವ ಎಲ್ಲ ಸೇರಿ ಆಹ್ವಾನಿತರ ಸಂಖ್ಯೆ 24–25ಕ್ಕೆ ನಿಂತಿತು. ಕರೆದಿದ್ದರೆ ಎಪ್ಪತ್ತು ಎಪ್ಪತ್ತೈದು ಜನರಾದರೂ ಬರಬೇಕಿತ್ತು ಎಂದುಕೊಂಡರು ಭಾಗೀರಥಿ ಮನಸ್ಸಿನಲ್ಲೆ. ಮಾತಾಡಲಿಲ್ಲ.

ವೈಕುಂಠ ಮುಗಿದು ಮಾರನೇದಿನ ದೊಡ್ಡವರ ಅಣತಿಯಂತೆ ಪಾಯಸದ ಅಡಿಗೆ ಮಾಡಿ, ಊಟವಾಗಿ ಹೆಣ್ಣು ಮಕ್ಕಳಿಗೆ ಕುಂಕುಮ ಕೊಟ್ಟಳು ಸೊಸೆ ಶಾಂತಿ. ನಂತರ ಮನೆಯಲ್ಲಿ ಉಳಿದವರು ಮಗ–ಸೊಸೆ ಇಬ್ಬರು ಮೊಮ್ಮಕ್ಕಳು, ಭಾಗೀರಥಿ ಅಷ್ಟೇ. ಇಡೀ ಮನೆಯೇ ಬಿಕೋ ಅನ್ನಿಸುತ್ತಿತ್ತು. ನಾರಾಯಣರಾಯರು ಕೂರುತ್ತಿದ್ದ ಸೋಫಾ, ಮಲಗುತ್ತಿದ್ದ ಮಂಚ, ಅವರ ಬಟ್ಟೆಬರೆ ಇದ್ದ ಬೀರು, ಪೇಪರ್ ಓದುತ್ತಾ ಬೆಳಗಿನ ಬಿಸಿಲಲ್ಲಿ ಕುಳಿತಿರುತ್ತಿದ್ದ ಜಗಲಿಯ ಮುಂದಿನ ಕಲ್ಲು ಬೆಂಚು, ಎಲ್ಲಾ ಖಾಲಿಖಾಲಿ ಅನಿಸಹತ್ತಿತು. ಇಡೀ ದಿನಪೂರ್ತಿ ಹೆಂಡತಿಯನ್ನು ವ್ಯಸ್ತರಾಗಿಡುತ್ತಿದ್ದ ವ್ಯಕ್ತಿ ಹೋಗಿ ಭಾಗೀರಥಿಗೆ ಏನು ಮಾಡಲೂ ತೋಚದಾಯಿತು. ವಾಸ್ತವಕ್ಕೆ ಹೊಂದಿಕೊಳ್ಳಲೇ ಬೇಕಾಗಿತ್ತು.

"ಅತ್ತೆ, ಒಬ್ಬರೇ ಮಲಗಕ್ಕೆ ಭಯವಾದರೆ ನಿಮ್ಮ ಮೊಮ್ಮಗಳನ್ನ ಮಲಗಿಸಿಕೊಳ್ಳಿ" ಎಂದಳು ಶಾಂತಿ.

"ಅನನ್ಯಾಕೆ, ಬೇಡ ನಂಗೆ ಭಯವಿಲ್ಲ. ಅವರಿಲ್ಲದಿದ್ದರೆ ಏನಂತೆ. ಇಷ್ಟು ದಿನ ಹೇಗೆ ನಡಿತಿತ್ತೋ ಹಾಗೆ ನಡೀಲಿ." ಅಂದರು ಭಾಗೀರಥಿ.

ಸೊಸೆ ಎದ್ದು ಹೋಗುವಾಗ ಮುಖ ಒಂಥರಾ ಆಗಿತ್ತಾ ಅಥವಾ ನನ್ನ ಭ್ರಮೆಯೋ ಅನ್ನಿಸಿತು. ತಲೆ ಕೆಡಿಸಿಕೊಳ್ಳಲಿಲ್ಲ. ಒಂದು ತಿಂಗಳಾಯಿತು, ಎರಡಾಯಿತು, ತಾಯಿ ಪಕ್ಕ ಬಂದು ಕುಳಿತ ಮಗ.

"ಏನೋ ನರೇಂದ್ರ, ಏನಾದ್ರು ಹೇಳಬೇಕಿತ್ತೇನಪ್ಪಾ?" ಅಂದರು ತಾಯಿ.

"ಅಮ್ಮ, ಆಗ್ಲೇ ಡಿಸೆಂಬರ್ ಮುಗಿತಾಬಂತು. ಮಕ್ಕಳ ಪರೀಕ್ಷೆ ಎರಡೂವರೆಮೂರು ತಿಂಗಳಲ್ಲಿ ಶುರುವಾಗುತ್ತೆ. ಹಾಲಲ್ಲಿ ಗಲಾಟೆ, ಹೋಗೋರು ಬರೋರು. ಇಲ್ಲೇ ಈ ರೂಮಲ್ಲಿ ಅವರಿಬ್ಬರೂ ಇರಲಿ. ಅವರಪಾಡಿಗೆ ಅವರು ಓದಿಕೊಂಡು ಮಲಗುತ್ತಾರೆ. ನಿನಗೊಬ್ಬಳಿಗೆ ಯಾಕಮ್ಮ ಇಷ್ಟು ದೊಡ್ಡ ರೂಮು? ನೀನು ಹಾಲಲ್ಲೇ ಮಲ್ಕೊಳ್ಳುವಂತೆ. ಅಲ್ಲೇ ಒಂದು ಚಿಕ್ಕ ಮಂಚ ಹಾಕ್ಕೊಡ್ತೀನಿ" ಅಂದ ಮಗ. ತಾಯಿ ನರೇಂದ್ರನ ಮುಖ ನೋಡಿದವರು ಮಾತಾಡಲಿಲ್ಲ.

ಮನೆ ಇಪ್ಪತ್ತು ವರ್ಷದ ಹಿಂದೆ ಗಂಡ ಕಟ್ಟಿಸಿದ್ದು. ಈ ಅಷ್ಟೂ ವರ್ಷಗಳಲ್ಲಿ ಪರ ಊರಿಗೆ ಪ್ರವಾಸಕ್ಕೆ, ಬಂಧುಗಳ ಮದುವೆ ಮುಂಜಿಗೆ ಅಂತ ಏಳೆಂಟು ದಿನ, ಎರಡು ಮೂರು ದಿನ ಹೋಗಿದ್ದು ಬಿಟ್ರೆ, ಇಷ್ಟು ವರ್ಷ ಮಲಗಿದ್ದು ಇದೇ ರೂಮಿನಲ್ಲಿ. ಪ್ರತಿಯೊಂದರಲ್ಲೂ ತನ್ನ ಅಭಿರುಚಿಯನ್ನು ಅರಿತುಕೊಂಡು ಯಜಮಾನರು ನೆರವೇರಿಸಿದ್ದು.

"ಭಾಗಿ, ಬಾಡಿಗೆ ಮನೆಯಲ್ಲಿ ಬೆಳಕೇ ಸಾಲದು ಅಂತ ಬೇಜಾರು ಮಾಡ್ಕೋತಿದ್ಯಲ್ಲ ಇಗೋ, ಇಲ್ನೋಡು, ಈ ನಮ್ಮ ರೂಮಿಗೆ ಎರಡೆರಡು ಕಡೆ ಕಿಟಕಿ ಇದೆ. ಎರಡೆರಡು ಬೀರು ಇಡುಸ್ತೀನಿ. ಟ್ರಂಕು, ಹಳೆ ಸೂಟ್‌ಕೇಸ್ ಎಲ್ಲಾದರಲ್ಲೂ ತುಂಬಿಟ್ಕೋತಿದ್ಯಲ್ಲ ಈಗ ಅದೆಲ್ಲ ಬಿಸಾಕು, ಎಲ್ಲಾ ಒಂದೇ ಕಡೆ ಇಟ್ಕೋ. ಬಾಗಿ, ಎಲ್ಲೋದ್ರು ಮನೆಗೆ ಬಂದ್ರೆ ಸಮಾಧಾನ. ನಮ್‌ರೂಮಲ್ಲಿ ಮಲ್ಕೊಂಡ್ರೆ ಹಿತ ಅಲ್ವೇನೇ?" ಎಲ್ಲಾದರೂ ಹೋಗಿದ್ದು ಬಂದರೆ ಗಂಡನ ಮಾತು.

ಆ ಮಾತನ್ನು ಸಂಪೂರ್ಣ ಒಪ್ಪಿಕೊಳ್ಳುತ್ತಿದ್ದರು ಭಾಗೀರಥಿ. 'ಹೌದು ರೀ, ಈ ರೂಮಲ್ಲಿ ಮಲಗಿದ್ರೆ ನಿದ್ರೆ ಬರೋ ಹಾಗೆ ಇನ್ನೆಲ್ಲೂ ಬರಲ್ಲ'

ಈಗ ಅವರಿಲ್ಲ. ದೊಡ್ಡ ಮಂಚದ ಮೇಲೆ ನಾನೊಬ್ಬಳೇ ಮಲಗ್ತಾಯಿದ್ದೀನಿ. ಊಹೂ ನಾನೊಬ್ಳೆ ಅಲ್ಲ, ಪಕ್ಕದಲ್ಲಿ ಅವರು ಮಲ್ಕೊಂಡಿದ್ದಾರೆ ಅಂತಾನೇ ಅನ್ಸುತ್ತೆ. ಮನದಲ್ಲೇ ಅವರ ಜೊತೆ ಮಾತಾಡ್ತೀನಿ. ಈಗ ಇದರಿಂದ ದೂರ ಹೋಗ್ಬೇಕಾ! ಊಹೂ ಆಗಲ್ಲ ಅಂದ್ರೆ ಮಗ ಏನ್ ಮಾಡಬಹುದು? ನನಗೆ ಯಾಕೆ ಇದನ್ನ ವಿರೋಧಿಸಕ್ಕೆ ಆಗ್ತಾ ಇಲ್ಲ? ಮೊದಲಿಂದಲೂ ಅಷ್ಟೇ, ಯಾರು ಏನು ಹೇಳಿದ್ರೂ ಮೂಕಬಸವನ ಹಾಗೆ ತಲೆ ಅಲ್ಲಾಡಿಸುವುದೇ ಆಯಿತು. ಒಳ್ಳೆ ಗಂಡ ಸಿಕ್ಕಿದ್ರು, ಸರಿ ಹೋಯಿತು. ತನ್ನ ಇಚ್ಛೆ-ಅನಿಚ್ಛೆ ಎಲ್ಲ ತಿಳ್ಕೊಂಡು ನಡೆಯುವರು. ಅಕಸ್ಮಾತ್ ತನ್ನ ಮನಸ್ಸಿಗೆ ಬೇಜಾರಾಗಿದೆ, ಆದರೂ ಹೇಳಿಲ್ಲ ಅಂದ್ರೆ ಒಮ್ಮೊಮ್ಮೆ ರೇಗೋರು ಸಣ್ಣಗೆ. "ಬಾಗಿ, ನಿನ್ನ ಮನಸಲ್ಲಿ ಹೀಗೆ ನಡಿಬೇಕು ಅಂತಿದ್ರೆ ಹೇಳೋಕೆ ಏನು? ಅದೂ ನನ್ನ ಹತ್ರ? ಎಲ್ಲಾನು ತಿಳ್ಕೊಂಡೆ ಮಾಡು ಅಂದ್ರೆ ಹೇಗೆ?" ಅಷ್ಟಕ್ಕೆ ತನ್ನ ಕಣ್ಣಿನಲ್ಲಿ ನೀರು ಹನಿಕುತಿತ್ತು. ಗಂಡ ಕರಗಿಬಿಡೋರು. "ನೀನು ಇಷ್ಟು ಮೆತ್ತಗಿದ್ರೆ ಹೇಗೆ ಬಾಗಿ? ನೀನು ಗಟ್ಟಿಯಾಗಬೇಕು, ನಾಳೆ ಏನೇ ಕಷ್ಟ ಬಂದರೂ ಎದುರಿಸೋಕೆ ತಯಾರಾಗಿರಬೇಕು".

"ನೀವು ಇರುವಾಗ ನಂಗೇನು ಕಷ್ಟ, ಬಿಡಿ ಅಂದ್ರೆ? ಮನೆ ಯಜಮಾನಿಕೆ ನಿಮ್ಮದು. ಇನ್ನೇನು ಮಗನು ಕೈಗೆ ಬರ್ತಿದ್ದಾನೆ ಅವನಿಗೊಂದು ಮದುವೆ ಮಾಡಿದರೆ ಆಯಿತು. ಮಗ ಸೊಸೆಗೆ ಮನೆ ಜವಾಬ್ದಾರಿ ಒಪ್ಪಿಸಿ ನಾವಿಬ್ರೂ ಅಲ್ಲಿ ಇಲ್ಲಿ ಹೋಗಿ ಬರೋಣ."

ತನಗೆ ಅರ್ಥವಾಗಿರಲಿಲ್ಲ. ತನ್ನ ಮನಸ್ಸಿಗೆ ಒಮ್ಮೆಯೂ ಬಂದಿರಲಿಲ್ಲ. 65 ಸಾಯುವ ವಯಸ್ಸೇ? ಇನ್ನೂ ತಮ್ಮ ಬಂಧು ಬಳಗದ ಎಪ್ಪತ್ತು, ಎಪ್ಪತ್ತೈದು, ಎಂಬತ್ತು ವರ್ಷದ ಎಷ್ಟೋ ಜನ ಇದ್ದಾರೆ. ಗಂಡ ಆರೋಗ್ಯವಾಗಿದ್ದರು. ಊಟದಲ್ಲಿ ಹಿತ ಮಿತ. ಹಾಗಂತ ತೀರಾ ಆಸೆ ಬಿಟ್ಟವರಲ್ಲ. ಬೇಕಾದ್ದು ಮಾಡಿಸಿಕೊಂಡು ತಿನ್ನುತ್ತಿದ್ದರು. ಆದರೆ ಎಲ್ಲ ಮಿತಿಯಲ್ಲಿ. ಈಗ ಇನ್ನೂ ಮೂರು ತಿಂಗಳು ಆಗಿಲ್ಲ. ಆಗಲೇ ಮಗನಿಗೆ ತನ್ನ ಕೊಠಡಿಯ ಮೇಲೆ ಕಣ್ಣು. ಏನು ಹೇಳಲಿ? ಇದಕ್ಕೇನು ಹೇಳಲಿ? ಮಗ ತನ್ನ ಉತ್ತರವನ್ನೇ ನಿರೀಕ್ಷಿಸುತ್ತಿದ್ದಾನೆ. ಅಷ್ಟರಲ್ಲೇ ಸೊಸೆ ಕರೆದ್ಲು. ಮಗ "ನೋಡಮ್ಮ ಯೋಚನೆ ಮಾಡು" ಅಂತ ಹೇಳಿ ಹೊರಟುಹೋದ.

ಒಳಗೆ ಒಂಥರ ಸಂಕಟ ಶುರುವಾಯಿತು. ತುಂಬಾ ಅತ್ತಿಲ್ಲ ನಾನು. ಅವರಿಲ್ಲದ ಭಾವ ಮನದೊಳಗೆ ಆವರಿಸಿದ್ದರೂ ಅತಿಯಾಗಿ ಅಳು ಬರುತ್ತಿಲ್ಲ. ತನಗೆ ದುಃಖವಾಗಿಲ್ಲವೇ! ಮನೆಮನ ಎರಡು ಇಡಿಯಾಗಿ ಖಾಲಿ ಖಾಲಿ ಅನಿಸುತ್ತಿದೆ. ಮಂಕು ಬಡಿದಂತೆ ಆಗಿದೆ. ಕ್ಷಣಕ್ಷಣವೂ ಭಾಗೀ ಭಾಗೀ ಎಂದು ಕರೆಯುತ್ತಿದ್ದ ಅವರಿಲ್ಲದೆ ಮನಸು ತಹತಹ ಅನ್ನುತ್ತಿದೆ. ಅಳು ಯಾಕೆ ಅಷ್ಟಾಗಿ ಬರುತ್ತಿಲ್ಲ, ಅರ್ಥವಾಗುತ್ತಿಲ್ಲ. ಅವತ್ತೆಲ್ಲ ಮತ್ತೆ ಆ ಮಾತು ಬರಲಿಲ್ಲ. ಮಗ ಮಕ್ಕಳು, ಕೆಲಸಕ್ಕೆ-ಶಾಲೆಗೆ ಹೋದಮೇಲೆ ಸೊಸೆ ಹೆಚ್ಚೇನು ಮಾತಿಲ್ಲ. ಅವಶ್ಯಕತೆ ಇದ್ದಾಗ ಅಷ್ಟೇ ಮಾತು. ಹೆಚ್ಚಿನ ಕೆಲಸ ಮುಗಿದು ಹೋಗಿರುತ್ತೆ. ಟಿವಿನೋ ನಿದ್ರೆನೋ, ಊಟದ ಸಮಯಕ್ಕೆ 'ಬಡಿಸ್ಲಾ' ಅಂತ ಬರುತ್ತಾಳೆ. 'ನೀನು ಜೊತೆಗೆ ಕೂತ್ಕೋ' ಅಂತ ಭಾಗೀರಥಿ ಹೇಳ್ತಾಳೆ. 'ಇಲ್ಲ ನೀವು ಮಾಡಿ' ಅಂತಾಳೆ. ಆಗಲೂ ಗಂಡ ಊಟಕ್ಕೆ

ಕೂರುತ್ತಿದ್ದ ಜಾಗದ ಖಾಲಿತನ ಭಾಗೀರಥಿಗೆ ಬಡಿಯುತ್ತೆ. ಒಬ್ಬಳೇ ಊಟ ಮಾಡೋದು ಎಂಥ ಹಿಂಸೆ ಅನಿಸುತ್ತೆ. ಸೊಸೆ ತನೊಂದಿಗೆ ಕುಳಿತು ಊಟ ಮಾಡಬಹುದು ಅನ್ನುವ ಸಣ್ಣ ಬಯಕೆ ಅಲ್ಲೇ ಇಂಗಿಹೋಗಿ, ಸೇರಿದಷ್ಟು ಹೆಚ್ಚಿನ ಮಾತುಕತೆ ಇಲ್ಲದೆ ಮುಗಿಸುತ್ತಾಳೆ.

ಎರಡು ದಿನ ಕಳೆದಿತ್ತು. ಹಾಲಿನಲ್ಲಿ ಕುಳಿತು ಧಾರಾವಾಹಿಯನ್ನು ನೋಡುತ್ತಾ ಇದ್ದಳು ಶಾಂತಿ. ಅಲ್ಲೇ ಕುಳಿತುಕೊಂಡು ಓದಿಕೊಳ್ಳುತ್ತಿದ್ದ ಮಗಳು ಅನನ್ಯ ರಪ್ಪೆಂದು ಓದುತ್ತಿದ್ದ ಪುಸ್ತಕ ಕೆಳಗೆ ಹಾಕಿ, "ಸಾಕಮ್ಮ ಟಿವಿ ಆಫ್ ಮಾಡು, ನಾಳೆ ಟೆಸ್ಟ್ ಇದೆ ಓದ್ಕೋಬೇಕು".

ಶಾಂತಿ ಸಿಡಾರ್ ಎಂದಳು. "ಹೋಗಿ ರೂಮಲ್ಲಿ ಓದ್ಕೋಬಾರದ? ನಾ ನೋಡೋದು ಇದೊಂದೆರಡು ಧಾರಾವಾಹಿ. ಅದರ ಮೇಲೂ ಕಣ್ಣಾ?"

ಭಾಗೀರಥಿಗೆ ಆಶ್ಚರ್ಯವಾಗುತ್ತಿತ್ತು. ತಾವು ಮಕ್ಕಳನ್ನು ಬೆಳೆಸಿದ ರೀತಿಗೂ ಈಗ್ಗೂ ಎಂಥಾ ವ್ಯತ್ಯಾಸ. ಅವತ್ತು ರಾತ್ರಿ ಬಹಳ ಹೊತ್ತಿನವರೆಗೂ ನಿದ್ರೆ ಬಾರದೆ ಹೊರಳಾಡಿದಳು. ಗಂಡನ ಮಾತುಗಳು ಕಿವಿಯಲ್ಲಿ ಗುಂಯ್ ಗುಟ್ಟುತ್ತಿತ್ತು.

ಮಾರನೇ ದಿನ ಭಾಗೀರಥಿ ನರೇಂದ್ರನನ್ನು ಕರೆದು 'ಕೂತ್ಕೋ' ಅಂದ್ರು.

"ನೋಡು ನಾವು ನಮ್ಮ ಮಕ್ಕಳನ್ನ ಸಾಕಿದ ರೀತಿಗೂ ಈಗ ನೀವು ಪಡುತ್ತಿರುವ ಅವಸ್ಥೆಗೂ ಬಹಳ ವ್ಯತ್ಯಾಸ ಇದೆ. ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು ನಿಜ. ಹಾಗಂತ ನಾವು ದೊಡ್ಡೋರು ಎಲ್ಲವನ್ನು ತ್ಯಾಗ ಮಾಡಿ ಮಾಡಬೇಕಿಲ್ಲ. ನನ್ನ ಪ್ರಪಂಚ ಅಂದ್ರೆ ಮೊದಲು ಇಡೀ ಮನೆಯಾಗಿತ್ತು. ಈಗ ಒಂದು ರೂಮು ಮಾತ್ರ. ನನ್ನ ಕಷ್ಟ ಸುಖ, ಅಳು, ನಗು, ಓದು, ಪಾರಾಯಣ, ನಿದ್ರೆ ಎಲ್ಲ ಅಲ್ಲೇನೇ. ಅದರ ತಂಟೆಗೆ ನಾನಿರೋತನಕ ದಯವಿಟ್ಟು ಬರಬೇಡ. ಬರೋ ಹೋಗುವವರ ಗಲಾಟೆ ಅಂದೆ. ಈಗ ಯಾರು ಫೋನ್ ಮಾಡದೆ ಬರ್ತಾರೆ ಹೇಳು? ಇಷ್ಟಕ್ಕೂ ಒಬ್ಬರ ಮನೆಗೆ ಒಬ್ಬರು ಹೋಗೋದೇ ಕಮ್ಮಿ. ಟಿ.ವಿ.ನ ರೂಮಲ್ಲಿ ಇಟ್ಕೊಳಿ. ಮಕ್ಕಳು ಹಾಲಿನಲ್ಲೂ ರೂಮಿನಲ್ಲಿ ಓದಿಕೊಳ್ಳಲಿ. ನಿಮ್ಮಪ್ಪನ ಒಂದಿಷ್ಟು ದುಡ್ಡು ತಕ್ಕೊಡ್ತೀನಿ. ಮೇಲೆ ಒಂದು ರೂಮ್ ಹಾಕ್ಸು. ಮಕ್ಕಳು ಓದಿಕೊಳ್ಳಕ್ಕೆ ಅನುಕೂಲ ಆಗುತ್ತೆ. ನನಗೆ ಆಗ ಈಗ ಮಂಡಿ ನೋವು, ಬೆನ್ನು ನೋವು, ಯಾವಾಗ ಅಂದ್ರೆ ಅವಾಗ ಹತ್ತು ನಿಮಿಷ ಅಡ್ಡಾಗೋಣ ಅನ್ಸುತ್ತೆ. ಹಾಲಲ್ಲಿ ಹಂಗೆ ಮಲ್ಕೊಂಡ್ರೆ ಚೆನ್ನಾಗಿರುತ್ತೆಯೇ? ನಾನಿರೋವರೆಗೂ ಈ ರೂಮು ನಮ್ಮಿಬ್ಬರದು ಆಗಿತ್ತು, ಈಗ ಅವರಿಲ್ಲ ಅಂದ ಮಾತ್ರಕ್ಕೆ ಇದನ್ನ ನಂಗೆ ಯಾಕೆ ಅನ್ನೋಕಾಗುತ್ತೆಯೇ? ಇಷ್ಟಕ್ಕೂ ಮಕ್ಕಳಿಗೂ ಅನ್ನಿಸಬಾರದು, ಅಜ್ಜಿ ರೂಮನ್ನ ನಾವಿಟ್ಕೊಂಬಿಟ್ಟೆವು ಅಂತ. ಏನಂತೀ?"

'ಸರಿ' ಅನ್ನೋದು ಬಿಟ್ಟು ಅವನಿಗೂ ಏನೂ ತೋಚಲಿಲ್ಲ.

ಅವಳಿಗೆ ಮಾತ್ರ ಇಷ್ಟು ಮಾತು ನಿಜವಾಗಲೂ ನಾನೇನಾ ಆಡಿದ್ದು ಅಂತ ಆಶ್ಚರ್ಯವಾಗುತ್ತಿತ್ತು.

*****

‘ಕ’ ಕಾರ ಕವನ

–ಶೀಲಾ ಅರಕಲಗೂಡು

ಕನ್ನಡವ ಕಲಿಯುತಿರು ಕನ್ನಡದ ಕಂದನೇ ।
ಕನ್ನಡವೆ ಕಾಯುವುದು ಕಾಪಿಡುವುದಂತೆ ॥
ಕನ್ನಡಕೆ ಕಂಪುಂಟು ಕನ್ನಡಕೆ ಕಳೆಯುಂಟು ।
ಕನ್ನಡದಿ ಕಲಿತಾಡು ಕೂಸೆ ಕಣ್ಮಣಿಯೆ ॥

ಕನ್ನಡದ ಕೈಂಕರ್ಯ ಕಡುಭಾಗ್ಯ ಕಂಡವಗೆ ।
ಕಾತರದಿ ಕಾದಿದ್ದು ಕಲಿಯುವಾತಂಗೆ ॥
ಕರ್ತಾರ ಕಸವರವ ಕೈತುಂಬಿ ಕೊಟ್ಟಂತೆ ।
ಕೊಡುತಿಹುದು ಕನ್ನಡವು ಕೈಚಾಚು ಕೂಸೆ ॥

ಕೇಳಿದ್ದು ಕೊಡುವಂಥ ಕಲ್ಪತರು ಕನ್ನಡವು ।
ಕರುನಾಡಲಿರುವವರು ಕಲಿಯಬೇಕಿದನು ॥
ಕಲಿತಷ್ಟು ಕಡಲಾಳ ಕಂಡಷ್ಟು ಕೋಮಲತೆ ।
ಕಲಿಯುವೆಯ ಕಾಣುವೆಯ ಕರುನಾಡ ಕೂಸೆ ॥

ಕೋಟೆ ಕೊತ್ತಲವಿಹುದು ಕಡಲು ಕಂದಕವಿಹುದು ।
ಕಾಡು ಕಟ್ಟಡ ಕಿಲ್ಲೆ ಕಾಣಲಿಲ್ಲುಂಟು ॥
ಕಾವೇರಿ ಕಣಿವೆಯನು ಕರ್ದಮಿತ ಕವಲನ್ನು ।
ಕಾಂಬಾಸೆ ಕನಸಲ್ಲು ಕೇಳೆನ್ನ ಕೂಸೆ ॥

ಕಪಿಲೆನದಿ ಕೊಡಚಾದ್ರಿ ಕಾಡುಮಲೆ ಕಡಲಾಮೆ ।
ಕೊಲ್ಲೂರು ಕಾಗಿನೆಲೆ ಕೃಷ್ಣೆ ಕಾವೇರಿ ॥
ಕೋಲಾರ ಕುಪ್ಪಳ್ಳಿ ಕೊಡಗು ಕಾಕನಕೋಟೆ ।
ಕರ್ನಾಟಕದ ಕಳಸ ಕಾಣೋಣ ಕೂಸೆ ॥

ಕಾರ್ಮೋಡ ಕಾರಿರುಳು ಕರಿನೆರಳು ಕಪ್ಪುಂಟು ।
ಕಪ್ಪೇನು ಕಸವಲ್ಲ ಕರಿಕೃಷ್ಣ ಕಾಂತಿ ॥
ಕಸ್ತೂರಿ ಕಪ್ಪಂತೆ ಕಾರ್ಮುಗಿಲು ಕರಿಯಂತೆ ।
ಕಾಳಿಂಗ ಕೃಷ್ಣನಿಗೆ ಕರಮುಗಿವ ಕೂಸೆ ॥

ಕಾಡಿನಲಿ ಕೇಸರವು ಕಾಡಾನೆ ಕಿರುಬಗಳು ।
ಕಾಡು ಕೋಣಗಳುಂಟು ಕೀಶ ಕರಡಿಗಳು ॥
ಕರಿಜಾಲಿ ಕಲ್ಗರಿಗೆ ಕಾಸರಕ ಕೋಡಸಿಗ ।
ಕಾಡಿನಲಿ ಕಾಣುವುವು ಕಾಣಿಸಿತೆ ಕೂಸೆ ॥

ಕ್ರಿಮಿ ಕೀಟಗಳ ಕೂಟ ಕಾಣಬಹುದೆಲ್ಲೆಡೆಯು ।
ಕೀಚಕ್ಕಿ ಕೋಗಿಲೆಯು ಕುರವಿ ಕೆಂಜಿರುವೆ ॥
ಕೋಳಿ ಕುಕ್ಕುಟವುಂಟು ಕುರಿ ಕರುಗಳಿಲ್ಲುಂಟು ।
ಕಾಣುವೆಯ ಕಣ್ಬಿಟ್ಟು ಕೂಸೆನ್ನ ಕೂಸೆ ॥

ಕಮಲ ಕನಕಾಂಬರದ ಕುಸುಮ ಕುಲವಿಹುದಿಲ್ಲಿ ।
ಕಾಮಲತೆ ಕೇದಗೆಯು ಕೆಂಗುಲಾಬಿಗಳು ॥
ಕಣಗಿಲೆಯು ಕಾಕಡವು ಕಿಲಕಿಲನೆ ಕಿಸಿಯುತಿರೆ ।
ಕುಳಿತು ಕಾಣೋಣವನು ಕುಳಿತುಕೋ ಕೂಸೆ ॥

ಕೈಕಾಲು ಕಣ್ಣುಗಳು ಕಿವಿ ಕೆನ್ನೆ ಕೇಶಗಳು ।
ಕುತ್ತಿಗೆಯು ಕರುಳುಗಳು ಕಲಿಜ ಕೀಲುಗಳು ॥
ಕಾಳ್ಕಡ್ಡಿ ಕೂಳಿಗಿದೆ ಕುಡಿಯಲಿಕೆ ಕೆನೆಹಾಲು ।
ಕಾಯ ಕೇವಲವಲ್ಲ ಕರುಳಕುಡಿ ಕೂಸೆ ॥

ಕಾಲ್ಗೆಜ್ಜೆ ಕೇಯೂರ ಕೈಬಳೆಗೆ ಕಂಕಣವು ।
ಕಾಲ್ಗಡಗ ಕಿವಿಯೋಲೆ ಕಂಠಿ ಕುತ್ತಿಗೆಗೆ ॥
ಕಣ್ಕಪ್ಪು ಕಣ್ಗಳಿಗೆ ಕಟಿಗುಂಟು ಕಟಿಬಂಧ ।
ಕಿಂಕಾಪು ಕಾಯಕ್ಕೆ ಕೊಡುತಿರುವೆ ಕೂಸೆ ॥

ಕೆಲವು ಕಸುಬುಗಳಿಹವು ಕರಕುಶಲ ಕರ್ಮಗಳು ।
ಕ್ಷೌರಿಕರು ಕೃಷಿಕಾರ ಕುರಿಕಾಯ್ವ ಕುರುಬ ॥
ಕುಂಬಾರ ಕಲ್ಕುಟಿಗ ಕಾರ್ಮಿಕರು ಕರಣಿಕರು ।
ಕರುನಾಡಿಗಾಗಿವರು ಕೊಂಡಾಡು ಕೂಸೆ ॥

ಕಜ್ಜಾಯ ಕರದಂಟು ಕೋಡುಬಳೆ ಕಾಕಂಬಿ ।
ಕೋಸಂಬರಿಗಳಿಹವು ಕುರುಕಲಿಕೆ ಕಾಳು ॥
ಕೂಟು ಕಷಾಯಗಳಿವೆ ಕರಿದ ಖಾರಗಳಿಹವು ।
ಕೂಳಿದುವೆ ಕಾಯಕ್ಕೆ ಕುಳಿತುಣ್ಣು ಕೂಸೆ ॥

ಕೆಲವುಂಟು ಕ್ರೀಡೆಗಳು ಕೋಲಾಟ ಕಲ್ಲಾಟ ।
ಕಬಡಿ ಕಾಲ್ಚೆಂಡಾಟ ಕುಂಟಾಟ ಕೂಟ ॥
ಕವಡೆ ಕಣ್ಮುಚ್ಚಾಲೆ ಕೇರಮ್ಮು ಕುಸ್ತಿಗಳು ।
ಕೀಲ್ಗೊಂಬೆ ಕಥೆಯಾಟ ಕುಣಿದಾಡು ಕೂಸೆ ॥

ಕಾವ್ಯಗಳು ಕಥನಗಳು ಕಾದಂಬರಿಯ ಕೋಠಿ ।
ಕವಿಗೋಷ್ಠಿ ಕಿರುಚಿತ್ರ ಕರುನಾಡ ಕವಿತೆ ॥
ಕವಿ ಕೋವಿದರ ಕಥನ ಕಲಾವಿದರುಗಳ ಕಲೆ ।
ಕೋರೈಸುವಂತಿಹುದು ಕುಳಿತೋದು ಕೂಸೆ ॥

ಕಬ್ಬಿಣದ ಕಡಲೆಯಿದು ಕನ್ನಡವು ಕಲಿಯಲಿಕೆ ।
ಕಷ್ಟವಿದೆ ಕಠಿಣವಿದೆ ಕಲಿಯುವುದದೆಂತು? ॥
ಕೇಳಿಹರು ಕೀಳಾಗಿ ಕಲಿಯಲೊಲ್ಲದ ಕುಜನ ।
ಕೇಳ್ಬೇಡ ಕಟ್ಟುಕತೆ ಕುಸಿಯದಿರು ಕೂಸೆ ॥

ಕೇಳಿಲ್ಲಿ ಕಟುಸತ್ಯ ಕಡಲೆಪುರಿ ಕುರುಕುವೊಲು ।
ಕ್ಷಣದಲ್ಲೆ ಕರಗತವು ಕನ್ನಡವು ಕೂಸೆ ॥
ಕುಳಿತಲ್ಲೆ ಕಲಿಯುತ್ತ ಕಲಿತೊಲಿದು ಕುಣಿಯುತ್ತ ।
ಕುಣಿದು ಕೊಂಡಾಡುತ್ತ ಕಲಿವೆ ಕಲಿ ಕೂಸೆ ॥

ಕನ್ನಡದ ಕಂದಗಳು ಕರುನಾಡ ಕೂಸುಗಳು ।
ಕನ್ನಡವ ಕಲಿಯುತಿಹ ಕಲಿಗಳಿವರಂತೆ ॥
ಕಲಿತೋದಿ ಕುಳಿತಾಡಿ ಕಾವ್ಯಕೃತಿ ಕೋದುತ್ತ ।
ಕನ್ನಡವ ಕಾಪಾಡಿ ಕಾಯುತಿಹರಂತೆ ॥

***

ಸಣ್ಣ ಕತೆ

ಮುಡಿಯಿಂದ ಜಾರಿದ ಹೂವು

– ಎಲ್. ಗಿರಿಜಾ ರಾಜ್

ಎಷ್ಟೋ ಸಲ ಜೀವನದಲ್ಲಿ ಒದಗಿಬರುವ ಅನುಭವಗಳು, ಅವುಗಳಲ್ಲಿ ಇರುವ ಮಾಧುರ್ಯದಿಂದ ರಂಜಿಸುವ ಗುಣ ದಿಂದಲೋ, ಒಮ್ಮೊಮ್ಮೆ ನೋವು, ಬರ್ಬರತೆಯಿಂದಲೋ ಉತ್ತಮ ಕಥೆಗಳಾಗಿ ಅರಳಿಕೊಳ್ಳಲು ಆಸರೆಯಾಗುತ್ತವೆ. ಅಂತ ವಿಭಿನ್ನ, ವಿಚಿತ್ರ ಅನುಭವಗಳಿಗಾಗಿ ಕಾತರಿಸುತ್ತಾ ಅವುಗಳಿಗೆ ಎಂದೂ ಬೆನ್ನು ತಿರುಗಿಸದೆ, ಅಂಥದ್ದನ್ನು ಅಪೇಕ್ಷಿಸುತ್ತಾ ಹುಡುಕಿಕೊಂಡು ಹೋದದ್ದೂ ಉಂಟು. ಸುಂದರ ಉದ್ಯಾನವನಗಳಲ್ಲಿ ಮರದ ಮೇಲಿನಿಂದ ಹೂಗಳು ಉದುರಿ ಸುತ್ತಲೂ ಹಾಸಿಗೆ ನಿರ್ಮಾಣವಾಗಿರುವಂತಹ ಸ್ಥಳ ಆಯ್ದುಕೊಳ್ಳುತ್ತೇನೆ. ಸಿಗುವುದು ಅಪರೂಪ. ಒಮ್ಮೊಮ್ಮೆ ಏನು, ಅನೇಕ ಬಾರಿ ಹಾಗೆ ಸಿಗುವುದೇ ಇಲ್ಲ! ಆಗೆಲ್ಲ ಗಾಳಿ ತಂಪಾಗಿರುವ ಜಾಗಕ್ಕೆ ನನ್ನನ್ನು ಸೀಮಿತಗೊಳಿಸಿ ಬೆಂಚಿನ ಮೇಲೆ ಕುಳಿತುಕೊಳ್ಳುತ್ತೇನೆ. ಕೈಯಲ್ಲಿ ನನ್ನ ಪರಮಾಪ್ತ ಪೆನ್ನು ಇದ್ದೇ ಇರುತ್ತದೆ. ನನ್ನ ಚೀಲದಲ್ಲಿ ಒಂದು ಬಾಟಲಿನಲ್ಲಿ ನೀರು, ಒಮ್ಮೊಮ್ಮೆ ಬಾಳೆಹಣ್ಣು, ಬಿಸ್ಕತ್ತುಗಳು.. ಇನ್ನೊಂದು ಮರೆತೆ... ಮೊಬೈಲ್.. ಯಾರಿಗೂ ಫೋನ್ ಮಾಡುವುದಕ್ಕಲ್ಲ, ಪ್ರಕೃತಿಯ ರಮ್ಯ ದೃಶ್ಯಗಳನ್ನು ಕ್ಯಾಮರಾದಲ್ಲಿ ಸೆರೆಹಿಡಿದು ಆನಂದಿಸುವ ಹುಚ್ಚು ಇತ್ತೀಚೆಗೆ ಹೆಚ್ಚಾಗಿ ಅಂಟಿಕೊಂಡಿದೆ.

ಅಂದೇನೊ ನನ್ನ ಅದೃಷ್ಟ! ಆಕಾಶ ನೀಲಿ ಬಣ್ಣದ ಹೂಗಳು ಮರದ ಸುತ್ತ ಉದುರಿ ಸುಂದರವಾಗಿ ಕಾಣುತ್ತಿತ್ತು. ಅಲ್ಲಿ ಬೆಂಚಿದ್ದುದು ನನಗೆ ಅನುಕೂಲವಾಯಿತು. ನಾನು ಕುಳಿತಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಇನ್ನೊಂದು ಬೆಂಚು.

ತಂಗಾಳಿಯ ಸ್ಪರ್ಶ ಸುಖ ಅನುಭವಿಸುತ್ತಾ ಹತ್ತು ನಿಮಿಷಗಳಾಗಿರಬಹುದು. ಇನ್ನೊಂದು ಬೆಂಚಿನ ಬಳಿಗೆ ದೂರ ಪ್ರಯಾಣದಿಂದ ಬಳಲಿದಂತೆ ಕಾಣುತ್ತಿದ್ದ ಸುಂದರ ಯುವಕನೊಬ್ಬ ಬಂದು, ತನ್ನ ಕೈಯಲ್ಲಿದ್ದ ಲಗೇಜನ್ನು ಬೆಂಚಿನ ಮೇಲೆ ಇಟ್ಟು ಕುಳಿತುಕೊಂಡ. ಅಸ್ತವ್ಯಸ್ತವಾಗಿ ಅತ್ತಿತ್ತ ಚದುರಿದ್ದ ಕ್ರಾಪ್ ಮುಖದಲ್ಲಿ ಬಳಲಿಕೆಯೊಂದಿಗೆ ಯಾವುದೋ ನಿರಾಸೆ, ನೋವು! ಕೆಲ ನಿಮಿಷಗಳ ನಂತರ ಸುತ್ತಮುತ್ತ ಕಣ್ಣಾಡಿಸಿ ನನ್ನ ನೋಡಿ, "ಮೇಡಂ, ಸ್ವಲ್ಪ ನೀರಿದ್ದರೆ ಕೊಡುತ್ತೀರಾ?" ಎಂದ. ನೀರಿನ ಬಾಟಲಿಯನ್ನು ನೀಡುತ್ತಾ, "ಜೊತೆಗೆ ಎರಡು ಬಾಳೆಹಣ್ಣು ತೆಗೆದುಕೊಳ್ಳಿ. ಬೇಡವೆನ್ನಬೇಡಿ, ಊಟ ಮಾಡಿದ ಹಾಗೆ ಕಾಣುವುದಿಲ್ಲ" ಎಂದೆ. ಮತ್ತೆ ಹೇಳಿಸಿಕೊಳ್ಳದೆ ಬಂದು, ಸ್ವೀಕರಿಸಿ "ಥ್ಯಾಂಕ್ಸ್" ಎನ್ನುತ್ತಾ ತನ್ನ ಬೆಂಚಿಗೆ ಹಿಂತಿರುಗಿದ.

ಆಮೇಲೆ ಆತ್ಮೀಯವಾಗಿ ಮಾತನಾಡುತ್ತಾ, "ನನ್ನ ಗೆಳೆಯನೊಬ್ಬ ಬಂದು ನನ್ನನ್ನು ಕರೆದೊಯ್ಯಬೇಕಿತ್ತು. ಅವನೆಲ್ಲೋ ಟ್ರಾಫಿಕ್ನಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ ಎನಿಸುತ್ತದೆ. ರೈಲ್ವೆ ನಿಲ್ದಾಣದಿಂದ ಹೊರಬಂದವನು ಅಲ್ಲೆಲ್ಲಾ ಹೊಗೆ ಧೂಳು ಇದ್ದುದರಿಂದ ಉದ್ಯಾನವನ ಕಾಣಿಸಿ ಈಕಡೆ ಬಂದೆ" ಎಂದ. "ಇಲ್ಲಿ ಏನಾದರೂ ಅನಿವಾರ್ಯ ಕೆಲಸವಿತ್ತೆ?" ಎಂದೆ. ಒಂದು ಕ್ಷಣ ಹೇಳಲೋ ಬೇಡವೋ ಎಂದೋ ಏನೋ ಸುಮ್ಮನಿದ್ದು, ನಂತರ "ನಾನು ಬಂದ ಕಾರಣ ಕೇಳಿದರೆ ನೀವು ಏನೆನ್ನುವಿರೋ, ಅಪ್ಪ-ಅಮ್ಮ ಮದುವೆಯಾಗಲು ಬಲವಂತ ಮಾಡುತ್ತಿದ್ದರು. ಅವರು ತೋರಿಸಿದ ಹೆಣ್ಣುಗಳು ನನಗೆ ಇಷ್ಟವಾಗಲಿಲ್ಲ. ಅವರೋ ಬೇಸತ್ತುಹೋಗಿದ್ದಾರೆ, ಅಮ್ಮ ಕೋಪದಿಂದ ನನ್ನೊಂದಿಗೆ ಮಾತೇ

ನಿಲ್ಲಿಸಿದ್ದಾರೆ. ನಾನೇ ಹುಡುಕಿಕೊಂಡು ಬರುತ್ತೇನೆಂದು ಸೀದ ಮನೆ ಬಿಟ್ಟು ಬಂದುಬಿಟ್ಟೆ. ನನ್ನ ಆತ್ಮೀಯ ಗೆಳೆಯನೊಬ್ಬ ಈ ಊರಿನಲ್ಲಿ ಇದ್ದಾನೆ. ಇಲ್ಲೇ ನನ್ನ ಆಸೆ ಫಲಿಸಬಹುದೇನೋ ನೋಡಬೇಕು" ಎಂದ.

ನಾನು, "ಮುಹೂರ್ತ ಕೂಡಿಬಂದರೆ ಒಳ್ಳೆಯ ಕೆಲಸಗಳು ಆಗಿಬಿಡುತ್ತವೆ ಬಿಡಿ" ಎಂದು ಉತ್ಸಾಹ ತುಂಬಲು ಯತ್ನಿಸಿದೆ. ಆಮೇಲೆ ನಾನು ಮಾತು ನಿಲ್ಲಿಸಿ ಪುಸ್ತಕವೊಂದರಲ್ಲಿ ಮಗ್ನಳಾದೆ. ಏಳೆಂಟು ನಿಮಿಷಗಳಾಗಿರಬಹುದು. ದೂರದಲ್ಲಿ ಯುವತಿಯೊಬ್ಬಳು ಬರುತ್ತಿದ್ದುದು ಕಂಡಿತು. ಯುವಕನಿದ್ದೆಡೆಗೇ ಬರುತ್ತಿರುವುದನ್ನು ಕಂಡು ಅವನು ಕುತೂಹಲಕ್ಕೊಳಗಾದ. ಅವಳು ಬರುತ್ತಿದ್ದ ಬೆಡಗಿಗೇ ಉತ್ಸಾಹ ತಾಳಿದ. ನಾನು ನೋಡು ನೋಡುತ್ತಿದ್ದಂತೆಯೇ ಅವಳು ಅಲ್ಲಿಗೆ ಬಂದು ಅವನ ಪಕ್ಕದಲ್ಲಿಯೇ ಕುಳಿತಳು. ಅವನ ಪಾಡು ದೇವರಿಗೇ ಗೊತ್ತು!

ಯುವಕ ನಖಶಿಖಾಂತ ಬೆವತುಹೋದ. ಅವಳು ಸುಂದರವಾಗಿದ್ದಳು ಮಾತ್ರವಲ್ಲ, ಒಂದು ಮುಗ್ಧ, ಸ್ನಿಗ್ಧ ಕಳೆ ಅವಳ ಮುಖವನ್ನು ಬೆಳಗುತ್ತಿತ್ತು. ಅವಳನ್ನು ನೋಡುತ್ತಾ ಅವನ ಕಣ್ಣುಗಳಲ್ಲಿನ ನಿರಾಶೆಯ ಕಾರ್ಮೋಡಗಳು ಕರಗಲಾರಂಭಿಸಿದವು. ನನ್ನ ಕಷ್ಟಕ್ಕೆ ಸ್ಪಂದಿಸಿ, ಅಚ್ಚರಿ ಆಗಲೆಂದು ನನ್ನ ಗೆಳೆಯನೇ ಕಳುಹಿಸಿಕೊಟ್ಟನೋ ಏನೋ ಎಂದುಕೊಂಡಿರಲೂ ಸಾಕು! ಅವನನ್ನು ನೋಡಿದವಳೇ ನಾಚಿ ತಲೆ ತಗ್ಗಿಸಿದಳು. ಆದರೆ ಹೀಗೆ ಯಾರೋ ಹೆಣ್ಣೊಬ್ಬಳು ಇಷ್ಟು ಧೈರ್ಯವಾಗಿ ಅಪರಿಚಿತ ಪುರುಷನೊಬ್ಬನ ಪಕ್ಕದಲ್ಲಿ ಕುಳಿತರೆ ನಾನಾ ರೀತಿಯ ಅನುಮಾನಗಳು ಬರುವುದಿಲ್ಲವೇ? ಆದರೆ ಯುವಕ ಆ ನಿಷ್ಕಳಂಕ ಮುಖದಲ್ಲಿ ತಲ್ಲೀನನಾಗಿ ಹೋಗಿದ್ದ. ಒಮ್ಮೆಲೇ ಎಚ್ಚೆತ್ತವನಂತೆ "ನೀವು ಯಾರು? ನಿಮ್ಮವರಾರೂ ಇಲ್ಲವೇ?" ಎಂದು ತಡವರಿಸುತ್ತ ಕೇಳಿದ.

ತುಸು ಮುಖ ಮೇಲೆತ್ತಿ ಓರೆನೋಟದಿಂದ ನೋಡುತ್ತಾ "ಇನ್ನೇನು ಬರುತ್ತಾರೆ?" ಎಂದು ನಕ್ಕಳು. ಆ ನಗು ಅವಳ ಮನೋಹರತೆಯನ್ನು ಹೆಚ್ಚಿಸಿತು. ನಂತರ ಅವರಿಬ್ಬರೂ ಪಿಸುಮಾತುಗಳಲ್ಲಿ ಮೈಮರೆತಂತೆ ಕಂಡಿತು. ಯುವಕ ಹೆಚ್ಚು ಉಲ್ಲಾಸಭರಿತನಾದಂತೆ ಕಂಡ. ಮನೆಯನ್ನು ಬಿಟ್ಟು ಕಾಣದ ಊರಿಗೆ ಬಂದವನಿಗೆ ಇಷ್ಟು ಬೇಗ ಆಸೆ ಫಲಿಸಿತೇ? ಹಾರಿ ಕುಣಿದಾಡಿ ಅಪ್ಪ-ಅಮ್ಮನಿಗೆ "ನನ್ನ ಹುಡುಗಿ ಸಿಕ್ಕಿದ್ದಾಳೆ" ಎಂದು ಇಲ್ಲಿಂದಲೇ ಕೂಗಿ ಹೇಳಿಬಿಡುವಷ್ಟು ಹುಮ್ಮಸ್ಸು ಅವನಲ್ಲಿ ಕಾಣುತ್ತಿತ್ತು. ಕೆಲ ನಿಮಿಷಗಳ ನಂತರ "ನಿಮಗೆ ನನ್ನನ್ನು ಮದುವೆಯಾಗಲು ಇಷ್ಟವೇ?" ಎಂದು ಕೇಳಿದ. ಹುಡುಗಿ ನಾಚುತ್ತ, 'ಹೂಂ' ಎಂದಳು.

"ನನಗೂ ಒಳ್ಳೆಯ ಗಂಡ ಬೇಕು" ಎಂದು ಮಾತು ಸೇರಿಸಿದಳು. ನಾನು ಸನಿಹದಲ್ಲೇ ಇದ್ದುದರಿಂದ ಅವರ ಮಾತುಗಳು ಕೇಳುತ್ತಿದ್ದವು.

"ಪರವಾಗಿಲ್ಲ, ಇಷ್ಟೊಂದು ಬೋಲ್ಡ್ ಆಗಿ ಮಾತಾಡಿದ್ರಲ್ಲ .." ಎಂದೇನೋ ಅವನಾಗಲೇ ಮೆಚ್ಚುಗೆ ಸೂಸುತ್ತಿದ್ದ. ಅವನು ಅಲ್ಲಿಂದಲೇ ನನ್ನ ಕಡೆ ನೋಡಿ ವಿಜಯಸೂಚಕ ಎನ್ನುವಂತೆ ಬೆರಳೆತ್ತಿ ತೋರಿದ. ನಾನು ಪ್ರತಿಕ್ರಿಯೆ ಸೂಚಿಸಿ "ಒಳ್ಳೆಯದಾಗಲಿ" ಎಂದು ಹಾರೈಸಿ ಪ್ರತಿ ಸಂಕೇತ ತೋರಿದೆ.

ಅವರಿಬ್ಬರನ್ನು ಅವರ ಲೋಕಕ್ಕೆ ಬಿಟ್ಟು ನಾನು ಸುತ್ತಮುತ್ತ ಕಣ್ಣಾಡಿಸಿದೆ. ಬಿಸಿಲು ಹೆಚ್ಚಾಗುತ್ತಿದೆ ಅನಿಸಿತು. ನಾನು ಕುಳಿತಿದ್ದ ಜಾಗದಲ್ಲಿ ತಣ್ಣನೆಯ ಗಾಳಿ ಕಡಿಮೆಯಾಗಿ ಮರದ ಎಲೆಗಳ ಸಂದಿಗಳಿಂದ ಸೂರ್ಯ ತೂರಿ, ಪ್ರಖರ ಕಿರಣಗಳಿಂದ ಸುಡುತ್ತಿದ್ದ. ಆದರೆ ಅಲ್ಲಿ ಏನಾಗಬಹುದು ಮುಂದೆ ಅನ್ನುವ ಕುತೂಹಲ ನನ್ನನ್ನು ಅಲ್ಲಿಯೇ ಹಿಡಿದಿಟ್ಟಿತ್ತು. ಜೋಡಿಯ ಕಡೆ ಕಣ್ಣು ಹೊರಳಿಸಿದೆ. ಅವರೀಗ ಯಾವ ಮಾತುಗಳನ್ನೂ ಆಡದೆ ಕಣ್ಣುಗಳಲ್ಲೇ ಸಂಭಾಷಣೆ ನಡೆಸಿದ್ದರು. ಆ ಕ್ಷಣದಲ್ಲಿ ಬರಲಿರುವ ಗೆಳೆಯನನ್ನು ಅವನು ಖಂಡಿತ ಮರೆತಿರುತ್ತಾನೆ ಎಂದೆನಿಸಿತು ಸೂರ್ಯನ ಕಿರಣಗಳ ಪ್ರಖರತೆಗೆ ನನ್ನ ಮುಖದಲ್ಲಿ ಬೆವರಿತು. ಇದೇನು ಇಷ್ಟು ಬಿಸಿ. ಆ ತಂಗಾಳಿ ಎಲ್ಲಿ ಹೋಯಿತು? ಬಿಸಿಲು ಇಡೀ ವಾತಾವರಣವನ್ನೇ ಆಹುತಿ ತೆಗೆದುಕೊಳ್ಳುವುದೋ ಏನೋ ಎಂಬ ಆತಂಕ ನನ್ನನ್ನು ಆವರಿಸಿತು.

ಮತ್ತೆ ಐದು ನಿಮಿಷ ಕಳೆದಿರಬಹುದು. ನೋಡಿದರೆ ಮೂರ್ನಾಲ್ಕು ಜನ ಇತ್ತಲೇ ಧಾವಿಸಿ ಬರುತ್ತಿದ್ದಾರೆ. ಅವರೊಳಗೆ ಒಬ್ಬ ಹೆಂಗಸು ಇದ್ದಳು. ಯಾರಿವರು? ಅಂದುಕೊಳ್ಳುತ್ತಿದ್ದಂತೆ ಅವರು ಆ ಜೋಡಿಯನ್ನು ಸುತ್ತುವರೆದಿದ್ದರು. ಓಡಿಬಂದವರೇ "ಇಲ್ಲವಳೆ ಬನ್ರೋ, ಹಿಡ್ಕೊಳಮ್ಮ ಅವಳನ್ನ, ತಪ್ಪಿಸಿಕೊಂಡು ಹೋಗುತ್ತಾಳೆ. ಎಲ್ಲೆಲ್ಲಿ ಹುಡುಕುವುದು ಈ ಸುಂದರೀನಾ? ಸಾಕಾಯ್ತು!" ಎಂದು ಕೂಗಿದ ಒಬ್ಬ. ಆ ಯುವಕ ಅಪ್ರತಿಭನಾದ "ಯಾರ್ರೀ ನೀವೆಲ್ಲಾ? ಅವರನ್ನು ಯಾಕ್ರೀ ಹಿಡ್ಕೊತೀರಾ?" ಎಂದು ಅವಳನ್ನು ರಕ್ಷಿಸುವಂತೆ ಮೇಲೆದ್ದ. ನಾನು ಬೆರಗು, ಆತಂಕಗಳಿಂದ ನೋಡುತ್ತಿದ್ದೆ. ಒಂದು ಕ್ಷಣ ಏನಾಗುತ್ತಿದೆ... ಎಂದು ಅರ್ಥಮಾಡಿಕೊಳ್ಳಲು ಕಷ್ಟವಾಯಿತು. ಹುಡುಗಿ ಗಾಬರಿಯಾಗಿ ಯುವಕನನ್ನು ತಬ್ಬಿಕೊಂಡು "ದಯಮಾಡಿ ಅವರ ಜೊತೆ ಕಳುಹಿಸಬೇಡಿ, ಪ್ಲೀಸ್ ಪ್ಲೀಸ್" ಎಂದು ಅಳತೊಡಗಿದಳು.

ನವಜೀವನದ ಕನಸುಗಳನ್ನು ಹೆಣೆಯುತ್ತಿದ್ದ ಈ ಜೋಡಿಯ ಮಧ್ಯೆ ಇದ್ದಕ್ಕಿದ್ದ ಹಾಗೆ ಈ ಅಪಶ್ರುತಿ! ನಾನು ತಡೆಯಲಾರದೆ ಕೂಗಿದೆ! "ಯಾರಪ್ಪ ನೀವೆಲ್ಲಾ...? ಹುಡುಗಿ ನಿಮಗೆ ಏನು ಮಾಡಿದಳು?" ಎಂದೆ. ಅವರಲ್ಲಿ ಒಬ್ಬರು "ಇವಳು ಹುಚ್ಚಿ. ನಾವು ಹುಚ್ಚಾಸ್ಪತ್ರೆಯೋರು ವಾರ್ಡ್ ಬಾಯ್‌ಗಳು. ಯಾವ ಹುಡುಗನನ್ನು ನೋಡಿದ್ರು ಸರಿ, ಓಡಿ ಬಂದುಬಿಡುತ್ತಾಳೆ. ದಿನವೆಲ್ಲ ಒಳ್ಳೆಯ ಗಂಡ ಬೇಕು ಅಂತ ಕೂಗಿಕೊಂಡು ಎಲ್ಲರಿಗೂ ತೊಂದರೆ ಕೊಡುತ್ತಾಳೆ". ಆಗ ನಾನು ಹೌದಲ್ಲ, ಇವರು ಆಸ್ಪತ್ರೆ ವಾರ್ಡ್‌ಬಾಯ್‌ಗಳು ಅಂತಾರೆ, ಯೂನಿಫಾರಂ ಇಲ್ಲ, ಕಳ್ಳರು ಸುಳ್ಳು ಹೇಳುತ್ತಿದ್ದಾರೆಂದೇ ಭಾವಿಸಿದೆ. ಅವಳನ್ನು ಹುಚ್ಚಿ ಎಂದ ಮಾತನ್ನು ಜೀರ್ಣಿಸಿಕೊಳ್ಳಲಾಗಲಿಲ್ಲ.

ಯುವಕ ಮರಗಟ್ಟಿದಂತೆ ಸುಮ್ಮನೆ ನಿಂತುಬಿಟ್ಟ. ನಾನು, "ಆಸ್ಪತ್ರೆಯ ವಾರ್ಡ್ ಬಾಯ್‌ಗಳು ಅಂತೀರಿ ನಿಮ್ಮೆಲ್ಲರ ಯೂನಿಫಾರಂ ಎಲ್ಲಿ? ಸುಳ್ಳು ಹೇಳಿ ಹುಡುಗಿಯನ್ನು ಹೊಡೆದುಕೊಂಡು ಹೋಗಲು ನೋಡುತ್ತಿದ್ದೀರಾ? ಅಲ್ಲಯ್ಯ ಹುಚ್ಚಿಯಾದರೆ ಹೀಗೆ ಅಲಂಕರಿಸಿಕೊಂಡು ಬರೋಕೆ ಸಾಧ್ಯವೇ? ಅದು ಆಸ್ಪತ್ರೆಯಿಂದ... ಪೋಲೀಸ್‌ಗೆ ಕಂಪ್ಲೇಂಟ್ ಕೊಡಬೇಕಾ?" ಎಂದು ಧೈರ್ಯ ತಂದುಕೊಂಡು ಬೆದರಿಸಿದೆ. ಅವರಲ್ಲಿ ಸ್ವಲ್ಪ ಹಿರಿಯ, ಸಂಭಾವಿತನ ಹಾಗೆ ಕಾಣುತ್ತಿದ್ದವನು "ನೀವೆಲ್ಲ ಸ್ವಲ್ಪ ಸುಮ್ಮನಿರಿ" ಎಂದು ಹೇಳಿ, ಜೇಬಿನಿಂದ ಗುರುತಿನ ಚೀಟಿ ತೆಗೆದು ನನಗೆ ತೋರಿಸುತ್ತಿದ್ದಂತೆ ಇನ್ನೊಬ್ಬ ಕೋಪದಿಂದ "ಯೂನಿಫಾರಂ ಹಾಕಿಕೊಂಡು ಬಂದರೆ, ಇವಳಲ್ಲಿ ಕೈಗೆ ಸಿಗುತ್ತಾಳೆ.

ಓಡೋದ್ರಲ್ಲಿ ಪಿಟಿ ಉಷಾನ್ನು ಮೀರಿಸುತ್ತಾಳೆ.. ಅದಕ್ಕೆ ಹೀಗೆ ಬಂದಿದ್ದು" ಎಂದ. ಹಿರಿಯ ಅವನ ಕಡೆ ತಿರುಗಿ "ಸ್ವಲ್ಪ ಸುಮ್ಮನೆ ಇರೋ" ಎಂದು, "ಯೂನಿಫಾರಂ ಇಲ್ಲದಿರುವುದರಿಂದ ನಿಮಗೆ ಅನುಮಾನ ಬರುವುದು ಸಹಜ. ಇವಳಿಗೆ ಆಸ್ಪತ್ರೆಯಲ್ಲಿ ಒಬ್ಬ ತಾಯಿ ಸಿಕ್ಕಿದ್ದಾರೆ. ಅವಳು ಇವಳ ಹಿಂದೆ ಸದಾ "ಮಗಳೇ, ಮಗಳೇ" ಅಂತ ಸುತ್ತುತ್ತಿರುತ್ತಾಳೆ. ಅವಳೇ ಇವಳಿಗೆ ಅಲಂಕಾರ ಮಾಡಿ ಕಳುಹಿಸುವುದು. ಹೀಗೆ ತಪ್ಪಿಸಿಕೊಂಡು ಬರುತ್ತಿರುವುದು ಇದು ಒಂಬತ್ತನೇ ಸಲ. ಬಿಟ್ಟರೆ ಸಾಕು ಓಡಿ ಬಿಡುತ್ತಾಳೆ, ಕೈಗೆ ಸಿಕ್ಕಲ್ಲ ಸಾಕಾಗಿದೆ ಹುಡುಕಿ ಅಲೆದಾಡಿ" ಎಂದ.

"ಆಯಾ, ಬಿಗಿಯಾಗಿ ಹಿಡ್ಕೊಳ್ಳಮ್ಮ" ಎಂದು ಹೇಳಿ ಉಳಿದವರ ಕಡೆ ನೋಡಿ, "ನಡೀರಯ್ಯಾ" ಎಂದ. ನಾನು "ಒಂದು ನಿಮಿಷ ತಡೀರಿ, ಹುಡುಗಿಗೆ ಮದುವೆಯಾಗಿದೆಯೇ?" ಎಂದೆ. ಅದಕ್ಕೆ ಆತ "ಗಂಡನೇ ತಂದು ಆಸ್ಪತ್ರೆಗೆ ಸೇರಿಸಿದ್ದು, ಸೇರಿಸಿ ಹೋದವನು ತಿರುಗಿಯೂ ನೋಡಿಲ್ಲ" ಎಂದು, "ಬರ್ತೀವಿ ಮೇಡಂ" ಎಂದು ಹೊರಟರು. ಆ ಹೆಣ್ಣುಮಗಳು "ಬಿಡಿ, ಬಿಡಿ" ಎಂದು ಒದರಾಡುತ್ತಿದ್ದರೂ ಬಿಡದೆ ಎಳೆದೊಯ್ದರು.

ಹುಡುಗ ಬೆಪ್ಪಾಗಿ ಬೆಂಚಿನ ಮೇಲೆ ಕುಳಿತ. "ಅಯ್ಯೋ ನನ್ನ ವಿಧಿಯೇ" ಎಂದು ಪರಿತಪಿಸುವಂತಾಗಿತ್ತು. ಮರುಕ್ಷಣದಲ್ಲೇ ಬಿಡುಗಡೆಯ ನಿಟ್ಟುಸಿರು ಬಿಡುತ್ತಾ "ಸದ್ಯ, ಹುಚ್ಚಿಯಂತೆ, ಅಬ್ಬ! ದೇವರೇ ತಪ್ಪಿಸಿದ, ಬಚಾವಾದೆ" ಎಂದ ನಗುತ್ತಾ. ಆ ನಗು ನಿರಾಳವಾಗಿತ್ತು. ಅದರಲ್ಲಿ ನೆಮ್ಮದಿ ಇತ್ತು.

ಆದರೆ ನಾನು ನಗಲಿಲ್ಲ! ಅಂತಹ ಹುಡುಗಿಯನ್ನು ಹುಚ್ಚಿಯಾಗಿ ಮಾಡಿದ ಈ ಸಮಾಜದ ಬಗ್ಗೆ ಮನಸ್ಸು ಚಿಂತಿಸಲಾರಂಭಿಸಿತು. ಅಷ್ಟೊತ್ತಿಗೆ ಆ ಯುವಕ ಎದುರು ನೋಡುತ್ತಿದ್ದ ಗೆಳೆಯ ಬಂದ. "ಹೊತ್ತು ಮಾಡಿಬಿಟ್ಟೆ ಮಹಾರಾಯ, ಇನ್ನೂ ತಡವಾಗಿದ್ದರೆ ನಾನು ಹುಚ್ಚಾಸ್ಪತ್ರೆಗೆ ಸೇರಬೇಕಾಗುತ್ತಿತ್ತು" ಎಂದ ಆ ಯುವಕ. ಗೆಳೆಯ "ಸಾರಿ ಕಣೋ, ಇವತ್ತು ಅಲ್ಲಿ ಒಂದು ಮೆರವಣಿಗೆ.... ತುಂಬಾ ಜನ... ಬಿಡು ಏನೋ ಆಯಿತು, ನಡಿ ಮನೆಗೆ ಹೋಗೋಣ" ಎಂದು ಗೆಳೆಯನ ಲಗೇಜಿಗೆ ಕೈಹಾಕಿದ.

ನನ್ನ ಕಡೆ ತಿರುಗಿ ಯುವಕ ಗೆಳೆಯನನ್ನು ಪರಿಚಯ ಮಾಡಿಕೊಟ್ಟ. "ಇವರು ಕೊಟ್ಟ ನೀರು, ಬಾಳೆಹಣ್ಣು ನನ್ನ ಜೀವ ಉಳಿಸಿತು ಮಾರಾಯ" ಎಂದ. "ನೀನು ಮನಸ್ಸು ಮಾಡಿದ್ದರೆ ಆ ಹುಡುಗಿಗೆ ಹೊಸ ಜೀವನವನ್ನೇ ಕೊಡಬಹುದಿತ್ತು! ಮುಡಿಯಿಂದ ಜಾರಿದ ಹೂವಿಗೆ ಒಂದು ನೆಲೆ ಸಿಗುತ್ತಿತ್ತು, ಮೂರ್ಖ!" ಎಂದುಕೊಂಡೆ.

ಅವರಿಬ್ಬರೂ ಅಲ್ಲಿಂದ ನನಗೆ 'ಬೈ 'ಹೇಳಿ ಹೊರಟುಹೋದರು. ನಾನು ಭಾರವಾದ ಹೆಜ್ಜೆಗಳನ್ನಿಡುತ್ತ ಮನೆಯ ಕಡೆ ನಡೆದೆ. ಆ ಹೆಣ್ಣಿನ ಅಮಾಯಕ ಮುಖ ನೆನೆಸಿಕೊಂಡು ವಿಷಾದದ ಹನಿಗಳು ನನ್ನ ಎರಡೂ ಕಣ್ಣುಗಳಿಂದ ಜಾರಿದವು....

*****

ಆಮ್ಮಿ ಮಾತ್ರ ... ನಾವು ಮಾತ್ರಾ ..

– ವೆಂಕಟೇಷ ಕಾಮತ್, ಉಡುಪಿ

ಆಮ್ಮಿ ಮಾತ್ರ.. ನಮ್ಮ ಕೊಂಕಣಿಯಲ್ಲಿ 'ನಾವು ಮಾತ್ರ' ಎಂದು ಇಂಗ್ಲಿನಲ್ಲಿ ಹೇಳೋದಾದ್ರೆ ಇದನ್ನು 'ಓನ್ಲಿ ಅಸ್' ಅಥವಾ 'ಓನ್ಲಿ ವೀ' ಎಂದು ಹೇಳಬಬಹುದು.

ನನಗೆ ಈಗ 66 ವರುಷ ನನ್ನ ಕೆಲವು ನೆನಪುಗಳು ಆರು ದಶಕಗಳ ಹಿಂದಿನವು, ಚಲನಚಿತ್ರದ ಕಪ್ಪು ಬಿಳುಪು ದೃಶ್ಯಗಳಂತೆ ಅವು ನನಗೆ ಆಗಾಗ್ಗೆ ಕಾಣುತ್ತವೆ.

1959–60ರಲ್ಲಿ ನನ್ನ ತಂದೆ ತಾಯಿ ನನ್ನನ್ನು ಮತ್ತು ನನಗಿಂತ ಕೇವಲ ಒಂದೇ ವರುಷ ಹಿರಿಯಳಾದ ನನ್ನ ಅಕ್ಕನೊಂದಿಗೆ ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ಬಂದಾಗ ನಾವು ಮೊಟ್ಟಮೊದಲು ಬಾಡಿಗೆಗೆ ಹಿಡಿದಿದ್ದು ಈಗಿನ ಜನಜಂಗುಳಿಯ ಮೆಜೆಸ್ಟಿಕ್ ಏರಿಯಾದ ಮೂವಿಲ್ಯಾಂಡ್ ಥಿಯೇಟರಿನ ಮುಂಬಾಗದ ಒಂದು ಪುಟ್ಟ ರಸ್ತೆಯಲ್ಲಿ. ನಮ್ಮಮ್ಮನಿಗೆ ಈಗ 86 ವರುಷ. ಆಗ 23 ಮತ್ತು ಅವರ ತಂಗಿ, ನನ್ನ ಚಿಕ್ಕಮ್ಮ ಆಗ 18 ವರುಷದವರು. ಬಾಡಿಗೆಗೆ ಸೈಕಲ್ ಕೊಂಡು ಕಲಿಯಲು ಹೋಗುತ್ತಿದ್ದದ್ದು ಸುಭಾಷ್ ನಗರ ಮೈದಾನಕ್ಕೆ. ಅಲ್ಲಿ ಮುಂದೆ ನಾವು ಕಾಂಗ್ರೆಸ್ ಎಕ್ಸಿಬಿಷನ್‌ಗೆ ಪ್ರತಿ ವರುಷ ಬೇಸಿಗೆ ರಜೆಯಲ್ಲಿ 2–3 ಸಲವಾದರೂ ಹೋಗುತ್ತಿದ್ದ ನೆನಪುಗಳಿವೆ. ಈಗ ಅಲ್ಲಿ ಬಸ್ ಮತ್ತು ಮೆಟ್ರೋ ರೈಲು ನಿಲ್ದಾಣಗಳಿವೆ.

ಅಂದಿನ ಸ್ವಾತಂತ್ರ್ಯ ಭಾರತದ ಎರಡನೇ ದಶಕದಲ್ಲಿ ತಮ್ಮ ಪುಟ್ಟ ಪುಟ್ಟ ಊರುಗಳಿಂದ ಬೆಂಗಳೂರು ಪಟ್ಟಣಕ್ಕೆ ಉದ್ಯೋಗ, ಖರೀದಿ, ಆಸ್ಪತ್ರೆಯಲ್ಲಿ ಶುಶ್ರೂಷೆ ಹಲವಾರು ಕಾರಣಗಳಿಗೆ ಬರುವವರಿಗೆ ಇಂದಿನಂತೆ ಅಂದು ಹೋಟೆಲ್‌ಗಳಲ್ಲಿ ಉಳಿಯುವ ಪರಿಪಾಠ ಇರಲಿಲ್ಲ. ಅತಿಥಿ ದೇವೋಭವ ಅನ್ನುವ ಮಾತನ್ನು ಅಕ್ಷರಶಃ ಪಾಲಿಸುತ್ತಿದ್ದ ದಿನಗಳವು. ಯಾರ ಮನೆಗೋ ಹೋಗಿ ಜೊತೆಗೆ ಹೆಂಡತಿ ಮಕ್ಕಳು ಮಾತ್ರವಲ್ಲ, ಊರಿನ ಗೆಳೆಯರನ್ನೂ ಕರೆದೊಯ್ಯುವರಲ್ಲದೆ, ಹೋಗಿ ನಿಲ್ಲಲು ಊರಿನ ಎದುರುಮನೆ ಪಕ್ಕದಮನೆ ದೇವಸ್ಥಾನದ ಪಕ್ಕದಮನೆ ತರಗತಿಯ ಯಾ ಬರೀ ಶಾಲೆಯ ಗುರುತಿನ ಜನ ತಮ್ಮ ಊರಿನವ ಬೇರೆಡೆ ನಿಂತರೆ ತಮ್ಮ ಮೇಲೆ ಮುನಿಸಿಕೊಳ್ಳುತ್ತಾನೆ ಎಂದು ಸ್ವಂತಿಕೆಯಲಿ ಪುಟ್ಟದಾದ ಮನೆಯಾದರೂ ಚಾಪೆ ಸಾಕೆಂದು ಹಾಸಿ ಮಲಗುವರು.. ದಿನ ವಾರ ಇರುವರು.

ಇಂತಹ ದಿನಗಳಲ್ಲಿ ನಮ್ಮ ಬೆಂಗಳೂರಿನ ಪುಟ್ಟ ಮನೆಯಲ್ಲಿ ನಾನು ಬೆಳೆಯುತ್ತಿರುವಾಗ ನನ್ನ ಸೋದರ ಮಾವಂದಿರು, ಸೋದರಮಾವನ ಮಕ್ಕಳು, ನನ್ನ ತಂದೆತಾಯಿಯ ಊರಿನವರು ಒಬ್ಬರಲ್ಲಾ ಇನ್ನೊಬ್ಬರು ಇದ್ದೇ ಇರುತ್ತಿದ್ದರು.

ನಾನು ಗೆಳೆಯರಲ್ಲಿ ಇಲ್ಲವೇ ಸಿನಿಮಾಗೆ ಹೋಗಲು ಅನುಮತಿ ಕೇಳಿದೊಡನೆ ಅವರೂ ಬಾಯಿ ಹಾಕುವರು.. 'ಎಷ್ಟು ಸಿನಿಮಾ ನೋಡುವುದು.., ಮಾರ್ಕು ನೋಡಿದರೆ ಪಾಸಾಗುವುದು ಅಷ್ಟರಲ್ಲೇ ಇದೆ...' ಹೀಗೆ ಏನೋ ಒಂದು. ನಮ್ಮಲ್ಲಿ ಯಾವುದೇ ಒಂದು ವಿಷಯ ತಂದೆ ತಾಯಿಯರಿಗೆ ಮಾತ್ರ ಬಿಟ್ಟದ್ದು ಎಂಬ ಪರಿಧಿ ಇರಲ್ಲಿಲ್ಲ.

ನಾನು ಆಗ ಆಗಾಗ್ಗೆ ಹೇಳಿಕೊಳ್ಳುತ್ತಿದ್ದ ಒಂದು ಮಾತು 'ಅಮ್ಮಿ ಮಾತ್ರ.. ನಾವು ಮಾತ್ರ..' ಒಂದು ಮನೆಯಲ್ಲಿ ಇರುವ ದಿನಗಳಿಲ್ಲವೇ??

ಇರಲಿಲ್ಲಾ... ನಾವು ಬೆಂಗಳೂರು ಬಿಟ್ಟು ಬರುವವರೆಗೆ ಅಂತಹ ನಮ್ಮ ಪುಟ್ಟ ಸಂಸಾರ ಮಾತ್ರ ಎನ್ನುವ ದಿನಗಳು ಇರಲೇ ಇಲ್ಲ.

ಬೆಂಗಳೂರು ಬಿಡುವ ಸಮಯದಲ್ಲೇ ನನಗಿಂತ ಒಂದೇ ವರುಷ ಹಿರಿಯಳಿದ್ದ ನನ್ನ ಅಕ್ಕನ ಮದುವೆ ತನ್ನ 20ನೇ ವರುಷದಲ್ಲಿ ನಡೆದು ಅವಳ ಗಂಡನ ನೌಕರಿ, ಮನೆ ಬೆಂಗಳೂರಿನಲ್ಲೇ ಆಗಿ ನಾವು ಅಂದರೆ ನಾನು, ನನ್ನ ತಂದೆ ತಾಯಿ ಮತ್ತು ನನಗಿಂತ ಏಳು ವರುಷ ಚಿಕ್ಕವಳಾದ ನನ್ನ ತಂಗಿಯೊಂದಿಗೆ ನನ್ನ ತಂದೆಯವರ ಮೂಲ ಊರಾದ ಕಾರ್ಕಳಕ್ಕೆ ಬಂದೆವು.

1959ರಲ್ಲಿ ನಾನು, ಅಕ್ಕ, ತಂದೆತಾಯಿಯರೊಡನೆ ಬೆಂಗಳೂರಿಗೆ ಹೋಗಿ 5–6 ಮನೆ ಬದಲಿಸಿ 16 ವರುಷಗಳ ನಂತರ 1975ರಲ್ಲಿ ನಾನು ತಂಗಿ ತಂದೆತಾಯಿಯರೊಡನೆ ಕಾರ್ಕಳಕ್ಕೆ ಬಂದೆ. ನನ್ನ ಅಕ್ಕ ಮಾತ್ರ ಮದುವೆಯಾಗಿ ತವರುಮನೆ ಬಿಡುವವರೆಗೆ ನೆಂಟರು ಸಂಬಂಧಿಗಳು ಇಲ್ಲದ, 'ಅಮ್ಮಿ ಮಾತ್ರ.. ನಾವು ಮಾತ್ರ' ಇರುವ ದಿನಗಳನ್ನು ಅನುಭವಿಸಲಿಲ್ಲ. ಮುಂದೆ ಪಣಜಿ ಗೋವಾದಲ್ಲಿ ತನ್ನ ಪುಟ್ಟ ಸಂಸಾರದೊಡನೆ ಇದ್ದಾಗ ಅವಳು ಹೇಳುವಳು "ಅಮ್ಮಿ ಮಾತ್ರ" "ನಾವು ಮಾತ್ರ" ಎಂದೂ ನಮ್ಮ ತಂದೆ ತಾಯಿಯರೊಡನೆ ಒಂದು ಪುಟ್ಟ ಸಂಸಾರದಂತೆ ನಾವು ಮಕ್ಕಳು ಎಂದೂ ಇರಲ್ಲಿಲ್ಲಾ..

ಕಳೆದ ದಿನಗಳು ಮತ್ತೆ ಬರಲಾರವು. ಈಗ ಜನರಿಗೆ ಬೆಳೆದ ಮಕ್ಕಳಿಗೆ ಅವರದೇ ಗಂಡ ಹೆಂಡತಿ ಮಕ್ಕಳು ಬಿಟ್ಟರೆ ತಂದೆ ತಾಯಿಯರು ಸಹ ಈ 'ಆಮ್ಮಿ ಮಾತ್ರ'ದ ಹೊರಗಿನವರಾಗುತ್ತಾರೆ. ಮೊಮಕ್ಕಳು ಎಷ್ಟೇ ಪ್ರೀತಿ ಇದ್ದರೂ ತಾತ ಅಜ್ಜಿಯರನ್ನು ಏನಾದರೂ ಬುದ್ದಿಮಾತು ಹೇಳಿದರೆ ಗದರಿಸುತ್ತಾರೆ.

ಸುಮ್ಮೆ ನಿಮ್ಮಷ್ಟಕ್ಕೆ ಇರೋಕ್ಕೆ ಆಗೋಲ್ವಾ, ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ ಕಾಲ ಬದಲಾಗಿದೆ ಎಂದು ಅನ್ನಿಸಿಕೊಳ್ಳುವುದು ಈಗ ಸರ್ವೇ ಸಾಮಾನ್ಯ.

ಈಗ ಬೇಕು ಬೇಡ ಏನೇ ಇದ್ದರೂ ಇರುತ್ತಾರೆ ಎಲ್ಲರೂ 'ಆಮ್ಮಿ ಮಾತ್ರ.. ನಾವು ಮಾತ್ರ..'

*****

ಸಣ್ಣ ಕತೆ

ಇರುವುದೆಲ್ಲವ ಬಿಟ್ಟು...

– ಸುಜಾತಾ ರವೀಶ್

ಅಪರೂಪಕ್ಕೆ ಯಾವ ನೆಂಟರೂ ಇರದ, ಹೆಣ್ಣು ಮಕ್ಕಳು ಮೊಮ್ಮಕ್ಕಳೂ ಬರದೆ ಸಿಕ್ಕಿದ ಹಾಯಾದ ಭಾನುವಾರ ಸುನಂದಮ್ಮನವರಿಗೆ. ಹೀರೇಕಾಯಿ ಹುಳಿತೊವ್ವೆ ಬೂದುಗುಂಬಳಕಾಯಿ ಮಜ್ಜಿಗೆಹುಳಿಗೆ ಪತಿ ಶ್ರೀಪಾದ ಬಯಸಿದ್ದರು ಅಂತ ಅರಳು ಸಂಡಿಗೆ ಬಾಳಕ ಕರಿದಿದ್ದರು. ಒಂದೆರಡು ತುತ್ತು ಹೆಚ್ಚಾಗೇ ಇಳಿದಿತ್ತು. ಬರೆಯುವ ಯಾವುದೇ ಕಮಿಟ್ಮೆಂಟ್ ಇದ್ದಿಲ್ಲದ್ದರಿಂದ ಮಧ್ಯಾಹ್ನ ಒಂದು ನಿದ್ದೆ ಹೊಡೆದೇಬಿಡೋಣ ಅಂತ ಮಲಗಿಬಿಟ್ಟರು.

ನಾಲ್ಕು ಕಾದಂಬರಿ, ಮೂರು ಕಥಾ ಸಂಕಲನ ಬಿಡುಗಡೆ ಮಾಡಿದ ಸುನಂದಮ್ಮನವರನ್ನು ಹೆಸರಾಂತ ಲೇಖಕಿ ಎನ್ನಲು ಅಡ್ಡಿ ಇರಲಿಲ್ಲ. ನೀರಾವರಿ ಇಲಾಖೆಯಲ್ಲಿ ಎಸ್.ಡಿ.ಸಿ. ಆಗಿ ಸೇರಿದ್ದವರು ಈಗ ಸೂಪರಿಂಟೆಂಡೆಂಟ್. ಮೂವತ್ತು ವರ್ಷ ಕಚೇರಿ ಸರ್ವೀಸ್ ಜತೆ ಜತೆಗೆ ಇಷ್ಟೆಲ್ಲ ಸಾಹಿತ್ಯ ಸೇವೆ. ಒಂದಲ್ಲ ಒಂದು ನಿಯತಕಾಲಿಕೆಯಲ್ಲಿ ಅವರ ಕಥೆಗಳು ಪ್ರಕಟವಾಗುತ್ತಲೇ ಇರುತ್ತಿದ್ದವು. ಒಂದಷ್ಟು ಅಭಿಮಾನಿಗಳೂ ಇದ್ದರು. ಒಟ್ಟಿನಲ್ಲಿ ಸಂತೃಪ್ತ ಜೀವನ. ಇಬ್ಬರು ಹೆಣ್ಣು ಮಕ್ಕಳಿಗೂ ಮದುವೆಯಾಗಿ ಅವರಿಬ್ಬರಿಗೂ ಒಂದೊಂದು ಮಕ್ಕಳು. ಇದ್ದೂರಲ್ಲೇ ಇದ್ದ ಅವರುಗಳು ಬರುವಾಟ ಹೋಗುವಾಟ ಇದ್ದೇ ಇತ್ತು. ಇನ್ನು ನಾಲ್ಕು ವರ್ಷ ಸರ್ವಿಸ್. ಗಂಡ ಈಗ ತಾನೇ ರಿಟೈರ್ ಆಗಿದ್ದರು. ಹಣಕಾಸಿಗೆ ತೊಂದರೆ ಇಲ್ಲ. 40/60ರ ಸೈಟಿನಲ್ಲಿ ಮೇಲೆ ಕೆಳಗೆ ಮನೆ ಕಟ್ಟಿಸಿ ಮೇಲಿನ ಪೋರ್ಷನ್ ಬಾಡಿಗೆಗೆ ಕೊಟ್ಟಿದ್ದರು. ಸಾಹಿತ್ಯ ಸಮಾರಂಭಗಳಿಗೆ ಬಣ್ಣ ಬಣ್ಣವಾಗಿ ಅಲಂಕರಿಸಿಕೊಂಡು ಹೋಗಿ ಸನ್ಮಾನ ಪಡೆಯುತ್ತಿದ್ದರು. ರಸವತ್ತಾಗಿ ಕಥೆ ಕಟ್ಟುವ ಶಕ್ತಿ ಇದ್ದುದರಿಂದ ಬರವಣಿಗೆ ಸುಲಲಿತವಾಗಿ ಸಾಗುವುದಕ್ಕೆ ಅಡ್ಡಿಯಿರಲಿಲ್ಲ.

ಹಾಗೇ ಜೊಂಪು ಹತ್ತಿತ್ತು ಸಣ್ಣಗೆ ಹಾಕಿದ್ದ ಫ್ಯಾನ್, ಕಿಟಕಿ ಕರ್ಟನ್ ಎಳೆದು ಅರೆಕತ್ತಲು ಮಬ್ಬು ನಿದ್ರೆ ಹತ್ತಿತ್ತು. ಪತಿ ಬಂದು ಭುಜ ಅಲುಗಿಸಿದಾಗ ಬೆಚ್ಚಿಬಿದ್ದು ಎದ್ದರು. "ನೋಡು ಯಾರೋ ಒಂದಷ್ಟು ಹೆಂಗಸರು ಬಂದಿದ್ದಾರೆ. ನಿನ್ನೊಡನೆ ಮಾತನಾಡಬೇಕಂತೆ". ಸರಿ ಎದ್ದು ಮುಂದಲೆ ಸರಿ ಮಾಡಿಕೊಂಡು ರೂಮಿನಿಂದ ಆಚೆ ಬಂದರು.

ಇಲ್ಲ, ಯಾರೂ ಪರಿಚಿತ ಮುಖಗಳಲ್ಲ. ಇರಸರಿಗೆ ನೋಡಿದರೆ ಯಾವ ಮಹಿಳಾ ಸಂಘದವರಂತೆಯೂ ಕಾಣಲ್ಲ. ಏನಾದರೂ ಹಿರಿಯ ಸಾಹಿತಿ ಅಂತ ಸನ್ಮಾನ ಮಾಡಲು ಕರೆಯ ಬಂದಿದ್ದಾರೋ ಅಥವಾ ಸಹಾಯ ಕೇಳಲು ಬಂದಿದ್ದರೋ. ಯಾಕೆಂದರೆ ಆ ತರಹ ಹಣ ಕೇಳಲು ಬಂದಾಗ ಕೊಡಲಾಗದೆ ಬಿಡಲಾಗದೆ ಪರಿತಪಿಸಿದ ಪ್ರಸಂಗಗಳು ಇನ್ನೂ ಹಸಿರಾಗಿದೆಯಲ್ಲಾ ಅವರ ಮನದಲ್ಲಿ. ಬಂದವರೆಲ್ಲಾ ಸೋಫಾದಲ್ಲಿ ಕೂತಾಗಿತ್ತು. ಡೈನಿಂಗ್ ಹಾಲಿನಿಂದ ಒಂದು ಚೇರ್ ಎಳೆದುಕೊಂಡು ಬಂದು ಕೂತರು. ಈಗ ಸರಿಯಾಗಿ ಮುಖಗಳನ್ನು ನೋಡ್ತಾರೆ

ಎಲ್ಲಾರದ್ದು ಬಿಗಿದ ಮುಖ. ಕೋಪದಿಂದ ಕೂಡಿದ ಹಾಗಿತ್ತು. "ಏನಪ್ಪಾ ಇದು, ಇನ್ನು ಸುಮ್ನಿದ್ರೆ ಸರಿಯಿರಲ್ಲ" ಅಂದ್ಕೊಂಡು "ಏನ್ರಮ್ಮ ಏನಾಗಬೇಕಾಗಿತ್ತು" ಅಂದರು.

ಇದ್ದುದರಲ್ಲಿ ಸ್ವಲ್ಪ ಇವರ ವಯಸ್ಸೇ ಎನ್ನಬಹುದಾಗಿದ್ದ ರೇಷ್ಮೆ ಸೀರೆ ಉಟ್ಟು ತುರುಬು ಹಾಕಿದ್ದ ಆ ಹೆಂಗಸು ನುಡಿದರು. "ಸಾಕಮ್ಮ ಇದುವರೆಗೆ ನೀನು ಮಾಡಿದ್ದು. ಇನ್ನು ಏನು ಮಾಡೋದು ಬೇಡ". ಈಗ ಇವರಿಗೂ ಸ್ವಲ್ಪ ಸಿಟ್ಟು ಬಂತು. "ಅಲ್ಲಮ್ಮ, ನೀವ್ಯಾರು ಅಂತಾನೇ ಗೊತ್ತಿಲ್ಲ ನಾನೇನು ಮಾಡಿದೆ ನಿಮಗೆ" ಸ್ವಲ್ಪ ಜೋರು ದನಿಯಲ್ಲಿ ಕೇಳಿದರು. "ನಾನು ಕಮಲ, ಈಗ ಕಮಲಮ್ಮ ನಿನ್ನ ಮೊದಲ ಕಾದಂಬರಿ "ದೂರಾದವರು"ನ ನಾಯಕಿ. ನೀನೇನೋ ನಿನ್ನ ಮರ್ಜಿಯಂತೆ ನನ್ನ ಪ್ರೀತಿಸುವವರಿಂದ ದೂರ ಮಾಡಿ ಅಪ್ಪ ಅಮ್ಮ ಹೇಳಿದ ಶ್ರೀಮಂತರ ಮದುವೆ ಆಗುವ ಹಾಗೆ ಮಾಡಿದೆ. ಅವರ ಜಬರದಸ್ತು, ಅತ್ತೆ ಮಾವನ ದರ್ಪ ಎಲ್ಲಾ ಸಹಿಸಿ ಸಹಿಸಿ ಸಾಕಾಗಿಹೋಯ್ತು. ಮಕ್ಕಳೂ ಈಗ ದೂರ. ಪ್ರೀತೀನ ಕಳೆದುಕೊಳ್ಳುವ ಕಷ್ಟ ನಿನಗೇನು ಗೊತ್ತು? ಜೀವನ ಇಡೀ ನರಕ ಮಾಡಿಬಿಟ್ಟೆಯಲ್ಲಾ ನನ್ನದು." ಕಡೆಕಡೆಗೆ ಗದ್ಗದಿತರಾಗಿ ಕಣ್ಣೀರು ಒರೆಸಿಕೊಂಡರಾಕೆ.

ಅಷ್ಟರಲ್ಲಿ ಸ್ವಲ್ಪ ಮಧ್ಯಮ ವಯಸ್ಸಿನ ಬಡ ಹೆಂಗಸಂತೆ ಕಾಣುತ್ತಿದ್ದ ಇನ್ನೊಬ್ಬಳು ಶುರು ಮಾಡಿದಳು. "ನಾನೇನಮ್ಮ ನಿನ್ನ ಮೂರನೇ ಕಾದಂಬರಿ "ಒಂದಾದವರು" ನಾಯಕಿ ಹೇಮಾ. ನಿನ್ನಿಂದ ಮಾಡಿಕೊಳ್ಳಲಾಗದ ಅಂತರ್ಜಾತಿಯ ಪ್ರೇಮ ವಿವಾಹ ಮಾಡಿಸಿ ಕಾದಂಬರಿಯೇನೋ ಮುಗಿಸಿಬಿಟ್ಟೆ. ಆದರೆ ಜೀವನದ ಆರಂಭ ಅಲ್ಲಿಂದಾನೆ ಅಂತ ತಿಳಿಯಲಿಲ್ಲವಾ? ಸರಿಯಾಗಿ ಕೆಲಸ ಇರದೆ ಇಬ್ಬರ ಮನೆಗಳಿಂದಲೂ ದೂರಾಗಿ ನಾವು ಅನುಭವಿಸಿದ ಕಷ್ಟ ಅವಮಾನ ಬಡತನದ ಬಗ್ಗೆ ಬರೀಬೇಕು ಅಂತ ಗೊತ್ತಾಗಲೇ ಇಲ್ವಾ? ಹರೆಯದ ಅಮಲಲ್ಲಿ ದಿಕ್ಕು ತಪ್ಪುವವರಿಗೆ ಮದುವೆಯಾಗಲು ಮಾತ್ರ ನಮ್ಮನ್ನು ಮಾದರಿ ಮಾಡಿದೆಯಲ್ಲ, ನಂತರದ ನೋವಿನ ಜೀವನದ ಅನುಭವವನ್ನು ಚಿತ್ರಿಸಿದ್ದರೆ ಕುರುಡರಾಗಿ ಮುಂದುವರಿಯುವ ಎಷ್ಟೋ ಜೋಡಿಗಳು ಪಾಠ ಕಲೀತಿದ್ದರು. ದೊಡ್ಡ ಲೇಖಕಿ ಅಂತ ಹೆಸರು ತಗೊಂಡಿದ್ದೀಯಾ, ನಾಣ್ಯದ ಎರಡು ಮುಖ ತೋರಿಸುವ ಪರಿಜ್ಞಾನ ಬೇಡ್ವಾ?"

ಇನ್ನೂ ಎಷ್ಟು ಉಗಿದು ಉಪ್ಪು ಹಾಕ್ತಿದ್ಲೋ ಅಷ್ಟು ಹೊತ್ತಿಗೆ ದಪ್ಪ ಕನ್ನಡಕದ ಗಂಭೀರ ವ್ಯಕ್ತಿತ್ವದ ಕಾಟನ್ ಸೀರೆಯುಟ್ಟ ಆ ಮಹಿಳೆ "ನೀವು ಸ್ವಲ್ಪ ತಾಳಿ ನನ್ನ ಮಾತಾಡೋಕ್ಕೆ ಬಿಡಿ" ಎಂದರು. ಅವರ ಗತ್ತಿಗೆ ಹೆದರಿಯೋ ಏನೋ ಆಕೆ ಸುಮ್ಮನಾದಳು. ಈಕೆ ಶುರು ಮಾಡಿದರು "ನಾನು ಈಗಾಗಲೇ ಗೊತ್ತಾಗಿರಬೇಕು". ಸ್ವಲ್ಪ ಚೇತರಿಸಿಕೊಂಡಿದ್ದ ಸುನಂದಮ್ಮ ಮೆತ್ತಗೆ ಬಾಯಿಬಿಟ್ಟರು.

"ಹೆಡ್ ಮೇಡಂ ಅಂಬುಜಾ, 'ದಿಗಂತ' ಕಾದಂಬರಿ ನಾಯಕಿ". "ಅಷ್ಟಾದ್ರೂ ನೆನಪಿದೆಯಲ್ಲ! ಬರೀ ಗತ್ತು ಜಂಬ ಗಂಭೀರ ಅಂತ ನನ್ನ ಅಕ್ಕ ತಮ್ಮ ಅಣ್ಣ ತಂಗಿಯಿಂದ ಬೇರೆ ಮಾಡಿದೆ. ಅಮ್ಮನೂ ಸಾಯೋತನಕ ಮುಖ ಕೊಟ್ಟು

ಮಾತಾಡೋಕ್ಕೆ ಹೆದರುತ್ತಿದ್ದಳು. ಕಡೆಗೂ ಎಲ್ಲರಿಂದ ನನ್ನ ದೂರಮಾಡಿಸಿ ಒಂಟಿ ಮಾಡಿಬಿಟ್ಟೆಯಲ್ಲ, ನಿನಗೆ ಈಗ ಸಮಾಧಾನ ಆಗಿರಬೇಕಲ್ಲ. ನನಗೂ ಸಂಸಾರ ಅಂತ ಮಾಡಿಕೊಟ್ಟಿದ್ದರೆ ನಿನ್ನ ಗಂಟೇನು ಹೋಗಿಬಿಡ್ತಿತ್ತು".

ಅಷ್ಟರಲ್ಲಿ ಅಗಲ ಕುಂಕುಮದಾಕೆ ಮಧ್ಯ ಬಾಯಿ ಹಾಕಿದ್ದರು. "ಬಿಡಿ ಮೇಡಂ, ನೀವಾದರೂ ಒಂಟಿಯಾಗಿದ್ದರೂ ಹಾಯಾಗಿದ್ದೀರ. ಎಲ್ಲರಿಗೂ ಮಾಡಿ ಹಾಕಿ, ಏಗೀ ಏಗೀ ಈಗ ಸೊಸೆಯರಿಗೂ ಕಾಲುಕಸ ಆಗೋ ಹಾಗೆ ಮಾಡಿಬಿಟ್ರಲ್ಲಾ ಇವರು, ನನ್ನನ್ನು ಏನೋ ತ್ಯಾಗಮಯಿ ಅಂತ ಚಿತ್ರಿಸುತ್ತಾ". ಈಗ ಸುನಂದಮ್ಮನವರಿಗೆ ನೆನಪಾಯಿತು "ಓಹ್, ಈಕೆ ನನ್ನ ನಾಲ್ಕನೇ ಕಾದಂಬರಿ 'ತ್ಯಾಗಮಯಿ'ಯ ಆದರ್ಶ ಸ್ತ್ರೀ ವಿಮಲ".

ಅಷ್ಟರಲ್ಲಿ ಉಳಿದ ಹೆಂಗಸರು "ಬಿಡ್ರಮ್ಮಾ, ನಿಮ್ಮನ್ನೆಲ್ಲಾ ದೊಡ್ಡ ನಾಯಕಿಯರಾಗಿ ಚಿತ್ರಿಸಿದರು. ನಾವಂತೂ ಸಣ್ಣ ಕಥೆ ಪಾತ್ರಗಳು. ಯಾರಿಗಾದರೂ ನ್ಯಾಯ ಸಲ್ಲಿಸಿದ್ದಾಳಾ ಈ ಮಹಾರಾಯ್ತಿ? ಆದರ್ಶ ಅಂತೆ, ಸಂಸ್ಕಾರ ಅಂತೆ, ಸಂಪ್ರದಾಯವಂತೆ! ಅದರ ಸಂಕೋಲೆಯಲ್ಲಿ ಕಟ್ಟಿಹಾಕ್ತಾಳೆ, ಇಲ್ಲ ಎಲ್ಲಾ ಬಿಟ್ಟ ಬಜಾರಿಯಾಗಿ ಮಾಡ್ತಾಳೆ. ಮಕ್ಕಳ ಏಳಿಗೆಗೆ ದುಡಿಸುತ್ತಾಳೆ, ಮಕ್ಕಳು ಕಡೆಗಣಿಸೋ ಹಾಗೆ ಮಾಡ್ತಾಳೆ. ಗಂಡನ ತಪ್ಪನ್ನೆಲ್ಲ ಕ್ಷಮಿಸೋ ಭೂಮಿತಾಯಿ ಅಂತ ನಮ್ಮನ್ನು ಹೊಗಳ್ತಾ ಗಂಡುಕುಲಕ್ಕೆ ಸಹಾಯ ಮಾಡ್ತಾಳೆ. ಖಂಡಿತಾ ಸ್ತ್ರೀಯರ ಪ್ರತಿನಿಧಿಯಲ್ಲ, ಇವಳು ಸ್ತ್ರೀ ದ್ವೇಷಿ".

ಅಬ್ಬಾ ತಲೆ ಕೆಡ್ತಾ ಇದೆ. "ಅಲ್ಲಮ್ಮಾ ನಾನೇನು ನಿಮಗೆ ಕೆಟ್ಟದ್ದು ಮಾಡೋಕ್ ಹೀಗೆ ಮಾಡಿದೆನಾ? ಹಿಂದೂ ಸಂಸ್ಕೃತಿ ಸಂಪ್ರದಾಯ ಶಾಸ್ತ್ರ ನಾವು ತಾನೆ ಉಳಿಸಬೇಕು. ಅದನ್ನು ನಿಮ್ಮ ಮೂಲಕ ಹೇಳಿಸಿದೆ ಅಷ್ಟೇ. ಹಾಗೆಯೇ ಕೆಟ್ಟ ಗಂಡಸರನ್ನು ಚಿತ್ರಿಸಿದ್ದೇನಲ್ಲಾ. ಸದ್ಯ ನನ್ನ ಬಿಟ್ಟುಬಿಡಿ, ನನ್ನ ಕಾದಂಬರಿಗಳಿಂದ ಕಥೆಗಳಿಂದ ನಿಮ್ಮನ್ನೆಲ್ಲಾ ಬಿಡುಗಡೆ ಮಾಡಿಬಿಡ್ತೀನಿ. ಪ್ರೀತಿ ಸಿಕ್ಕರೂ ತಪ್ಪು, ಸಿಗದಿದ್ದರೂ ತಪ್ಪು, ಮದುವೆ ಮಾಡಿಸಿದರೂ ತಪ್ಪು, ಒಂಟಿ ಉಳಿಸಿದರೂ ತಪ್ಪು, ಏನು ಮಾಡಿದರೂ ತಪ್ಪು ಎನ್ನುವವರು ನನ್ನ ಕಥೆಗಳ ಪಾತ್ರ ಆಗೋದೇ ಬೇಡ. ಮನಸ್ಸೇ ಅಷ್ಟು 'ದೂರದ ಬೆಟ್ಟ ನುಣ್ಣಗೆ' ಅನ್ನೋ ಹಾಗೆ. ಅಷ್ಟಲ್ಲದೆ ಅಡಿಗರು ಹೇಳಿದ್ರಾ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಅಂತ. ಹೋಗ್ರಮ್ಮಾ ಹೋಗಿ ಯಾರೂ ಇರಬೇಡಿ ಹೋಗಿ" ಬಡಬಡಿಸುತ್ತಾನೇ ಇದ್ದರು ಸುನಂದಮ್ಮ.

"ಇದೇನೇ ಮಧ್ಯಾಹ್ನದ ನಿದ್ದೆಯಲ್ಲೂ ಕನಸಾ? ಕನವರಿಸುತ್ತಿದ್ದೀಯಾ" ಎಂದು ಕೇಳಿದಾಗ ಎದ್ದು ಕೂತ ಸುನಂದಮ್ಮ "ಅವರೆಲ್ಲಾ ಹೋದ್ರಾ" ಅಂದಾಗ ಪತಿ ಶ್ರೀಪಾದ ಸುಮ್ಮನೆ ಕಕಮಕ ಮುಖ ನೋಡಿದರು.

*****

ಸಣ್ಣ ಕಥೆ

ಮೌಲ್ಯಮಾಪನ

– ರೇಣುಕಾ ದೇಸಾಯಿ

"ಮುಂದಿನ ಟೀಚರ್ ವಿಭಾ, ಅವರನ್ನು ಕರೆಯಮ್ಮಾ ಹೇಮಾ" ಎಂದು ಸಹಾಯಕಿ ಹೇಮಾ ಅವರಿಗೆ ಹೇಳಿದೆ.

"ನಮಸ್ಕಾರ ಮೇಡಂ" ನಗುಮುಖವಲ್ಲದಿದ್ದರೂ ಗಂಟುಮುಖವಿಲ್ಲದ ವಿಭಾ ಟೀಚರ್ ಒಳಗೆ ಬಂದರು.

"ಹೇಗಿದ್ದೀರಾ ವಿಭಾ?", ಅವರು ಬರೆದುಕೊಟ್ಟ ಅವರದೇ ಮೌಲ್ಯಮಾಪನ ಪತ್ರಿಕೆಯ ಹಾಳೆಯನ್ನು ಗಮನಿಸುತ್ತಾ, "ಕುಳಿತುಕೊಳ್ಳಿ" ಎಂದು ನನ್ನ ಎದುರುಗಡೆ ಇರುವ ಕುರ್ಚಿ ತೋರಿಸಿದೆ.

"ಮೊದಲು ನೀವು ನಿಮ್ಮ ಬಗೆಗೆ ಹೇಳಿ" ಎಲ್ಲರಿಗೂ ಅವಕಾಶ ಕೊಟ್ಟಂತೆ ವಿಭಾಳಿಗೂ ಹೇಳಿದೆ.

"ಇಂತಹ ಸೇವಾಮನೋಭಾವ ಇರುವ ಶಾಲೆಯಲ್ಲಿರಲು ನಾನು, ನನ್ನ ಮಗ ಪುಣ್ಯ ಮಾಡಿದ್ದೇವೆ ಮೇಡಂ"

ಓ! ವಿಭಾಗೆ ಅಂಗವಿಕಲ ಮಗುವಿದೆಯಾ??

"ಮೇಡಂ, ಇಂತಹ ಮಗ ಹುಟ್ಟಿ ನನ್ನ ಜೀವನ ಉದ್ಧಾರವಾಯ್ತು" ವಿಭಾಳ ಮಾತು ಕೇಳಿ ಆಶ್ಚರ್ಯವಾದರೂ ಕುತೂಹಲವಾಯ್ತು. ಯಾಕೆ ಹಾಗೆ ಹೇಳಿದೆ? ಎನ್ನುವ ಮುಖಭಾವದಿಂದ ಅವಳನ್ನು ನೋಡಿದೆ.

"ನನ್ನದು ಕೂಡು ಕುಟುಂಬ ಮೇಡಂ, ಬೆಳಗಿನಿಂದ ಸಾಯಂಕಾಲದವರೆಗೆ ಮನೆಯ ಕೆಲಸವೇ ಆಗುತ್ತಿತ್ತು, ಹೊರಗಿನ ಪ್ರಪಂಚದೊಂದಿಗೆ ಸಂಪರ್ಕವೇ ಇರಲಿಲ್ಲ."

ಬೆಂಗಳೂರಿನಲ್ಲೂ ಇಂತಹ ವಾತಾವರಣವಿರುವ ಕುಟುಂಬ ಇರುತ್ತವಾ? ಎನ್ನುವ ಪ್ರಶ್ನೆ ನನ್ನದು.

ವಿಭಾ ಮುಂದುವರೆಸಿದಳು, "ನಾನು ಪಿ.ಯು.ಸಿ.ವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ್ದೆ. ಮನೆಯಲ್ಲಿ ಮದುವೆ ಮಾಡಿಬಿಟ್ಟರು. ಗಂಡನಿಗೆ ಅಂತಹ ದೊಡ್ಡ ಸಂಬಳದ ನೌಕರಿಯಲ್ಲ, ಮದುವೆ ಆಗಿ ಮೂರನೇ ವರ್ಷಕ್ಕೆ ಅವಳಿ–ಜವಳಿ ಗಂಡು ಮಕ್ಕಳು, ಮನು–ಮನೋಜ್. ಇಬ್ಬರೂ ಮುದ್ದಾಗಿದ್ದು, ದಂತದ ಬೊಂಬೆಯಂತಹ ಮಕ್ಕಳು. ಮೊದಮೊದಲು ನನಗೆ ಗೊತ್ತೇ ಆಗಲಿಲ್ಲ ಮನುವಿನಲ್ಲಿ ದೈಹಿಕ ನ್ಯೂನತೆ ಇದೆ ಎಂದು" ವಿಭಾಳ ಕಣ್ಣಲ್ಲಿ ಕಣ್ಣೀರು ಜಿನುಗುತ್ತಿತ್ತು.

ಹೌದು, ವಿಭಾನ ಮಗ ಇದೇ ಸ್ಕೂಲಲ್ಲಿ ಇರುವವ. ನಗುಮುಖದ ಮುದ್ದಾದ ಮಗು, ಜಾಣ್ಮೆ ಇದೆ, ತಿಳುವಳಿಕೆ ಇದೆ. ಓಡಾಡಲಾರ, ಕುಳಿತುಕೊಳ್ಳಲಾರ. ಸದಾ ನಾಲ್ಕೈದು ಬೆಲ್ಟ್ ಬಿಗಿದು ಅವನಿಗಾಗಿ, ಅವನಂತವರಿಗಾಗಿ ಮಾಡಿದ ವಿಶೇಷ ಗಾಲಿ ಕುರ್ಚಿಯಲ್ಲಿ ಕುಳಿತಿರುತ್ತಾನೆ. ವೈದ್ಯಕೀಯ ಪರಿಭಾಷೆಯಲ್ಲಿ ಅವನೊಬ್ಬ ಸಿ. ಪಿ. ಮಗು. ಅಂದರೆ Cerebral Palsy ಮಗು. ಹಾಗಿದ್ದೂ ಇಂತಹ ಮಗನಿಂದ ನನ್ನ ಜೀವನ ಉದ್ಧಾರವಾಯ್ತು ಎನ್ನುವ ಅವಳ ಮಾತು ಪ್ರಶ್ನೆಯಾಗಿ ಕಾಡುತ್ತಲೇ ಇತ್ತು.

"ಸಿ. ಪಿ. ಮಗು ಎಂದರೆ ಎನು?" ಶಾಲಾ ಸಮಿತಿಗೆ ಹೊಸದಾಗಿ ಸೇರಿದ, ಇಂತಹ ಮಕ್ಕಳ ಬಗೆಗೆ ಮಾಹಿತಿ ಇರದ ಶಿವಾಜಿರಾವ್ ಕೇಳಿದರು.

"ಸೆರೆಬ್ರಲ್ ಎಂದರೆ ಮೆದುಳಿಗೆ ಸಂಬಂಧಿಸಿದ, ಪಾಲ್ಸಿ ಎಂದರೆ ದೌರ್ಬಲ್ಯ. ಈ ತೊಂದರೆ ಅಸಹಜ ಮೆದುಳಿನ ಬೆಳವಣಿಗೆಯಿಂದ ಉಂಟಾಗುತ್ತದೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ಮೆದುಳಿಗೆ ಹಾನಿಯಾಗುತ್ತದೆ. ಈ ತೊಂದರೆ ಇದ್ದರೆ ಸ್ನಾಯುಗಳನ್ನು ನಿಯಂತ್ರಿಸುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಇದರಲ್ಲಿ ಹಲವಾರು ವಿಧದ ದೌರ್ಬಲ್ಯಗಳಿವೆ. ಅದಕ್ಕೆ ಸಂಬಂಧಿಸಿದಂತೆ ವ್ಯಕ್ತಿಯ ಅವಯವಗಳ ಮೇಲೆ ಅದರ ದುಷ್ಪರಿಣಾಮ ಆಗುವ ಸಾಧ್ಯತೆ ಜಾಸ್ತಿ. ಈ ದೌರ್ಬಲ್ಯ ಇದ್ದ ಮಕ್ಕಳಿಗೆ ಕೈ, ಕಾಲು, ದೇಹದ ಒಂದು ಭಾಗ, ತೋಳುಗಳಿಗೆ ತೊಂದರೆ ಉಂಟಾಗುತ್ತದೆ. ಇಂತಹ ಸಮಸ್ಯೆ ಇರುವ ಮಕ್ಕಳು ಮಾತನಾಡುವದನ್ನು ಕಲಿಯಲು ವಿಳಂಬ ಆಗುತ್ತದೆ. ದುರ್ಬಲ ಕುತ್ತಿಗೆಯನ್ನು ಹೊಂದಿರುತ್ತಾರೆ. ಕಾಲುಗಳಲ್ಲಿ ಸ್ನಾಯುಗಳು ಬಿಗಿಯಾಗಿರುತ್ತವೆ, ಯಾವುದೇ ಕೆಲಸ ಕಾರ್ಯಗಳನ್ನು ತ್ವರಿತಗತಿಯಲ್ಲಿ ಅಥವಾ ನಿಖರವಾಗಿ ಮಾಡಲಾರರು. ಆದರೆ ಬುದ್ಧಿವಂತಿಕೆ, ಭಾಷಾ ಕೌಶಲ್ಯ ಸಾಮಾನ್ಯವಾಗಿರುತ್ತದೆ", ಅಲ್ಲೇ ಇದ್ದ ಪ್ರಿನ್ಸಿಪಾಲ್ ಮೇಡಂ ಹೇಳಿದರು.

"ಹೌದು, ನನಗೆ ಇದು ಗೊತ್ತಿರಲಿಲ್ಲ, ಮೊದಮೊದಲು ಯಾವ ಲಕ್ಷಣವೂ ಕಾಣಲೇ ಇಲ್ಲ. ನನ್ನ ಕೆಲಸದಲ್ಲಿ ನಾನು ನಿಮಗ್ನಳಾಗಿರುತ್ತಿದ್ದೆ. ಮಕ್ಕಳಿಗೆ 7–8 ತಿಂಗಳು ಆಗುತ್ತಾ ಬಂದಂತೆ ನನ್ನ ಅರಿವಿಗೆ ಬಂತು. ಮನುಗೆ ಮನೋಜ್ ನಂತೆ ಸರ್ವಾಂಗೀಣ ಬೆಳವಣಿಗೆ ಆಗುತ್ತಿಲ್ಲ, ಅವನ ಅರ್ಧದೇಹ ಸ್ವಾಧೀನವೇ ಇಲ್ಲದಂತೆ ಇದೆ. ದಿನ ಕಳೆದಂತೆ ಅವನ ನ್ಯೂನತೆ ನಿಚ್ಚಳವಾಯ್ತು, ಕೂಡುಕುಟುಂಬದಿಂದ ನನ್ನನ್ನು ಹೊರಹಾಕಿದರು" ಕಣ್ಣೀರನ್ನು ಸೆರಗಿನಿಂದ ಒರೆಸುತ್ತ ಎರಡು ನಿಮಿಷದ ವಿರಾಮ ಕೇಳಿದಳು.

ಎಂತಹ ಕ್ರೂರ ಸಮಾಜ? ಎಂತಹ ವ್ಯವಸ್ಥೆ!! ಇಂತಹ ಮಗು ಪಡೆದ ವಿಭಾಳಿಗೆ ಎಲ್ಲರ ಸಹಾನುಭೂತಿ ದೊರಕಬೇಕಾಗಿತ್ತು ಬದಲಿಗೆ?? ಹೀಗೆ ಒಳಮನಸ್ಸು ಪ್ರಶ್ನೆಗಳನ್ನು ಹಾಕುತ್ತಿದ್ದಾಗ, "ನಾನು ಮತ್ತು ನನ್ನ ಗಂಡ ಎರಡು ಕೈ ಕೂಸುಗಳನ್ನು ಎತ್ತಿಕೊಂಡು ಹೊರಬಂದಾಗ ನನಗೆ ಅನಾಥ ಭಾವ. ಜೊತೆಗೆ ವಿಕಲಚೇತನ ಮಗ. ಬೇರೆ ದಾರಿ

ಕಾಣದೆ ಅವರಿವರ ಮನೆಗೆ ಮನೆಕೆಲಸಕ್ಕೆ ಹೋಗಲು ಪ್ರಾರಂಭಿಸಿದೆ. ಒಂದು ಪುಟ್ಟ ಬಾಡಿಗೆ ಮನೆ, ಹೇಗೋ ದಿನಗಳು ಕಳೆಯುತ್ತಿದ್ದವು. ನನ್ನ ಅದೃಷ್ಟ ನನ್ನ ಯಜಮಾನರು ಮಾತ್ರ ಇಂತಹ ಮಗುವೆಂದು ಎಂದೂ ದುಃಖಪಡಲಿಲ್ಲ, ಬದಲಿಗೆ ಇದು ನನ್ನ ಅದೃಷ್ಟದ ಮಗು, ದೇವರು ನನ್ನನ್ನು ಪರೀಕ್ಷೆ ಮಾಡುಗಲೋಸ್ಕರ ಇಂತಹ ದಿವ್ಯಾಂಗ ಮಗನನ್ನು ಕೊಟ್ಟಿದ್ದಾನೆ ಎಂದು ಹೇಳುವುದಲ್ಲದೆ ಪ್ರತಿದಿನ ಎದ್ದ ತಕ್ಷಣ ಈ ಮಗುವಿನ ಮುಖ ನೋಡಿನೇ ಏಳುತ್ತಿದ್ದರು."

ವಿಭಾಳ ಈ ಮಾತುಗಳು ನನಗೆ ಸಮಾಧಾನ ನೀಡಿದವು. ವಿಕಲಾಂಗ ಮಗು ಹುಟ್ಟಿದ ತಕ್ಷಣ ಅನೇಕ ಗಂಡಸರು ಇದು ಹೆಂಡತಿಯ ಕರ್ಮ, ಅವಳ ಪ್ರಾರಬ್ಧ, ಅವಳೇ ಇದಕ್ಕೆ ಕಾರಣ ಎಂದು ದೂಷಿಸುವದಲ್ಲದೇ ಅವರಿಬ್ಬರನ್ನು ಬಿಟ್ಟು ಬೇರೆಲ್ಲೋ, ಮತ್ತೊಬ್ಬರೊಂದಿಗೆ ಬದುಕು ಕಟ್ಟಿಕೊಂಡ ಉದಾಹರಣೆ ಜಾಸ್ತಿ. ಈ ಕಾರಣಕ್ಕಾಗಿನೇ ಇಂತಹ ಶಾಲೆಯಲ್ಲಿ ಒಂಟಿಪಾಲಕರು ಇರುವ ಮಕ್ಕಳೇ ಜಾಸ್ತಿ. ಆ ಮಗುವನ್ನು ಸಾಕುವ ಜವಾಬ್ದಾರಿ, ಬಡತನ, ದುಃಖ ಎಲ್ಲಾ ತಾಯಿಯದೆ. ಆದರೆ ವಿಭಾಳಿಗೆ ಈ ಕಷ್ಟವಿಲ್ಲ, ಅದೇ ಅವಳ ಅದೃಷ್ಟವಾ?!!

ವಿಭಾ ತನ್ನ ಕಥೆ ಮುಂದುವರಿಸಿದಳು. "ಮಕ್ಕಳಿಬ್ಬರಿಗೂ ಐದು ವರ್ಷ ತುಂಬಿತು, ಇಬ್ಬರನ್ನೂ ಒಟ್ಟಿಗೆ ಶಾಲೆಗೆ ಸೇರಿಸಬೇಕು ಹೇಗೆ? ಮತ್ತೆ ಚಿಂತೆ ಕಾಡಿತು ಮೇಡಂ. ಮನೋಜ್‌ನೇನೋ ಮನೆಯ ಸಮೀಪದ ಶಾಲೆಗೆ ಸೇರಿದ. ಮನು? ಹೀಗೊಂದು ವಿಕಲಚೇತನರಿಗಾಗಿ ವಿಶೇಷ ಶಾಲೆ ಇದೆ, ಅದೂ ನನ್ನ ಮನೆಯ ಹತ್ತಿರ ಎನ್ನುವ ವಿಷಯ ತಿಳಿದು, ಅಲ್ಲಿ ಸೇರಿಸಿದೆ. ಬೆಳಿಗ್ಗೆ ಹತ್ತು ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೆ ಮಗು ಅಲ್ಲಿ ಇರುತಿತ್ತು. ನಾನು ಒಂದೆರಡು ಮನೆಗಳ ಮನೆಕೆಲಸ ಮುಗಿಸಿ, ನನ್ನ ಮನೆ ಕೆಲಸ ಮುಗಿಸುತ್ತಿದ್ದೆ."

ಅಯ್ಯೋ!! ದೇವರೇ.. ಎಷ್ಟು ಕಷ್ಟಪಡುತ್ತಾರೆ ನಮ್ಮ ಹೆಣ್ಣುಮಕ್ಕಳು, ದೇವರು ಎಲ್ಲರನ್ನು ಸಮಾನವಾಗಿ ಯಾಕೆ ಹುಟ್ಟಿಸುವುದಿಲ್ಲ, ಎಂದು ದುಃಖ ಉಕ್ಕಿಬಂದಿತು. ವಿಭಾಳ ಕೆಲಸದ ಬಗೆಗೆ ಮೌಲ್ಯಮಾಪನ ನನಗೆ ಮರೆತೆಹೋಯ್ತು. ಜೀವನದ ಪಾಠ ಅವಳನ್ನು ಪೆಟ್ಟು ಕೊಟ್ಟು, ಕೊಟ್ಟು, ಮೂರ್ತಿಯನ್ನಾಗಿಸಿದೆ, ಜೀವನದ ಮೌಲ್ಯ ತಿಳಿಸಿದೆ.

ವಿಭಾ ಹೇಳುತ್ತಲೇ ಇದ್ದಳು. "ಹೀಗೆ ಒಂದುದಿನ ಸಾಯಂಕಾಲ ಶಾಲೆಯಿಂದ ಮನುವನ್ನು ಬಗಲಲ್ಲಿ ಇಟ್ಟುಕೊಂಡು ಮನೆಯೆಡೆಗೆ ಹೊರಟಿದ್ದೆ, ಮುಖ್ಯ ಶಾಲೆಯಿಂದ ಮುಖ್ಯೋಪಾಧ್ಯಾಯಿನಿ ಬಂದವರು ನನ್ನನ್ನು ನೋಡಿ, ನಿಮ್ಮ ಮಗನನ್ನು ಮುಖ್ಯ ಶಾಲೆಗೆ ಕರೆತನ್ನಿರಿ, ಅಲ್ಲಿ ವಿಶೇಷ ಥೇರಪಿ ಇದೆ, ವಿಶೇಷ ಉಪಕರಣಗಳು, ವಿಶೇಷ ಗಾಲಿ ಕುರ್ಚಿ ವ್ಯವಸ್ಥೆ ಇದೆ. ಇಲ್ಲಿ ಮಕ್ಕಳ ಸಂಖ್ಯೆ ಕಡಿಮೆ, ಹೀಗಾಗಿ ಅದೆಲ್ಲ ಇಡುವುದಿಲ್ಲ, ಅವಶ್ಯಕತೆ ಇರುವ ಮಕ್ಕಳನ್ನು ಅಲ್ಲಿಗೆ ಕರೆತರಬೇಕು ಎಂದರು. ಸಂಕೋಚದಿಂದಲೇ ಪ್ರಿನ್ಸಿಪಲ್ ಮೇಡಂಗೆ ಹೇಳಿದೆ. ನಾನು ಮನೆಕೆಲಸ ಮಾಡುತ್ತೇನೆ. ಇಲ್ಲೇ ಸಮೀಪದಲ್ಲಿ ನನ್ನ ಕೆಲಸದ ಮನೆಗಳು, ನನ್ನ ಮನೆ ಇದೆ. ದೂರದಲ್ಲಿರುವ ನಿಮ್ಮ ಮುಖ್ಯ ಶಾಲೆಗೆ ಬಂದರೆ ಜೀವನ ಕಷ್ಟ ಆಗುತ್ತದೆ. ನಾನು ಪಿ.ಯು.ಸಿ. ಮಾಡಿಕೊಂಡಿರುವದನ್ನು ಮರೆಯದೆ ಹೇಳಿದೆ. ಆಗ

ಅವರು, ನಿನ್ನ ಮಗನನ್ನು ಕರೆದುಕೊಂಡು ಬಾ, ಏನಾದರೂ ವ್ಯವಸ್ಥೆ ಮಾಡೋಣ. ಫೀಸಿಯೋಥೇರಪಿ ಇಲ್ಲದೆ ನಿನ್ನ ಮಗು ಸುಧಾರಣೆ ಕಾಣದು ಎಂದು ಹೇಳಿದರು. ರಾತ್ರಿಯೆಲ್ಲಾ ನಿದ್ದೆ ಇಲ್ಲದೆ ಕಳೆದೆ. ಮರುದಿನ ಮುಖ್ಯ ಶಾಲೆಗೆ ಬಂದರೆ ನನಗೆ ಹೊಸ ಜೀವನ ತೆರೆದಿತ್ತು."

"ಪ್ರಿನ್ಸಿಪಾಲ್ ಮೇಡಂ ಹೇಳಿದರು. 'ಚಿಕ್ಕ ಮಕ್ಕಳನ್ನು ನೋಡಿಕೊಂಡು ಅವರಿಗೆ ಟೀಚರ್ ಆಗಿರು. ಮೇಲಿನ ಮಹಡಿಯಲ್ಲಿ ಮನುಗೆ ದಿನಕ್ಕೆ ಒಂದು ತಾಸು ಸರಿಯಾದ ಫೀಸಿಯೋಥೇರಪಿ ಸಿಗುತ್ತದೆ, ನಂತರ ಅವನ ವಯಸ್ಸಿನ ಮಕ್ಕಳೊಂದಿಗೆ ತರಗತಿಯಲ್ಲಿ ಇರುತ್ತಾನೆ, ಆ ಮಕ್ಕಳ ಜೊತೆಗೆ ಅವನ ಆಟಪಾಠ, ಲಾಲನೆಪಾಲನೆ ಆಗುತ್ತದೆ.' ಎಂದರು. ನಂತರ ಶಾಲೆಯ ಒತ್ತಾಸೆಯಿಂದ, ಗಂಡನ ಸಹಕಾರದಿಂದ ಎರಡು ವರ್ಷದ ಇಂತಹ ಮಕ್ಕಳನ್ನು ನೋಡಿಕೊಳ್ಳುವ ವಿಶೇಷ ತರಬೇತಿ ಮುಗಿಸಿದೆ. ಇಂದು ನಿಮ್ಮ ಮುಂದೆ ಕುಳಿತು ಮಾತನಾಡುತ್ತಿರುವೆ, ನನ್ನ ಈ ಉನ್ನತಿಗೆ ನನ್ನ ಈ ಮಗನೇ ಕಾರಣ. ಈ ಶಾಲೆ ನನ್ನ, ನನ್ನ ಮಗನ ಭಾಗ್ಯದ ಬಾಗಿಲು ತೆರೆದಿದೆ. ಈ ಶಾಲೆಗೆ ನಾವು ಸದಾ ಋಣಿ."

ಶಾಲೆಯ ಬಗೆಗೆ ಇಷ್ಟೊಂದು ಋಣಭಾರದ ಭಾವ ಇಟ್ಟುಕೊಂಡ ವಿಭಾಳ ಕೆಲಸಕ್ಕೆ ಮತ್ತೆ ಮೌಲ್ಯಮಾಪನವೇಕೆ ಅನ್ನಿಸಿತು. ಮುಂದಿನ ಟೀಚರನ್ನು ಕರೆಸಿದೆ ಮೌಲ್ಯಮಾಪನಕ್ಕೆ.

ಸಾಯಂಕಾಲ ಐದು ಗಂಟೆಗೆ ನಾನು ಹೊರಗೆ ಬಂದಾಗ, ವಿಭಾ ತನ್ನ ದ್ವಿಚಕ್ರ ವಾಹನದಲ್ಲಿ ಮಗನನ್ನು ಕುಳ್ಳಿರಿಸಿ ಮನೆಯ ಕಡೆ ಹೊರಟಿದ್ದಳು. ತನ್ನ ವಾಹನಕ್ಕೆ ಮಗನು ಕುಳಿತುಕೊಳ್ಳಲು ಸಾಧ್ಯವಾಗುವಂತಹ ವಿಶೇಷ ವ್ಯವಸ್ಥೆ ಮಾಡಿಸಿಕೊಂಡಿದ್ದಳು. ಆತ್ಮ ವಿಶ್ವಾಸ ಅವಳ ಮುಖದಲ್ಲಿ ಎದ್ದು ಕಾಣುತಿತ್ತು.

ದುರದೃಷ್ಟದಲ್ಲೂ, ಅದೃಷ್ಟ ಹೆಕ್ಕಿ ತೆಗೆದವಳು.
ಅಳುವ ತನ್ನ ಧ್ವನಿಯನ್ನು ಜೋಗುಳವಾಗಿಸಿಕೊಂಡವಳು.
ಸಂಸಾರದ ದುಃಖವನ್ನು ಸಸಾರ ಮಾಡಿಕೊಂಡವಳು.

ಅನ್ನುವ ಭಾವ ಮನಸ್ಸನ್ನು ಆವರಿಸಿತು. ವಿಭಾಳ ಆಶಾಭಾವ ಎಲ್ಲರಲ್ಲೂ, ಎಲ್ಲರದಲ್ಲೂ, ನನ್ನಲ್ಲೂ ಬಂದರೆ ದುಃಖವೆಲ್ಲಿದ್ದೀತು?

*****

ಕಥಾ ಪ್ರಪಂಚ

ಮುಲ್ಲಾ ನಸ್ರುದ್ದೀನರ ಕಥೆಗಳು

– ವಿಠ್ಠಲ್ ಇಜೇರಿ

ಮುಲ್ಲಾ ನಸ್ರುದ್ದೀನರ ಸೂಕ್ಷ್ಮ ಹಾಸ್ಯ ಮತ್ತು ನೈತಿಕತೆ ಹೊಂದಿದ ಕತೆಗಳು ಎಷ್ಟೊಂದು ಪ್ರಚಲಿತವೆಂದರೆ ಅವರ ನೆನಪಿಗಾಗಿ ಟರ್ಕಿಯ ಅಕ್ಷಹಿರ್‌ನಲ್ಲಿ ಪ್ರತಿವರ್ಷ ಜುಲೈ 5ರಿಂದ 10ನೇ ದಿನಾಂಕದವರೆಗೆ ನಸ್ರುದ್ದೀನ್ ಹೊಡ್ ಜಾ ಹಬ್ಬ ಆಚರಿಸುತ್ತಾರೆ.

ಮುಲ್ಲಾ ನಸ್ರುದ್ದೀನ್ ಹೊಜಾ, ಟರ್ಕಿಯ ಹೊರ್ಟು ಎಂಬ ಗ್ರಾಮದಲ್ಲಿ 1208ರಲ್ಲಿ ಜನಿಸಿದರು. ಅವರೊಬ್ಬ ತತ್ವಜ್ಞಾನಿ, ಸೂಫಿ ಮತ್ತು ಬುದ್ಧಿವಂತ ವ್ಯಕ್ತಿ. ಇಂದು ನಸ್ರುದ್ದಿನ್ ಕತೆಗಳನ್ನು ಜಗತ್ತಿನ ಅನೇಕ ಭಾಷೆಗಳಿಗೆ ತರ್ಜುಮೆ ಮಾಡಲಾಗಿದೆ. 1996–97ನ್ನು ಯುನೊಸ್ಕೊ 'ಅಂತರರಾಷ್ಟ್ರೀಯ ನಸ್ರುದ್ದಿನ್ ವರ್ಷ' ಎಂದು ಘೋಷಿಸಿತು.

ಅವರ ನಡವಳಿಕೆ ಹುಚ್ಚುತನದಂತೆ ತೋರಿದರೂ, ಅವರು ನಿಜವಾಗಿ ದೈವಿಕ ಪ್ರೇರಿತ, ಮಾನವೀಯ ಗುಣವುಳ್ಳ ಬುದ್ಧಿವಂತ ವ್ಯಕ್ತಿಯಾಗಿದ್ದರು ಎಂದು 'ದಿ ಟರ್ಕಿಶ್ ಜೆಸ್ಟರ್' ಎಂಬ ಪತ್ರಿಕೆ ಬರೆಯಿತು. ನಸ್ರುದ್ದಿನ್ ಕತೆಗಳು ವಿಶ್ವವ್ಯಾಪಿ ಈಸೋಪನ ನೀತಿಕತೆಗಳಲ್ಲೂ, ಬಲ್ಗೆರಿಯನ್ ಜಾನಪದ ಕತೆಗಳಲ್ಲೂ, ರೋಮಿನಿಯನ್ ಕತೆಗಳಲ್ಲಿಯೂ ಹರಡಿಕೊಂಡಿವೆ. ಅವರ ಕತೆಗಳು ಚಿಕ್ಕ ಕತೆಗಳಾದರೂ ಚಲನಚಿತ್ರದಲ್ಲೂ (ದಿ ಬೆಗ್ಗರ್ ಇನ್ ದಿ ಹ್ಯಾರೆಮ್) ಛಾಪು ಮೂಡಿಸಿವೆ.

ಮುಲ್ಲಾ ನಸರುದ್ದಿನ್ ಕತ್ತೆಯ ಮೇಲೆ ಸವಾರಿ ಮಾಡುತ್ತಿದ್ದರು, ಅವರ ಕತ್ತೆ ಸವಾರಿ ಪ್ರತಿಮೆ ಉಜುಕಿಸ್ಥಾನದ ಬುಖಾರ ಪಟ್ಟಣದಲ್ಲಿದೆ. ಅಂಕಾರಾದಲ್ಲಿ ಮುಲ್ಲಾ ಅವರು ಕತ್ತೆಯ ಮೇಲೆ ಬೆನ್ನು ತಿರುಗಿಸಿ ಹಿಂದಿನ ದೃಶ್ಯ ವೀಕ್ಷಿಸುವಂತೆ ಇರುವ ಪ್ರತಿಮೆ ಇದೆ. ಅವರ ಶಿಷ್ಯರು ನೀವೇಕೆ ಹೀಗೆ ಹಿಮ್ಮುಖವಾಗಿ ಕುಳಿತು ಪಯಣಿಸುವಿರಿ ಎಂದು ಕೇಳಿದಾಗ, ಶಿಷ್ಯರಿಗೆ 'ಹಿಂದೆ ಬರುವ ನಿಮ್ಮ ಕರಾಮತ್ತು ತಿಳಿಯಬೇಕಾಗಿದೆ' ಅಂದರಂತೆ.

ಇವರ ಕತೆಗಳಲ್ಲಿ ಇರುವ ವಿಡಂಬನೆ, ಹಾಸ್ಯ ಮತ್ತು ಜೀವನ ಸಂದೇಶ ಗುರುತಿಸಿ ಇವರನ್ನು ತತ್ವಜ್ಞಾನಿ ಎಂದು ಗುರುತಿಸಲಾಗಿದೆ. ಇವರು ಕೆಲಕಾಲ ಸೈನ್ಯದಲ್ಲಿ ಮತ್ತು ಕೇಸರಿ ಎಂಬಲ್ಲಿ ನ್ಯಾಯದಾನದ ಜವಾಬ್ದಾರಿಯನ್ನೂ ನಿರ್ವಹಿಸಿದರು. ಮುಲ್ಲಾ ನಸರುದ್ದಿನ್ ಅವರು 1285ರಲ್ಲಿ ಕಾಲವಾದರು.

ಈಗ ನಸ್ರುದ್ದಿನ್ ಅವರ ಒಂದೆರಡು ಕತೆಗಳನ್ನು ನೋಡೋಣ.

ನಸ್ರುದ್ದಿನ್ ಏಕೆ ಮದುವೆಯಾಗಲಿಲ್ಲ?

ಮುಲ್ಲಾ ನಸ್ರುದ್ದಿನ್ ಪ್ರವಾಸದಲ್ಲಿದ್ದ ದಾರಿಯಲ್ಲಿ ಭೇಟಿಯಾದವರು ಅವನ ವೈಯಕ್ತಿಕ ವಿಚಾರದ ಬಗ್ಗೆ ಕೇಳಿದಾಗ ಏನೋ ಒಂದು ಚುಟುಕು ಉತ್ತರ ಕೊಡುತ್ತಿದ್ದ. ಒಂದು ಸಂಜೆ ಒಂದೂರಿನ ಅರಳೆಕಟ್ಟೆಯ ಮೇಲೆ ವಿಶ್ರಾಂತಿ ಯಲ್ಲಿರುವಾಗ ಅಲ್ಲಿಯೇ ಇದ್ದ ಒಬ್ಬ ಪ್ರಶ್ನಿಸಿದ "ನಿಮಗೆ ಮದುವೆಯಾಗಿದೆಯೇ?"

ಮುಲ್ಲಾ 'ಆಗಿದೆ' ಅಂದರೆ ಹೆಂಡತಿಯ ಬಗ್ಗೆ ವಿಚಾರಿಸುತ್ತಾರೆ ಎಂದು 'ಇಲ್ಲ' ಅಂದ. ಅಲ್ಲಿದ್ದವನು ಮತ್ತೆ ಕೇಳಿದ "ಯಾಕೆ ಮದುವೆಯಾಗಲಿಲ್ಲ?"

ಮುಲ್ಲಾ ಹೇಳಿದ, "ಪರಿಪೂರ್ಣ ಹೆಣ್ಣಿಗಾಗಿ ಹುಡುಕುತ್ತಿದ್ದೆ, ಕೈರೋದಲ್ಲಿ ಚಂದದ ಬುದ್ಧಿವಂತ ಹುಡುಗಿ ಸಿಕ್ಕಳು. ಆದರೆ ತುಂಬಾ ಬಜಾರಿ. ಬಗದಾದನಲ್ಲಿ ಇನ್ನೊಬ್ಬಳು ಸಿಕ್ಕಳು. ಚಂದವೂ, ಬುದ್ಧಿವಂತ, ಸದ್ಗುಣಿ ಸಿಕ್ಕಳು. ಆದರೆ ನಮ್ಮಿಬ್ಬರ ತಾಳಮೇಳ ಸರಿ ಹೋಗಲಿಲ್ಲ. ಹೀಗೆ ಎಲ್ಲಿಯೂ ಪರಿಪೂರ್ಣ ಹೆಣ್ಣು ಸಿಕ್ಕಲಿಲ್ಲ" ಎಂದು ಹೇಳಿ ಮಲಗಲು ನೋಡಿದ. ಅಲ್ಲಿದ್ದವ ಮತ್ತೆ ಕೇಳಿದ "ಹಾಗಾದರೆ ಪರಿಪೂರ್ಣ ಹೆಣ್ಣುಗಳೇ ಇಲ್ಲವೇ?"

ಮುಲ್ಲಾ, "ಇದ್ದಾರೆ, ಅವರಿಗೂ ಪರಿಪೂರ್ಣ ಗಂಡು ಬೇಕಂತೆ?" ಇಷ್ಟು ಹೇಳಿ ಮುಸುಗು ಹಾಕಿ ಮಲಗಿದ.

ಹತ್ತು ಸಾವಿರ ದಿನಾರ ಕೊಡುವೆ

ಸೋಮಾರಿಯೊಬ್ಬ ಮುಲ್ಲಾ ನಸ್ರುದ್ದಿನ್ ಬಳಿ ಬಂದು, "ಬಹಳ ಕಷ್ಟದಲ್ಲಿದ್ದೇನೆ. ಒಂದಿಷ್ಟು ಸಹಾಯಮಾಡು" ಅಂದ.

ಮುಲ್ಲಾ: ನೂರು ದಿನಾರ ಕೊಡುವೆ ನಿನ್ನ ಎಡಗಡೆ ಕಣ್ಣು ಕೊಡು.

ಸೋಮಾರಿ: ಊಹೂ, ಆದಾಗದು,

ಮುಲ್ಲಾ: ಹೋಗಲಿ, ಇನ್ನೂರು ದಿನಾರ ಕೊಡುವೆ ಎರಡೂ ಕಣ್ಣು ಕೊಡು, ಆಗ ನಿನಗೆ ದುಡಿಯಲು ಯಾರೂ ಹೇಳುವುದಿಲ್ಲ.

ಸೋಮಾರಿ : ಊಹೂ ಅದೂ ಆಗದು

ಮುಲ್ಲಾ : ಹಾಗಾದರೆ ಹತ್ತು ಸಾವಿರ ದಿನಾರು ಕೊಡುವೆ ನಿನ್ನ ಪ್ರಾಣ ಕೊಡು, ಆ ಮೇಲೆ ಹೇಗೆ ಬದುಕಬೇಕು ಎಂಬ ಚಿಂತೆಯೇ ಇರದು.

ಸೋಮಾರಿ : ಹತ್ತು ಸಾವಿರ ಅಲ್ಲ, ಲಕ್ಷ ದಿನಾರು ಕೊಟ್ಟರೂ ಪ್ರಾಣ ಕೊಡಲಾರೆ.

ಮುಲ್ಲಾ : ಅಷ್ಟು ಬೆಳೆ ಬಾಳುವ ದೇಹ ಇಟ್ಟುಕೊಂಡು ಹೀಗೆ ಭಿಕ್ಷುಕನಂತೆ ಅಲೆಯುವುದೇಕೆ?

*****

ರಿಪಬ್ಲಿಕ್ ಆಫ್ ನೌರು
(ನೌರು / ನಉರು)

– ರಾಧಿಕಾ ವಿ ಗುಜ್ಜರ್

ವಿಶ್ವದ ಮೂರನೆಯ ಅತೀ ಚಿಕ್ಕ ದ್ವೀಪ ರಾಷ್ಟ್ರವಾದ ನೌರು ಮಧ್ಯ ಪೆಸಿಫಿಕ್ ಸಾಗರದಲ್ಲಿದೆ. 31 ಜನವರಿ, 1968ರಲ್ಲಿ ಯುನೈಟೆಡ್ ಕಿಂಗ್‌ಡಮ್, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನ ಹಿಡಿತಗಳಿಂದ ಮುಕ್ತವಾಗಿ ಸ್ವಾಂತಂತ್ರ್ಯ ಪಡೆಯಿತು. ಈ ದಿನಾಂಕ ಈ ದೇಶದ ರಾಷ್ಟ್ರೀಯ ಹಬ್ಬ, ಅಂದು ರಜೆಯಿರುತ್ತದೆ. ಮುಂದೆ 1969ರಲ್ಲಿ ಪೆಸಿಫಿಕ್ ಒಕ್ಕೂಟದ ಸದಸ್ಯತ್ವ ಪಡೆದು ಸಂಯುಕ್ತ ರಾಷ್ಟ್ರಗಳ ಸಭೆಗೆ ಸ್ವತಂತ್ರ ಪ್ರತಿನಿಧಿಯಾಯಿತು.



- ಯರೆನ್ ಇದರ ರಾಜಧಾನಿ. ಹುರುಳಿಕಾಳು ಆಕಾರದ ದ್ವೀಪವಾದ ಇದರ ಒಟ್ಟು ಭೂ ಅಳತೆ 21 ಚದರ ಕಿಲೋ ಮೀಟರುಗಳು. 5 x 4 ಕಿಲೋ ಮೀಟರುಗಳ ಉದ್ದಗಲವಿದೆ.
- ಇಲ್ಲಿಯ ಜನರು ನೌರನ್ ಭಾಷೆಯನ್ನು ಮಾತನಾಡುತ್ತಾರೆ. ಅತ್ಯಂತ ವಿಶಿಷ್ಟ ಉಚ್ಚಾರಣೆಗಳ ಸೊಗಸಾದ ಭಾಷೆಯಿದು. ಇದಲ್ಲದೆ ಇಂಗ್ಲಿಷ್ ಭಾಷೆಯೂ ಸಹಾ ವ್ಯಾವಹಾರಿಕವಾಗಿ ಬಳಕೆಯಲ್ಲಿದೆ.
- ಈ ದೇಶದ ಜನಸಂಖ್ಯೆ 10,834. (2020ರ ಜನಗಣತಿಯಂತೆ) ವ್ಯಾಟಿಕನ್ ನಗರದ ನಂತರದ 2ನೆಯ ಅತ್ಯಂತ ಕಡಿಮೆ ಜನಸಂಖ್ಯೆಯ ದೇಶವಿದು.
- ಇಲ್ಲಿ ಎರಡು ವಿದೇಶಿ ರಾಯಭಾರಿ ಕಚೇರಿಗಳು ಕಾರ್ಯ ನಿರ್ವಹಿಸುತ್ತವೆ. 1. ತೈವಾನ್, 2. ಆಸ್ಟ್ರೇಲಿಯಾ
- ಇಲ್ಲಿಯ ಹಣದ ರೂಪದಲ್ಲಿ ಆಸ್ಟ್ರೇಲಿಯಾದ ಡಾಲರ್ ಚಲಾವಣೆಯಲ್ಲಿದೆ.
- ಇವರು ಕ್ರಿಶ್ಚಿಯನ್ ಧರ್ಮ ಆಚರಿಸುತ್ತಾರೆ. ತೀರಾ ಬೆರಳೆಣಿಕೆಯಷ್ಟು ಹಳೆಯ ಚೀನೀ ಬುಡಕಟ್ಟು ಕುಟುಂಬಗಳಿವೆ.
- ಸಮುದ್ರದ ಮಧ್ಯದ ದ್ವೀಪವಾದ ಕಾರಣ ಇಲ್ಲಿ ಆರ್ದ್ರತೆ, ಸೆಖೆ ಹಾಗೂ ಹೆಚ್ಚು ಮಳೆಯ ವಾತಾವರಣ ವಿರುತ್ತದೆ. ಸಾಲೋಮನ್ ದ್ವೀಪಗಳ ಈಶಾನ್ಯಕ್ಕಿರುವ ಈ ಸುಂದರ ದ್ವೀಪ ದೇಶಕ್ಕೆ ಪ್ರತಿವರ್ಷ ಬರುವ ಪ್ರವಾಸಿಗಳು ಅಬ್ಬಬ್ಬಾ ಎಂದರೆ 200. ಕೇವಲ 30 ನಿಮಿಷಗಳಲ್ಲಿ ಪ್ರಯಾಣಿಸಿ ಸುತ್ತಬಲ್ಲ ಈ ದ್ವೀಪಕ್ಕೆ ಭೇಟಿ ನೀಡುವವರು ಬಹಳವೇ ಕಡಿಮೆ. ತಗ್ಗಾದ ಮರಳು ದಂಡೆಗಳು, ಹವಳದ ದಿಬ್ಬ ಮುಂತಾದವುಗಳಿಂದ ನಿರ್ಮಿತವಾದ, ಸಮುದ್ರದಿಂದ ಬೇರ್ಪಟ್ಟ ಸ್ಫಟಿಕದಂತೆ ಸ್ವಚ್ಛವಾದ ಪಾರದರ್ಶಕ ಪುಟ್ಟ ತೀರಗಳು, ದಟ್ಟಹಸಿರು



ನೆಲದ ರಾಶಿ, ಒಂದೇ ರೀತಿಯ ಸ್ವಚ್ಛ ನೀಲಿಯ ಕಡಲ ತಡಿ ಇವು ಸ್ವರ್ಗವನ್ನೇ ಮೀರಿಸುವ ಇಲ್ಲಿಯ ನೈಸರ್ಗಿಕ ನೋಟಗಳು.

- ಬೆರಳೆಣಿಕೆಯಷ್ಟು ಉಪಹಾರ ಗೃಹಗಳು, ಅಂಗಡಿಗಳು ಹಾಗೂ ಎಟಿಎಂ
- ಒಂದು ಸ್ವಂತದ ವಿಮಾನ ನಿಲ್ದಾಣ
- ಒಂದು ಆಸ್ಪತ್ರೆ
- ಎರಡು ಹೋಟೆಲ್
- ಒಂದು ಬ್ಯಾಂಕ್
- ಒಂದು ಹಿರಿಯ ಪ್ರಾಥಮಿಕ ಶಾಲೆ
- ಒಂದು ಅಗ್ನಿಶಾಮಕ ದಳ
- ಒಂದು ಅಂಚೆ ಕಚೇರಿ
- ಒಂದು ಪೊಲೀಸ್ ದಳ ಇವೆ

ಇಲ್ಲಿ ಯಾವುದೇ ಚಿತ್ರಮಂದಿರಗಳಿಲ್ಲ. ಆದರೆ ಕ್ಯಾಸೆಟ್, ಸಿಡಿ ಹಾಗೂ ಡಿವಿಡಿಗಳ ಸಂಗ್ರಹಗಳ ಮೂಲಕ ಚಿತ್ರಗಳನ್ನು ವೀಕ್ಷಿಸುವ ಸಂಸ್ಕೃತಿಯಿದೆ. ಅಂತರ್ಜಾಲವಿದ್ದು ಇದರ ಪ್ರಯೋಜನವೂ ವ್ಯಾಪಕವಾಗಿದೆ. ಯಾವುದೇ ದೈನಿಕಗಳಿಲ್ಲ. ಸಮಗ್ರ ವರದಿ ನೀಡುವ ಪಾಕ್ಷಿಕ ಪತ್ರಿಕೆಯಿದೆ. ಇಲ್ಲಿಯ ಜನರು ಒಬ್ಬರನ್ನೊಬ್ಬರು ಬಹಳ ಸ್ನೇಹಭಾವದಿಂದ ಕಾಣುತ್ತಾರೆ. ಬಂಧುಗಳು ಹಾಗೂ ನೆರೆ–ಹೊರೆಯವರೆಲ್ಲ ಆಗಾಗ ಒಟ್ಟಾಗಿ ಸೇರುತ್ತಾರೆ.

ಆಹಾರ, ಪಾನೀಯ, ಆಟಗಳು ಇವರಿಗೆ ಪ್ರಿಯ. ಆಹಾರದಲ್ಲಿ ಅನ್ನ, ಮೀನು, ಮಾಂಸ, ಕೋಳಿ ಹಾಗೂ ಸ್ವಲ್ಪವೇ ತರಕಾರಿ ಬಳಸುತ್ತಾರೆ. ಆಸ್ಟ್ರೇಲಿಯಾ ಹಾಗೂ ನ್ಯೂಜಿಲ್ಯಾಂಡ್‌ನಿಂದ ಆಮದಾದ ಕೃತಕ ರಾಸಾಯನಿಕಗಳ ಬಳಸಿ

ಮಾಡಿದ ಪೊಟ್ಟಣದ ರುಚಿಕರ ಆಹಾರ (ಪ್ಯಾಕ್ಡ್ ಜಂಕ್ ಫುಡ್) ಇಲ್ಲಿ ಬಹಳ ದುಬಾರಿ. ಇದನ್ನು ಇವರೆಲ್ಲ ಹೆಚ್ಚು ಬಳಸುತ್ತಾರಾದ್ದರಿಂದ ಇಲ್ಲಿರುವುದು ಶೇ.71 ಸ್ಥೂಲದೇಹಿಗಳೇ/ಬೊಜ್ಜುಮೈಯವರೇ. ಇದು ಪ್ರಪಂಚದ ಅತೀ ಹೆಚ್ಚಿನ ತಲಾವಾರು ಶೇಕಡವಾಗಿದೆ.

ಯುದ್ಧದ ಟ್ಯಾಂಕ್‌ಗಳಂತೆ ದೈತ್ಯ ದೇಹದ, ದೈತ್ಯ ಸಾಮರ್ಥ್ಯದ ಇವರು ಭಾರ ಎತ್ತುವ ಸ್ಪರ್ಧೆಗಳಿಗೆ ಪ್ರಖ್ಯಾತರು. ಈ ಕ್ರೀಡೆಯಲ್ಲಿ ಜಾಗತಿಕ ದಾಖಲೆಗಳನ್ನು ಹೊಂದಿದ್ದಾರೆ. ಇದಲ್ಲದೆ ಆಸ್ಟ್ರೇಲಿಯನ್ನರ ದೇಸೀಯ ಆಟವಾದ ಫೂಟಿ (ಕಾಲ್ಚೆಂಡು ಮಾದರಿಯ) ಸಹಾ ಇಲ್ಲಿ ಜನಪ್ರಿಯ.



ದೇಶದ ಉದ್ದಗಲಕ್ಕೂ ಅಲ್ಲಲ್ಲಿ ಕಡುನೀಲಿ ಬಣ್ಣದ ಮೇಲೆ ನಕ್ಷತ್ರ ಹಾಗೂ ಒಂದು ಗೆರೆ ಹೊಂದಿದ ತಮ್ಮ ಧ್ವಜವನ್ನು ಹೆಮ್ಮೆಯಿಂದ ಏರಿಸಿರುವುದನ್ನು ಕಾಣುತ್ತೇವೆ. ಅತ್ಯಂತ ದೇಶಭಕ್ತರಾದ ಇವರು ಅದ್ಭುತ ಸ್ನೇಹಜೀವಿಗಳು. 1990 ರವರೆಗೂ ಫಾಸ್ಫೇಟ್ ಗಣಿಗಾರಿಕೆಯಿಂದ ಇಲ್ಲಿಯ ಎಲ್ಲರಿಗೂ ಒಳ್ಳೆಯ ಆದಾಯವಿತ್ತು. ಈಗ ಗಣಿಗಳು ಬರಿದಾಗಿ ಬಡವಾಗಿವೆ. ಈಗಿನ ಪ್ರಜೆಗಳು ಆಸ್ಟ್ರೇಲಿಯಾ ಸೇರಿದಂತೆ ಬೇರೆ ಬೇರೆ ದೇಶಗಳಲ್ಲಿ ವಿದ್ಯಾಭ್ಯಾಸ ಮುಗಿಸಿ, ಅಲ್ಲಿಯೇ ಒಳ್ಳೊಳ್ಳೆಯ ವೃತ್ತಿ ಹಾಗೂ ಸೇವೆಗಳನ್ನು ಕೈಗೆತ್ತಿಕೊಂಡಿದ್ದು, ಇವರು ಪಾರಿವಾಳಗಳಂತೆ. ಎಲ್ಲಿದ್ದರೂ ಮತ್ತೆ ತಾಯ್ನಾಡಿಗೆ ಮರಳುತ್ತಾರೆ.

ಎರಡನೆಯ ವಿಶ್ವಯುದ್ಧದ ಗುರುತು ಹಾಗೂ ಸ್ಮಾರಕಗಳನ್ನು ಈಗಲೂ ಸಂರಕ್ಷಿಸಿದ್ದಾರೆ.

ಒಂದೇ ಒಂದು ಕೊರತೆಯೆಂದರೆ, ಇಲ್ಲಿಯ ಕಸ ಹಾಗೂ ರದ್ದಿ. ರಸ್ತೆಗಳಲ್ಲಿ ಅಲ್ಲಲ್ಲಿ ರಾಶಿ ಕಸ ಕಾಣುತ್ತದೆ. ಮರುಬಳಕೆ ವಸ್ತುಗಳ ರದ್ದಿಯದಂತೂ ಗುಡ್ಡಗಳಿವೆ.

ಇಷ್ಟು ಚಿಕ್ಕ ದೇಶವಾದರೂ ಅತ್ಯಂತ ವಿಶಿಷ್ಟ ದೇಶವಿದು ಎಂಬುದನ್ನು ನಾವೆಲ್ಲರೂ ಒಪ್ಪಲೇಬೇಕು.

*****

‘ಲುನಾನ’ - ನಾನು ನೋಡಿದ ಒಂದು ಚಲನಚಿತ್ರ

– ಗುರುರಾಜ ಶಾಸ್ತ್ರಿ

ನನ್ನ ಸಹೋದ್ಯೋಗಿಯಾಗಿ ಬ್ಯಾಂಕಿನಲ್ಲಿ ಉನ್ನತ ಹುದ್ದೆ ಏರಿ ಕೆಲವು ವರ್ಷಗಳ ಹಿಂದ ಸೇವೆಯಿಂದ ನಿವೃತ್ತಿ ಹೊಂದಿದ ಶ್ರೀ ಚಿದಾನಂದರವರು ಪ್ರತಿ ತಿಂಗಳ ಆರಂಭದಲ್ಲಿ ಅವರ ಫೇಸ್ಬುಕ್ ಪುಟದಲ್ಲಿ ತಾವು ಹಿಂದಿನ ತಿಂಗಳು ಟಿ.ವಿ.ಯಲ್ಲಿ ನೋಡಿದ ಚಿತ್ರಗಳ ಸಂಕ್ಷಿಪ್ತ ವಿವರ ನೀಡುತ್ತಾರೆ. ಈ ವಿವರಗಳು ನಮಗೂ ಚಿತ್ರ ವೀಕ್ಷಿಸಲು ಪ್ರೇರಣೆ ನೀಡುತ್ತದೆ. ಕಳೆದ ತಿಂಗಳು ಈ ಪಟ್ಟಿಯಲ್ಲಿ ಬಂದದ್ದು 2019ರಲ್ಲಿ ಬಿಡುಗಡೆಯಾದ ಭೂತಾನ್ ದೇಶದ ಒಂದು ಚಲನಚಿತ್ರ ‘ಲುನಾನ’.

ಈ ಚಿತ್ರದ ಪೂರ್ಣ ಹೆಸರು ‘ಲುನಾನ – ಎ ಯಾಕ್ ಇನ್ ದ ಕ್ಲಾಸ್ ರೂಂ’.

ಅಂದರೆ, ಲುನಾನ – ಶಾಲಾ ತರಗತಿಯ ಕೊಠಡಿಯಲ್ಲಿ ಒಂದು ಗುಡ್ಡಗಾಡಿನ ಹಸು ಎಂದರ್ಥ. ಇದು ಅಮೇಝಾನ್ ಪ್ರೈಮ್‌ನಲ್ಲಿ ಲಭ್ಯವಿದೆ. ಮೂಲಚಿತ್ರ ಭೂತಾನ್ ದೇಶದ ಜ಼ೋನ್ಕಾ ಭಾಷೆಯಲ್ಲಿದ್ದು ಹಿಂದಿ ಭಾಷೆಗೆ ಡಬ್ಬಿಂಗ್ ಮಾಡಲಾಗಿದೆ. ಹಿಂದಿ ಅರ್ಥವಾಗದವರಿದ್ದರೆ ಅವರಿಗೆ ಆಂಗ್ಲಭಾಷೆಯ ಅನುವಾದದ ವಾಕ್ಯಗಳು (ಸಬ್ ಟೈಟಲ್ಸ್) ಕೂಡಾ ಚಿತ್ರದಲ್ಲಿ ಲಭ್ಯವಿದೆ.

ಈ ಚಿತ್ರದ ನಾಯಕ ಕೆಳ ಮಧ್ಯಮ ವರ್ಗದ ಒಬ್ಬ ಸರ್ಕಾರಿ ಶಾಲೆಯ ಯುವ ಶಿಕ್ಷಕ. ಪಾಠ ಹೇಳಿಕೊಡುವುದರಲ್ಲಿ ಯಾವುದೇ ಆಸಕ್ತಿ ಇಲ್ಲದಿದ್ದರೂ, ಸರ್ಕಾರದ ನಿಯಮದಂತೆ ಐದು ವರ್ಷ ಕಡ್ಡಾಯವಾಗಿ ಕೆಲಸ ಮಾಡಲು ಒಪ್ಪಿದ್ದರಿಂದ ವೃತ್ತಿ ಮುಂದುವರೆಸುತ್ತಿರುತ್ತಾನೆ. ಒಳ್ಳೆಯ ಗಾಯಕನೂ ಆಗಿದ್ದ ಅವನಿಗೆ ದೂರದ ಆಸ್ಟ್ರೇಲಿಯಾ ದೇಶಕ್ಕೆ ಹೋಗಿ ಅಲ್ಲಿ ಗಾಯನ ವೃತ್ತಿ ಆರಂಭಿಸುವ ಹಂಬಲ. ಅವನ ಶಿಕ್ಷಕ ವೃತ್ತಿ ನಾಲ್ಕು ವರ್ಷ ಮುಗಿದಿದ್ದು ಇನ್ನು ಕಡೆಯ ಒಂದು ವರ್ಷಕ್ಕೆ ಅವನಿಗೆ ಬೆಟ್ಟಗುಡ್ಡಗಳ ನಡುವೆ ಇರುವ ಲುನಾನ ಎಂಬ ದೂರದ ಹಳ್ಳಿಗೆ ವರ್ಗಾವಣೆ ಮಾಡುತ್ತಾರೆ.

ತನಗೆ ಅಲ್ಲಿಗೆ ಹೋಗಲು ಇಷ್ಟವಿಲ್ಲದಿದ್ದರೂ ತನ್ನನ್ನು ಸಾಕಿದ ಅಜ್ಜಿಯ ಬಲವಂತಕ್ಕೆ ಲುನಾನ ಹಳ್ಳಿಗೆ ಹೋಗಲು ನಿರ್ಧರಿಸುತ್ತಾನೆ. ಮೊದಲು ತಾಲೂಕು ಕೇಂದ್ರದಂತಹ ಒಂದು ಹಳ್ಳಿಗೆ ಬಸ್ಸಿನಲ್ಲಿ ಹೋಗಿ ತಲುಪುತ್ತಾನೆ. ಲುನಾನದಿಂದ ಬಂದ ಇಬ್ಬರು ಯುವಕರು ಇವನನ್ನು ಸ್ವಾಗತಿಸಿ ಅಂದು ರಾತ್ರಿ ಅಲ್ಲೇ ತಂಗಿ ಬೆಳಿಗ್ಗೆ ಲುನಾನಾಕ್ಕೆ ಕಾಲ್ನಡಿಗೆಯಲ್ಲಿ ಪ್ರಯಾಣ ಆರಂಭಿಸೋಣ ಎಂದು ತಿಳಿಸುತ್ತಾರೆ. ಸದಾ ತನ್ನ ಮೊಬೈಲಿನಲ್ಲಿದ್ದ ಹಾಡುಗಳನ್ನು ಕಿವಿಗೆ ಹಾಕಿಕೊಂಡಿದ್ದು ಇಯರ್ ಫೋನಿನಲ್ಲಿ ಕೇಳುತ್ತಾ ತನ್ನದೇ ಲೋಕದಲ್ಲಿ ಕುಳಿತಿರುವ ಈ ವ್ಯಕ್ತಿ ನಿಜವಾಗಲು ಪಾಠ ಮಾಡುತ್ತಾನೆಯೇ ಎಂಬ ಅನುಮಾನ ಬಂದರೆ ತಪ್ಪೇನಿಲ್ಲ.

ಮಾರನೇ ದಿನದಿಂದ ಬೆಟ್ಟಗುಡ್ಡಗಳಲ್ಲಿ ಒಟ್ಟು ಏಳು ದಿನ ಕಾಲ್ನಡಿಗೆ. ಲುನಾನದ ಯುವಕರು ಇವನನ್ನು ಎಷ್ಟೇ ಮಾತನಾಡಿಸಲು ಪ್ರಯತ್ನಿಸಿದರೂ ಇವನು ಮೊಬೈಲಿನಲ್ಲಿ ಹಾಡು ಕೇಳುತ್ತಲೇ ಇರುತ್ತಾನೆ. ಮೊದಮೊದಲಿಗೆ ಸ್ವಲ್ಪ ಸುಸ್ತಾದಾಗ ಇನ್ನೂ ಎಷ್ಟು ಬೆಟ್ಟ ಹತ್ತಬೇಕು ಎಂದು ಕೇಳುತ್ತಾನೆ. ಮೊದಲ ದಿನ ಬೆಟ್ಟ ಹತ್ತಿದರೆ ಆಯಿತು, ಆಮೇಲೆ ರಸ್ತೆ ಸಮತಟ್ಟಾಗಿರುತ್ತದೆ ಎಂದು ಅವರು ತಿಳಿಸುತ್ತಾರೆ. ಆದರೆ ಎರಡುಮೂರು ದಿನಗಳಾದರೂ ಬೆಟ್ಟಗಳನ್ನೇ ಹತ್ತುತಿರುವುದು ನೋಡಿ ನಾಯಕ ಕೋಪಗೊಂಡಾಗ, ಏಳು ದಿನವೂ ಇದೇ ರೀತಿ ರಸ್ತೆ ಇದೆ ಎಂದು ನಾವು ನಿಮಗೆ ತಿಳಿಸಿದ್ದರೆ ನೀವು ನಮ್ಮೊಂದಿಗೆ ಕಾಲ್ನಡಿಗೆ ಆರಂಭಿಸುತ್ತಲೇ ಇರಲಿಲ್ಲ ಎನ್ನುತ್ತಾರೆ. ಎರಡನೇ ದಿನಕ್ಕೆ ಮೊಬೈಲ್ ಬ್ಯಾಟರಿ ಮುಗಿದಾಗಲೇ ನಾಯಕನಿಗೆ ತಾನು ನಡೆಯುತ್ತಿರುವ ದಾರಿಯಲ್ಲಿ ಎಷ್ಟು ಚೆಂದದ ಪಕ್ಷಿಗಳ ಕೂಗು, ನದಿಯ ಝರಿಗಳ ಸದ್ದು ಕೇಳಿಸುತ್ತಿರುವುದು ತಿಳಿಯುತ್ತದೆ. ಅತ್ಯಂತ ಸುಂದರವಾದ ಪ್ರಕೃತಿಯಲ್ಲಿ ನಡೆದು ಬರುತ್ತಿದ್ದಾಗ ಅವನ ಮನಸ್ಸು ಪರಿವರ್ತನೆಯಾಯಿತೇ, ಇದನ್ನು ನಾನು ತಿಳಿಸುವುದಿಲ್ಲ.

ಏಳು ದಿನದ ನಂತರ, ಲುನಾನ ತಲುಪಿ ಅಲ್ಲಿ ಪಾಳುಬಿದ್ದ ಶಾಲೆ ಮತ್ತು ತನಗೆ ಉಳಿದುಕೊಳ್ಳಲು ನೀಡಿದ ಕೊಠಡಿಯಲ್ಲಿದ್ದ ಸೌಲಭ್ಯಗಳನ್ನು ನೋಡಿ, ಮಾರನೆಯ ದಿನ ಊರ ಮುಖಂಡನಿಗೆ "ನನಗೆ ಈ ಹಳ್ಳಿಯಲ್ಲಿರಲು ಇಷ್ಟವಿಲ್ಲ, ಕೂಡಲೇ ನನಗೆ ಹಿಂದಿರುಗಲು ವ್ಯವಸ್ಥೆ ಮಾಡಿ" ಎಂದು ಹೇಳುತ್ತಾನೆ. ಆದರೆ ಊರಿನ ಯುವಕರು ಸಾಕಷ್ಟು ನಡೆದು ಸುಸ್ತಾಗಿದ್ದರಿಂದ ಸದ್ಯ ಒಂದು ವಾರದ ನಂತರ ಹಿಂದಿರುಗಲು ವ್ಯವಸ್ಥೆ ಮಾಡುವುದಾಗಿ ತಿಳಿಸುತ್ತಾರೆ.

ಆ ಒಂದು ವಾರದಲ್ಲಿ ಅಲ್ಲಿ ನಡೆದ ಘಟನೆಗಳು ಮತ್ತು ಇದು ಚಿತ್ರದ ಕಥೆಯನ್ನು ಹೇಗೆ ಮುಂದುವರೆಸುತ್ತದೆ ಎಂದು ಈಗಲೇ ಹೇಳಿ ನಾನು ಚಿತ್ರ ವೀಕ್ಷಿಸುವ ನಿಮ್ಮ ಕುತೂಹಲವನ್ನು ಕಿತ್ತುಕೊಳ್ಳುವುದಿಲ್ಲ.

ಇದೆಲ್ಲಾ ಸಾಮಾನ್ಯ ಕಥೆಯೇ ಅಲ್ಲವೇ, ಎಷ್ಟೋ ಭಾಷೆಗಳಲ್ಲಿ ಈ ರೀತಿಯ ಚಿತ್ರಗಳು ಬಂದಿರುವುದು ನಾವು ನೋಡಿದ್ದೇವೆ. ಈ ಚಿತ್ರದಲ್ಲಿ ಅಂತಹ ವಿಶೇಷತೆ ಏನು ಎಂದು ನೀವು ಕೇಳಬಹುದು.

ಭೂತಾನ್ ದೇಶ ಅತಿ ಸುಂದರವಾದ ಹಿಮಾಲಯದೊಳಗಿನ ಪ್ರಕೃತಿಯಲ್ಲಿ ಇರುವ ದೇಶ. ಆದರೆ ನಾವೇನಾದರು ಅಲ್ಲಿಗೆ ಪ್ರವಾಸಕ್ಕೆ ಹೋದರೆ ಮುಖ್ಯ ನಗರಗಳನ್ನು ನೋಡಿ ಬರುತ್ತೇವೆ ಅಷ್ಟೇ. ಆದರೆ ನಿಜವಾದ ಭೂತಾನ್ ಪ್ರಕೃತಿ ನೋಡಲು ಕಷ್ಟಸಾಧ್ಯ. ಈ ಚಿತ್ರದ ಮೂಲಕ ಆ ಮೂಲ ಭೂತಾನ್ ದೇಶ ನೋಡಲು ಸಾಧ್ಯ ಮತ್ತು ಆ ಪ್ರಕೃತಿಯನ್ನು ಕಣ್ತುಂಬಿಕೊಳ್ಳುವ ಅವಕಾಶವಿದೆ.

ಈ ಚಲನಚಿತ್ರದಲ್ಲಿ ಪ್ರಕೃತಿ ಪ್ರಿಯರಿಗೆ ಕಾಡುಮೇಡಿನ ಅದ್ಭುತ ದೃಶ್ಯಗಳು ಇದ್ದರೆ, ಸಂಗೀತ ಪ್ರಿಯರಿಗೆ ಸುಮಧುರ ಗುಡ್ಡಗಾಡು ಸಂಗೀತದ ಹಾಡುಗಳಿವೆ. ಹಾಡುಗಳನ್ನು ಮೂಲ ಭಾಷೆಯಲ್ಲೇ ಉಳಿಸಿಕೊಂಡಿರುವುದು ಒಂದು ಒಳ್ಳೆಯ ಸಂಗತಿ.

ಇನ್ನು ಕಥೆ ಬರೆಯುವವರಿಗೆ, ಚಿತ್ರ ಸಂಭಾಷಣೆಯನ್ನು ಹೆಚ್ಚು ಆಲಿಸುವ ಕಡೆಯೇ ಆಸಕ್ತಿ ಇರುವುದು ಸಹಜ. ಕೆಲವೊಂದು ಸಂಭಾಷಣೆಯಂತೂ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಉದಾಹರಣೆಗೆ ನಾಯಕ, ತಾನು ಈ ದೇಶದಲ್ಲಿ ಸಂತೋಷವಾಗಿಲ್ಲ, ನಾನು ಆಸ್ಟ್ರೇಲಿಯಾಗೆ ಹೋಗುತ್ತೇನೆಂದಾಗ, ಮತ್ತೆ "ನಮ್ಮ ದೇಶವನ್ನು ಅತಿ ಸಂತೋಷದ ದೇಶ ಎಂದು ಏಕೆ ಕರೆಯುತ್ತಾರೆ" ಎಂಬ ಹಳ್ಳಿ ಪ್ರಮುಖನ ಪ್ರಶ್ನೆಗೆ ನಾಯಕನಲ್ಲಿ ಉತ್ತರವೇ ಇರುವುದಿಲ್ಲ.

ಹ್ಯಾಪಿನೆಸ್ ಇಂಡೆಕ್ಸ್ ಎಂಬ ಮಾಪನದಲ್ಲಿ ಭೂತಾನ್ ಮೊದಲನೇ ಸ್ಥಾನದಲ್ಲಿರುವುದನ್ನು ನಾವು ಸ್ಮರಿಸಿಕೊಳ್ಳಬೇಕು.

ನಾಯಕನು, ಚಿತ್ರದಲ್ಲಿನ ಒಂದು ಪಾತ್ರಧಾರಿಗೆ "ನೀನೇಕೆ ಯಾವಾಗಲೂ ಹಾಡುತಾ ಇರುತ್ತೀಯಲ್ಲಾ" ಎಂದಾಗ, "ಅದು ನಾನು ಪ್ರಕೃತಿಗೆ ಧನ್ಯವಾಗಳನ್ನು ಹೇಳುವ ಪರಿ" ಎಂಬ ಉತ್ತರ. ಹೀಗೆ ಒಂದೊಂದು ಸಂಭಾಷಣೆಯೂ ತೂಕ ಮಾಡಿ ಬಳಸಲಾಗಿದೆ ಪೂರ್ತಿ ಚಿತ್ರದಲ್ಲಿ.

ಮಕ್ಕಳ ಪಾತ್ರಗಳಿಂದ ಹಿಡಿದು ವಯಸ್ಸಾದ ಹಳ್ಳಿಯ ಪ್ರಮುಖನ ಪಾತ್ರದವರೆಗೂ ಎಲ್ಲರೂ ಅತ್ಯುತ್ತಮವಾಗಿ ನಟಿಸಿದ್ದಾರೆ.

ಚಿತ್ರದಲ್ಲಿನ ಕತೆಯ ಅಂತ್ಯದ ಬಗ್ಗೆ ಬಹಳಷ್ಟು ಮಿಶ್ರ ಪ್ರತಿಕ್ರಿಯೆಗಳು ಅಂತರ್ಜಾಲದಲ್ಲಿ ಬಂದಿದ್ದು ಇದು ನೋಡುವವರ ಆಲೋಚನೆಯ ಮೇಲೆ ಅವಲಂಬಿತವಾಗಿರುತ್ತದೆಂಬುದು ನಮಗೆಲ್ಲಾ ತಿಳಿದೇ ಇದೆ.

ಒಮ್ಮೆ ನೀವೆಲ್ಲರೂ ಈ ಚಿತ್ರವನ್ನು ವೀಕ್ಷಿಸಿ ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಿ ಎಂಬ ಉದ್ದೇಶದಿಂದ ಬರೆದ ಈ ಲೇಖನವನ್ನು ಇಲ್ಲಿಗೆ ಮುಗಿಸುತ್ತಿದ್ದೇನೆ.

*****

ಱೞಕುಳಕ್ಷಳದಿಂ

– ಜೀವಿ.ಹೆಗಡೆ

ಅರ್ಥಪೂರ್ಣವಾದ ಶಬ್ದಗಳ ಸಮೂಹವನ್ನು 'ವಾಕ್ಯ' ಅಂತಲೂ, ಅರ್ಥಪೂರ್ಣವಾದ ಅಕ್ಷರಗಳ ಸಮೂಹವನ್ನು 'ಶಬ್ದ' ಎನ್ನುವದಾಗಿಯೂ ಕರೆಯುವದು ಭಾಷಾ ವಿದ್ಯಾರ್ಥಿಗಳಿಗೆ ಗೊತ್ತು. ಅಂದಮೇಲೆ ಭಾಷೆಯ ಬೆಳವಣಿಗೆಯು ಅಕ್ಷರಗಳ ಬೆಳವಣಿಗೆಯನ್ನು ಕೆಲವು ಮಟ್ಟಿಗೆ ಅವಲಂಬಿಸಿದೆ ಅಂತಾಯಿತು.

ಅಕ್ಷರಗಳನ್ನು ಐದು ಗುಂಪಾಗಿ ವಿಂಗಡಿಸಿದ್ದಾನೆ ಕೇಶೀರಾಜ.

ಕವಿಗಳ್ ಸ್ವರದಿಂ ವರ್ಗದಿ
ನವರ್ಗದಿಂ ಯೋಗವಾಹದಿಂ ದೇಶಿಯಳು
ದ್ಭವಮಪ್ಪ ವರ್ಣದಿಂ ಪಂ
ಚ ವಿಧಂ ತಾನೆಂದು ತಿಳಿಸುವರ್ ಶುದ್ಧಗೆಯಂ

(ಸೂತ್ರ ವಿವರಣೆ: ಕವಿಗಳು ಸ್ವರದಿಂದ, ವರ್ಗಾಕ್ಷರಗಳಿಂದ, ಅವರ್ಗೀಯ ಅಕ್ಷರಗಳಿಂದ, ಯೋಗವಾಹಗಳಿಂದ ಮತ್ತು ದೇಶಿಯ ಅಕ್ಷರಗಳಿಂದ ಹುಟ್ಟಿರುವ ಐದು ವಿಧದ ಅಕ್ಷರಗಳನ್ನು ಶುದ್ಧಗೆ ಎಂದು ಹೇಳುತ್ತಾರೆ)

ಸ್ವರಗಳು	14 (ಅ ದಿಂದ ಔ)
ವರ್ಗೀಯ ವ್ಯಂಜನಗಳು	25 (ಕ ದಿಂದ ಮ)
ಅವರ್ಗೀಯ ವ್ಯಂಜನಗಳು	09 (ಯ ದಿಂದ ಳ)
ಯೋಗವಾಹಗಳು	02 (ಅಂ ಹಾಗೂ ಅಃ)
ದೇಶೀಯ	02 (ಱ ಹಾಗೂ ೞ)
ಒಟ್ಟೂ	52

ಈಗ ಜ಼ ಹಾಗೂ ಫ಼ ಗಳನ್ನೂ ಕನ್ನಡದಲ್ಲಿ ಉಪಯೋಗಿಸುವದುಂಟು. (Zero ಹಾಗೂ forex ಗಳನ್ನು ಗಮನಿಸಿ). ಇವುಗಳನ್ನು ಕನ್ನಡ ಭಾಷೆಯ ಪ್ರಯೋಗದಲ್ಲಿ ಉಪಯೋಗಿಸಲಾಗುತ್ತದೆ ಆದರೆ ವರ್ಣಮಾಲೆಯಲ್ಲಿ ಅಧಿಕೃತವಾಗಿ ಸೇರಿಸಲಿಲ್ಲ.

ಬಹುಶಃ ಎಲ್ಲಾ ಭಾಷೆಗಳಿಗಿಂತಲೂ ಹೆಚ್ಚಿನ ಅಕ್ಷರಗಳು ಕನ್ನಡ ಭಾಷೆಯಲ್ಲಿ ಇವೆ ಅಂತ ನನ್ನ ತಿಳುವಳಿಕೆ.

ಅಕ್ಷರಗಳನ್ನು ಉಚ್ಚರಿಸುವಾಗ ನಾಲಿಗೆ ಹಾಗೂ ತುಟಿಗಳು ಬೇರೆ ಬೇರೆ ಕಡೆ ಇದ್ದು ಸ್ವರಗಳನ್ನು ಹುಟ್ಟಿಸಬೇಕು. ಅಕ್ಷರಗಳು ಬದಲಾವಣೆಯಾಗುವಾಗ ನಾಲಿಗೆ ಹಾಗೂ ತುಟಿಗಳ ಚಲನೆಗಳೂ ಬದಲಾವಣೆಯಾಗಬೇಕು. ಈ ಚಲನೆಗಳು ಸ್ವಯಂಚಾಲಿತವಾದವುಗಳು. ಉದ್ದೇಶಪೂರ್ವಕವಾಗಿ ಚಲಿಸಬೇಕಾದ ಅವಶ್ಯಕತೆ ಇಲ್ಲ. ಹಿರಿಯರು ಮಾತಾಡುವದನ್ನು ಕಲಿತ ಕಿರಿಯರು ತನ್ನಿಂದ ತಾನೇ ಕಲಿತುಕೊಳ್ಳುತ್ತಾರೆ.

ಆದರೆ ಸರಿಯಾಗಿ ಶಬ್ದಗಳನ್ನು ಉಚ್ಚರಿಸಲಾರದ ಮಕ್ಕಳಿಗೆ 'ನಾಲಿಗೆ ಹೊರಳಿಸಲು' ಪ್ರಯತ್ನಿಸುವದೂ ಉಂಟು.

ಹೀಗೆ ಹೆಚ್ಚು ಹೆಚ್ಚು ಸ್ವರಗಳನ್ನು ಉಚ್ಚರಿಸಲು ಸಾಧ್ಯವಾದಾಗ ಭಾಷೆಯ ಹೆಚ್ಚು ಹೆಚ್ಚು ಶಬ್ದಗಳನ್ನು ಹೇಳಬಹುದು. ಬರೆಯುವಾಗ ಒಂದೇ ರೀತಿ ಇರುವ ಶಬ್ದಗಳನ್ನು ಉಚ್ಚರಿಸುವಾಗ ಬೇರೆ ಬೇರೆ ರೀತಿ ಹೇಳಿದಲ್ಲಿ ಅರ್ಥ ವ್ಯತ್ಯಾಸವಾಗುವದುಂಟು.

ಉದಾ: ಬೇಡ=ನಿರಾಕರಣೆ, ಬೇಡ=ಬೇಟೆಗಾರ.

ಆದುದರಿಂದ ಹೆಚ್ಚು ವರ್ಣಗಳನ್ನು ಹೊಂದಿದ ಭಾಷೆ ಹೆಚ್ಚು ಶಬ್ದಗಳನ್ನು ತನ್ನದಾಗಿಸಿಕೊಳ್ಳಬಹುದು.

ಈ ಮಟ್ಟಿಗೆ ಕನ್ನಡ ಭಾಷೆ ಹೆಚ್ಚು ಶ್ರೀಮಂತವಾಗಿದೆ. ತಮಿಳು, ಮಲಯಾಳಿ ಮುಂತಾದ ಭಾರತೀಯ ಭಾಷೆಗಳಿಗಿಂತ ಹೆಚ್ಚು ವರ್ಣಾಕ್ಷರಗಳನ್ನು ಹೊಂದಿದೆ. ಇಷ್ಟೇ ಏಕೆ ಭಾರತೀಯ ಭಾಷೆಗಳ ಜನನಿ ಅಂತ ಕೆಲವರು ಹೇಳುವ ಸಂಸ್ಕೃತದಲ್ಲಿಯೇ ಕನ್ನಡದ ಕೆಲವು ವರ್ಣಗಳಿಲ್ಲ. ಎ, ಏ ಹಾಗೂ ಒ, ಓ ಗಳ ಬದಲಾಗಿ ಏ ಹಾಗೂ ಓ ಮಾತ್ರ ಇವೆ. ಆದುದರಿಂದ ಸಂಸ್ಕೃತ ಅಕ್ಷರಗಳನ್ನು ಕನ್ನಡದಲ್ಲಿ ಸುಲಭವಾಗಿ ಬರೆಯಬಹುದು. ಕನ್ನಡ ಅಕ್ಷರಗಳನ್ನು ಸಂಸ್ಕೃತದಲ್ಲಿ ಸರಿಯಾಗಿ ಬರೆಯಲು ಸಾಧ್ಯವಿಲ್ಲ. ಆದುದರಿಂದಲೇ ಕನ್ನಡದಲ್ಲಿ ಬರೆಯುವ ಹಾಗೆ ಎತ್ತು, ಒತ್ತು, ಎಚ್ಚರ ಹೇಳುವ ಹಾಗೆ ಸಜಾತಿಯ ಒತ್ತಕ್ಷರಗಳನ್ನು ಸಂಸ್ಕೃತದಲ್ಲಿ ಬರೆಯಲು ಸಾಧ್ಯವಿಲ್ಲ.

ಸಂಸ್ಕೃತದಲ್ಲಿ 'ಲಳಯೋರಬೇಧಃ' ಎನ್ನುವ ಮೂಲಕ ಜಲ–ಜಳ ಒಂದೇ ಅಂತಾಗಿದೆ. (ಕನ್ನಡದಲ್ಲಿ ತೊಲೆ–ತೊಳೆ, ಬಲಿ–ಬಳಿ, ಮೊಲೆ–ಮೊಳೆ, ಬೆಲೆ–ಬೆಳೆ ಹೀಗೆ ಲ ಳ ಗಳದು ಬೇರೆ ಬೇರೆಯದೇ ಅರ್ಥ).

ಅಷ್ಟೇ ಏಕೆ ಸಂಸ್ಕೃತಕ್ಕೆ ಸ್ವತಂತ್ರ ಲಿಪಿಯೇ ಇಲ್ಲ ಅಂತಲೂ ಎನ್ನುತ್ತಾರೆ. ಅದು ದೇವನಾಗರೀ ಲಿಪಿ. ಹಿಂದಿಯೂ ಸೇರಿ ಬೇರೆ ಭಾಷೆಗಳಿಗೂ ಆ ಲಿಪಿ ಇದೆ. (ಕೆಲವು ಸಂಸ್ಕೃತ ಕಾವ್ಯಗಳು ಕಾಶ್ಮೀರಿ ಭಾಷೆಯ ಲಿಪಿಯಲ್ಲಿ ಇವೆ ಅಂತ ಓದಿದ ನೆನಪು)

ಇವನ್ನು ತಿಳಿದರೆ ಱೞಕುಳಕ್ಷಳ ದ ಔಚಿತ್ಯ ತಿಳಿಯಬಹುದು. ಕನ್ನಡ ವೈಯಾಕರಣಿಗಳು ಕನ್ನಡ ಈ ಱೞಕುಳಕ್ಷಳ ಕನ್ನಡದ ಹೆಚ್ಚುಗಾರಿಕೆ ಎನ್ನುತ್ತಾರೆ. ಹಳಗನ್ನಡ ಸಾಹಿತ್ಯವನ್ನು ಓದಿದವರಿಗೆ ಱ ಹಾಗೂ ೞ ಅಕ್ಷರಗಳು ವ್ಯಾಪಕವಾಗಿ ಬಳಕೆಯಲ್ಲಿರುವದು ತಿಳಿದುಬರುತ್ತದೆ. 'ಱ' ರ ದ ಪರ್ಯಾಯ ಅಕ್ಷರ ಹಾಗೂ 'ೞ' ಳ ದ ಪರ್ಯಾಯ ಅಕ್ಷರ ಎನ್ನುವದೂ ಗೊತ್ತು.

ಅರಿ–ಅಱ : ತೊಱೆ–ತೊರೆ : ಕಳೆ–ಕೞೆ ಮುಂತಾದವು.
ಹೊತ್ತು – ಸಮಯ ಸೂಚಕವೋ (ಪೊೞ್ತು)?, ಹೊರುವ ಕ್ರಿಯೆಯೋ(ಪೊಱ್ತು)?

ಬಾಳು – ಬದುಕೋ (ಬಾೞು)? ನೀರು ಹರಿಯಲು ಸಸಿಗಳ ಸಾಲಿನ ಎರಡು ತಿಟ್ಟಿನ ನಡುವೆ ತೆಗೆದ ಜಾಗವೋ (ಬಾಳು)?

ಹಾರ – ಹೂವಿನದೋ (ಪಾರ)? ಹೆಬ್ಬಂಡೆಯೋ (ಪಾಱ)?

ಬರೆ – (ಬಱೆ) ಅಕ್ಷರಗಳನ್ನ ಬರೆಯುವುದೋ? (ಬರೆ) ಚರ್ಮದ ಸುಲಿತವೋ?

ಬಳಿ – ದಾರಿಯೋ (ಬೞಿ)? ಹಚ್ಚುವುದೋ (ಬಳಿ)?

ಮೊಳ – ಅಳತೆಗೋಲೋ(ಮೊೞ)? ಚಿಗುರೋ(ಮೊಳ)? – ಹೀಗೆ ಅರ್ಥವ್ಯತ್ಯಾಸವನ್ನು ಮುಂದುವರಿಸಬಹುದು.

ಈ ಱ ಹಾಗೂ ಳ ದ ಭೇದವನ್ನು ಸೂತ್ರಕಾರರು ತಿಳಿಸಿದ್ದು ಹೀಗೆ.

ಅತಿಪೀಡನದಿಂ ರೇಫಾ
ಶ್ರಿತಮಾದ ಱ ಕಾರಮುಂ ಸಮಂತು ಡಕಾರಾ
ಶ್ರಿತಮಾದ ೞನುಮಂಗೀ
ಕೃತಪದಲತ್ವಕ್ಕೆ ಸನೇಮ ಸಲ್ಲದ ಕುಳನುಂ

(ಹಳೆಗನ್ನಡದ 'ರ' ಕಾರ ಹುಟ್ಟುವ ಸ್ಥಾನವನ್ನು (ಅಂದರೆ ದಂತಮೂಲೀಯ ಸ್ಥಾನವನ್ನು) ಒತ್ತಿ ಉಚ್ಚರಿಸಿದಾಗ 'ಱ' ಕಾರವು ಹುಟ್ಟುವುದು. 'ಡ' ಎಂಬ ವ್ಯಂಜನವು ಹುಟ್ಟುವ ಸ್ಥಾನವನ್ನು ಒತ್ತಾಗಿ 'ಳ' ಕಾರವಾಗಿ ಉಚ್ಚರಿಸಿದಾಗ ಹಳೆಗನ್ನಡದ 'ೞ' ಕಾರವು ಹುಟ್ಟುತ್ತದೆ.)

ಅಂದರೆ ಱ ಕಾರ ಹಾಗೂ ಳ ಗಳ ಉಚ್ಚಾರ ವ್ಯತ್ಯಾಸವನ್ನೂ ಶಾಸ್ತ್ರಕಾರರು ತಿಳಿಸಿದ್ದಾರೆ.

ಇನ್ನು ಸಂಸ್ಕೃತದ ಕ್ಷ ಅಕ್ಷರದ ಹಿಂದೆ ಬರುವ 'ಳ' ವನ್ನು ಹೊಂದಿದ ಶಬ್ದಗಳೂ ಬೇರೆಯವೇ ಅಂತೆ.

ಹೀಗೆ ಳ ವನ್ನು ಮೂರು ರೀತಿಯಿಂದ ವಿಂಗಡಿಸುತ್ತಾರೆ.

ಹಳಗನ್ನಡ ಱ ದ ಹಾಗೆ ಕಾಣುವ ಳ (ೞ)

ಶುದ್ಧ ಕನ್ನಡ ಶಬ್ದಗಳಲ್ಲಿ ಬರುವ ಳ (ಕುಳ)

(ಕ ಕಾರದ ಹಾಗೆ ಕಾಣಿಸುವದರಿಂದ ಕುಳ ಎನ್ನುತ್ತಾರೆ)

ಸಂಸ್ಕೃತದ ಶಬ್ದಗಳಲ್ಲಿ ಕ್ಷ ದ ಮೊದಲು ಬರುವ ಳ (ಕ್ಷಳ)

ಇವುಗಳನ್ನು ಬೇರೆಬೇರೆ ಸಂದರ್ಭಗಳಲ್ಲಿಯೇ ಬಳಸುತ್ತಾರೆ. ಇದರಿಂದ ಕನ್ನಡದ ಹಿರಿಮೆ ಹೆಚ್ಚಾಗಬಹುದೇ ವಿನಃ ಕನ್ನಡ ಬೆಳವಣಿಗೆಗೆ ಕಂಟಕವಲ್ಲ. ಶಾಸ್ತ್ರೀಯಭಾಷೆಗೆ ಅದರದೇ ಆದ ವೈಶಿಷ್ಟ್ಯವಿದ್ದಷ್ಟೂ ಅನುಕೂಲ ಹೆಚ್ಚು. ನಮ್ಮ ಕನ್ನಡ ಭಾಷೆಯ ಶಾಸ್ತ್ರೀಯತೆಯನ್ನು ಇಟ್ಟುಕೊಳ್ಳಲು ಕನ್ನಡದ ಎಲ್ಲಾ ವರ್ಣಗಳನ್ನೂ ಉಪಯೋಗಿಸುತ್ತಿರಬೇಕು. ಆದರೆ ಈಗಿತ್ತಲಾಗಿ ಕೆಲವು ವರ್ಣಾಕ್ಷರಗಳನ್ನು ಉಚ್ಚರಿಸಲು ಕಷ್ಟ ಎನ್ನುವ ಕಾರಣಕ್ಕೋ ಅಥವಾ ಯಾವುದೋ ಪೂರ್ವಗ್ರಹದಿಂದಲೋ ಅಧಿಕೃತವಾಗಿಯೇ ವರ್ಣಮಾಲೆಯಿಂದ ಕಳಚುತ್ತಿದ್ದಾರೆ. ಕನ್ನಡದ ಜೀವಾತ್ಮವಾದ ಹಳಗನ್ನಡ ಕಾವ್ಯಗಳಲ್ಲಿ ವಿಫುಲವಾಗಿ ಕಂಡುಬರುವ ಕೆಲವು ವರ್ಣಗಳು ಈಗಾಗಲೇ ಮರೆಯಾಗಿವೆ. (ಉದಾ: ಱ,

ಐ, ಙೂ). ಕೆಲವು ಪಟ್ಟಭದ್ರ ಹಿತಾಸಕ್ತಿಯುಳ್ಳವರು ಇನ್ನೂ ಕೆಲವು ಅಕ್ಷರಗಳಿಗೆ ಕೊಕ್ ಕೊಡುವ ಹವಣಿಕೆಯಲ್ಲಿ ಇದ್ದಾರೆ.

ಆದರೆ ಕನ್ನಡದ ಅಭಿಮಾನಿಗಳು ಅಕ್ಷರಗಳಿಗೆ ಕೊಕ್ ಕೊಡುವ ಬದಲು 'ಞ, ಐ, ಙೂ' ಗಳನ್ನು ಪುನಃ ಸೇರ್ಪಡೆ ಗೊಳಿಸುವದರ ಜೊತೆಗೆ, ಫ಼ ಹಾಗೂ ಜ಼ ದಂತಹ ಅಕ್ಷರಗಳಿಗೂ ಅವಕಾಶ ಕೊಡಬೇಕು.

ಇಂತಹ ಅಭಿಯಾನವನ್ನು ಕನ್ನಡದ ಕಟ್ಟಾಳುಗಳಿಂದ ನಿರೀಕ್ಷಿಸಬಹುದೇ?.

*****

ಸಾಹಿತ್ಯ ದಾಸೋಹ – ಕವನಗಳ ಜುಗಲ್‌ಬಂದಿ

ಬೆಂ.ಶ್ರೀ. ರವೀಂದ್ರ – ಮತ್ತು – ಜಿ.ವಿ. ಅರುಣ

ಇದು ಈ ಬಾರಿಯ ವಿಶೇಷ. ಕ್ರಿಯೆಗೆ ತಕ್ಕ ಪ್ರತಿಕ್ರಿಯೆ – ಕವನಗಳ ಜುಗಲ್‌ಬಂದಿ. ದಾಸೋಹದ ಅಧ್ಯಕ್ಷರಿಗೆ ನಿಮ್ಮ ಬರಹವನ್ನು ಕಳುಹಿಸಿ ಎಂದು ವೇದಿಕೆಯ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರ ತಮ್ಮದೇ ಶೈಲಿಯ ಕವನದ ಮೂಲಕ ಕೋರಿದರು, ಅದಕ್ಕೆ ವೇದಿಕೆಯ ಸದಸ್ಯ ಶ್ರೀ ಜಿ.ವಿ.ಅರುಣ ಅವರು ಕವನದ ಮೂಲಕವೇ ಪ್ರತಿಕ್ರಿಯಿಸಿದರು. ರವೀಂದ್ರ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಪ್ರತಿಕ್ರಿಯೆಯಾಗಿ ಮತ್ತೊಂದು ಕವನ. ಬಹು ಸ್ವಾರಸ್ಯಕರ ಜುಗಲ್‌ಬಂದಿಯ ಈ ಮೂರೂ ಕವನಗಳು ಇಲ್ಲಿವೆ. ಇವು ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿದ ಕವನಗಳಲ್ಲದಿದ್ದರೂ, ಸಾಹಿತ್ಯ ದಾಸೋಹಕ್ಕೆ ಸಂಬಂಧಿಸಿದಂತೆ ನಮ್ಮ ವೇದಿಕೆಯಲ್ಲಿ ಮೂಡಿಬಂದ 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ'ಯನ್ನು ದಾಖಲಿಸುವ ಕಾರ್ಯ ಅಷ್ಟೆ.

ದಾಸೋಹದ ತೊಟ್ಟಿಲು

– ಬೆಂ.ಶ್ರೀ. ರವೀಂದ್ರ

ಕಳಿಸಿಕೊಡಿ ಕಳಿಸಿಕೊಡಿ
ನಿಮ್ಮ ಬರಹದ ಕೂಸು
ಚಿಂತನೆಯ ಮೂಸೆಯಲಿ
ಭಾವಸ್ಫುರಣದಲಿ
ನಿಮ್ಮ ವೈರಿಂಚಿಯನೆಮಗೆ
ದಾಸೋಹದಲಿ
ಉಣಬಡಿಸುವ ಪಾಕವನು
ಅಧ್ಯಕ್ಷರಿಗೆ

ತೂಕವಿಕ್ಕುವುರೇನೋ
ವಿಮರ್ಶಾಕತ್ತಿ ಬೀಸುವುರೇನೋ
ಎಂದಳುಕದಿರಿ
ನಿಮ್ಮ ಕೂಸನವರು
ತಬ್ಬಿ ಮುದ್ದಾಡಿ

ಕಣ್ಣಿಗೆ ಕಾಡಿಗೆಯ ಸವರಿ
ಉಬ್ಬಿದ ಕೆನ್ನೆಗೆ ದೃಷ್ಟಿಬೊಟ್ಟನಿಟ್ಟು
ಭಲಾ ಭಲಾ ಎನ್ನುವರು
ಚೆನ್ನಾಗಿ ಸಾಕಿರೆಂದು ಹೊನ್ನಾದ ನುಡಿಯನಾಡುವರು.

ದಾಸೋಹದ ತೊಟ್ಟಿಲಲಿ
ಬೆಳೆದವರದೆಷ್ಟು ಮಕ್ಕಳು
ದಷ್ಟಪುಷ್ಟವಾಗೀಗ ಎಲ್ಲರ ದೃಷ್ಟಿ ಬಿದ್ದಿದೆ
ಭೇಷ್ ಅನಿಕೊಂಡಿವೆ.

ಇನ್ನೂ ಕಳಿಸದಿರೆ ಕಳಿಸಿಬಿಡಿ ಈಗ
ನಾಳೆ ನೀವೇ ಹಾಡಿ ನಿಮ್ಮ ಕೃಷ್ಣಂಗೆ ಲಾಲಿ... ಲಾಲಿ.

****

ಶ್ರೀ ಬೆಂ.ಶ್ರೀ. ರವೀಂದ್ರರ ಈ ಕವನಕ್ಕೆ ಶ್ರೀ ಜಿ.ವಿ.ಅರುಣರ ಕವನ ಪ್ರತಿಕ್ರಿಯೆ: ಪುಟ 46 ನೋಡಿ

ಮಕ್ಕಳಿಗೆ ಸೈಬರ್ ಸುರಕ್ಷತೆಯತ್ತ ನಾಲ್ಕಾರು ಕಿವಿಮಾತು

– ಶ್ರೀಧರ ಬಾಣಾವರ

ಕಳೆದೆರಡು ವರ್ಷಗಳಿಂದ ಕೊರೊನಾ ಮಹಾಮಾರಿಯ ಪಿಡುಗಿನಿಂದಾಗಿ ಮಕ್ಕಳ ವಿದ್ಯಾಭ್ಯಾಸದ ಕ್ರಮದಲ್ಲೇ ಕ್ರಾಂತಿಕಾರಕ ಬೆಳವಣಿಗೆಯಾಗಿರುವುದು ಸರ್ವವಿದಿತ. ಶಾಲೆಗಳಿಗೆ ಹೋಗಲಾರದೇ ಮನೆಯಿಂದಲೇ ಆನ್‌ಲೈನ್ ಶಿಕ್ಷಣ ಪಡೆಯುವಂತಾಗಿದ್ದು, ಎಲ್‌ಕೆಜಿ ಮಕ್ಕಳಿಂದ ಹಿಡಿದು ಕಾಲೇಜು ವಿದ್ಯಾರ್ಥಿಗಳವರೆಗೆ ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳನ್ನು ಬಳಸುವಂತಾಗಿರುವುದು ಎಲ್ಲೆಲ್ಲೂ ಕಂಡುಬರುವ ಸಂಗತಿ. ವೈಫೈ, ಡೇಟಾ, ಅಂತರ್ಜಾಲ ಇವುಗಳಿಲ್ಲದಿದ್ದರೆ ಎರಡು ವರ್ಷಗಳ ಕಾಲ ಮಕ್ಕಳ ವಿದ್ಯಾಭ್ಯಾಸವೇ ನಿಂತು ಹೋಗುತ್ತಿತ್ತೇನೋ.

ಬಹುತೇಕ ಮಕ್ಕಳಿಗೆ ಈ ಎಲ್ಲ ಪರಿಕರಗಳಲ್ಲಿ ಹಲವನ್ನು ಬಳಸುವ ಅವಕಾಶ ದೀರ್ಘಕಾಲ ದೊರಕಿದ್ದು, ಅವುಗಳ ಬಳಕೆಯ ತಂತ್ರಗಳು ಈ ಅವಧಿಯಲ್ಲಿ ಕರಗತವಾಗಿದೆ. ಇಲ್ಲಿರುವ ಕೆಲವು ಇತಿಮಿತಿಗಳ ಅರಿವಿಲ್ಲದೇಹೋದರೆ ಅನೇಕ ತೊಂದರೆಗಳು ಉದ್ಭವವಾಗುವ, ಉದ್ಭವವಾಗಿರುವ ಸಾಧ್ಯತೆಗಳು ಇವೆ. ಇಂತಹ ಪರಿಸ್ಥಿತಿ ಎದುರಾಗದಂತೆ ನೋಡಿಕೊಳ್ಳಲು ಸಾಧ್ಯವಾಗುವಂತೆ ಸ್ವತಂತ್ರವಾಗಿ ಈ ಪರಿಕರಗಳನ್ನು ದಿನನಿತ್ಯದಲ್ಲಿ ಬಳಸುವ ಮಕ್ಕಳಿಗೆ ಹಲವು ಸರಳ ಸಲಹೆ ಸೂಚನೆಗಳನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇವುಗಳನ್ನು ಮಕ್ಕಳು ಮನದಟ್ಟು ಮಾಡಿಕೊಂಡು ಅಳವಡಿಸಿಕೊಂಡಲ್ಲಿ ಸಂಬಂಧಪಟ್ಟವರೆಲ್ಲರಲ್ಲೂ ಸುರಕ್ಷತೆಯ ಭಾವ ಮೂಡಲು ಸಾಧ್ಯ.

ಮೊದಲನೆಯ ಎಚ್ಚರಿಕೆಯೆಂದರೆ ಇವುಗಳನ್ನು ಯಾವ ಸದುದ್ದೇಶಗಳಿಗೆ ಬಳಸಬೇಕೋ ಅವಕ್ಕೆ ಮಾತ್ರ ಸೀಮಿತ ಗೊಳಿಸಿಕೊಳ್ಳುವುದು. ಸ್ವತಂತ್ರವಾಗಿ ಬಳಸಲು ಸಿಕ್ಕ ಅವಕಾಶವನ್ನು ದುರುಪಯೋಗಪಡಿಸಿಕೊಂಡು ಈ ಸಾಧನಗಳಿಗೆ, ವೈಯುಕ್ತಿಕ ಮಾಹಿತಿಗಳಿಗೆ, ದೇಹ ಪ್ರಕೃತಿಗೆ ಧಕ್ಕೆ ತಂದುಕೊಳ್ಳುವ ಪರಿಸ್ಥಿತಿ ಉಂಟಾಗುವುದು ಬೇಡ. ಶಾಲಾ ಕಾಲೇಜುಗಳ ಪಾಠಗಳಿಗಷ್ಟೇ ಸೀಮಿತಗೊಳಿಸಿಕೊಳ್ಳುವುದು ಅಪೇಕ್ಷಣೀಯವಾದರೂ, ಆನ್‌ಲೈನ್‌ನಲ್ಲಿ ದೊರಕುವ ಸಂಗೀತ, ಕಲೆ, ಫಿಟ್ನೆಸ್ ಮುಂತಾದ ಸಾಧನಗಳ ಮೂಲಕ ಹೊಸತನ್ನು ಕಲಿಯುವ ಅವಕಾಶವನ್ನು ಕಳೆದು ಕೊಳ್ಳಬೇಕೆಂದೇನೂ ಇಲ್ಲ.

ಇನ್ನು ನಮ್ಮ ಮಾಹಿತಿಗಳ ಸುರಕ್ಷತೆಯ ಕಡೆ ಅವಶ್ಯಕವಾಗಿ ಗಮನ ಹರಿಸಬೇಕು. ಮೊದಲಿಗೆ ಮೊಬೈಲ್ ಅಥವಾ ಕಂಪ್ಯೂಟರ್‌ನ ಒಳಹೊಗುವುದಕ್ಕೆ ಶಕ್ತವಾದ, ಸುಲಭಕ್ಕೆ ಊಹಿಸಲಾಗದ ಪಾಸ್‌ವರ್ಡ್ ಒಂದನ್ನು ಹೊಂದಿರಬೇಕೆಂಬ ಅಂಶವನ್ನು ನೀವಾಗಲೇ ತಿಳಿದುಕೊಂಡಿರುತ್ತೀರಿ. ಬೆರಳಚ್ಚನ್ನು ಗುರುತಿಸುವ ಸಾಧನಗಳಿದ್ದರೆ ಇನ್ನೂ ಒಳ್ಳೆಯದು. ಇದಷ್ಟೇ ಅಲ್ಲದೆ ಇಮೆಯಿಲ್, ಫೇಸ್‌ಬುಕ್, ಗೂಗಲ್ ಖಾತೆ, ಮುಂತಾದವಕ್ಕೆ ಬೇರೆ ಬೇರೆ ಪಾಸ್‌ವರ್ಡ್ ಬಳಸಿ. ಹಣ ವ್ಯವಹಾರ ನಡೆಸುವ ತಾಣಗಳಾದ ಬ್ಯಾಂಕ್ ಖಾತೆ, ಪಾವತಿ ಆಪ್‌ಗಳು ಇವುಗಳ ಪಾಸ್‌ವರ್ಡ್‌ಗಳು ಸಂಕೀರ್ಣವಾಗಿದ್ದಷ್ಟೂ ಒಳ್ಳೆಯದು. ಯಾವುದೇ ಕಾರಣಕ್ಕೂ, ಪಾಸ್‌ವರ್ಡ್‌ಗಳನ್ನು ಎಲ್ಲಿಯೂ ಕಾಣುವಂತೆ

ಬರೆದಿಟ್ಟುಕೊಳ್ಳುವುದು, ಇನ್ನೊಬ್ಬರೊಡನೆ ಹಂಚಿಕೊಳ್ಳುವುದು ನಿಮ್ಮನ್ನು ಸಾಕಷ್ಟು ತೊಂದರೆಗೆ ಸಿಲುಕಿಸಬಹುದು. ಓಟಿಪಿ ಆಧಾರಿತ ಸೇವೆಗಳಿದ್ದರೆ ಅವುಗಳ ಗೌಪ್ಯತೆಯನ್ನೂ ಕಾಪಾಡಿಕೊಳ್ಳುವುದು ಅವಶ್ಯಕ.

ಇನ್ನು ನಿಮ್ಮ ತಾಂತ್ರಿಕ ಸಾಮರ್ಥ್ಯವನ್ನು ನಂಬಿ ನಿಮ್ಮ ಪೋಷಕರು ಬಿಲ್ ಪಾವತಿ, ಆನ್‌ಲೈನ್ ಖರೀದಿ, ಹಣ ರವಾನೆ, ಬ್ಯಾಂಕ್ ವ್ಯವಹಾರ ಇತ್ಯಾದಿಗಳನ್ನು ಮಾಡುವ ಜವಾಬ್ದಾರಿಯನ್ನು ನಿಮಗೆ ವಹಿಸಬಹುದು. ಇಲ್ಲಿ ಅವರ ಖಾತೆಗಳಲ್ಲಿ ದೊಡ್ಡ ಮೊತ್ತ ಇರುವ ಸಾಧ್ಯತೆಗಳಿರುವುದರಿಂದ ಅವುಗಳಿಗೆ ಸಂಬಂಧಿಸಿದ ಪಾಸ್‌ವರ್ಡ್, ಓಟಿಪಿ ಮುಂತಾದವುಗಳ ಬಗ್ಗೆ ವಿಶೇಷವಾದ ಎಚ್ಚರಿಕೆ ವಹಿಸುವುದು ಅಗತ್ಯ.

ನಿಮ್ಮ ಶಾಲಾ ಚಟುವಟಿಕೆಗಳು, ಹೆಚ್ಚಿನ ಹವ್ಯಾಸಗಳ ಕುರಿತಾದ ಕಲಿಕೆಗೆ ನೀವು ಅನೇಕ ಜಾಲತಾಣಗಳ ಮೊರೆ ಹೋಗಬೇಕಾಗಬಹುದು. ಇಂತಹ ಜಾಲತಾಣಗಳ ಆಯ್ಕೆಯಲ್ಲಿ ಎಚ್ಚರವಹಿಸುವುದು ಅತ್ಯವಶ್ಯಕ. ನಂಬಲರ್ಹವಾದ ಜಾಲತಾಣಗಳನ್ನಷ್ಟೇ ಗುರುತಿಸುವುದನ್ನು ಕಲಿಯಬೇಕು. ಯಾವುದೋ ಮೆಯಿಲ್‌ನಲ್ಲಿ ಬಂದ ಲಿಂಕ್ ಒತ್ತಿ ಜಾಲತಾಣಗಳಿಗೆ ಪ್ರವೇಶಿಸುವುದು ಅಪಾಯಕಾರಿ ಆಗಬಹುದು. ಅಂತಹ ಜಾಲತಾಣಗಳಲ್ಲಿ ಅಥವಾ ಯಾವುದೇ ಜಾಲತಾಣಗಳಲ್ಲಿ ನಿಮ್ಮ, ನಿಮ್ಮ ಕುಟುಂಬದವರ ವೈಯುಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳುವುದನ್ನು ಯೋಚಿಸಿ ಮಾಡಬೇಕು. ನಿಮ್ಮ ವಯಸ್ಸಿಗೆ ಅವಶ್ಯವಲ್ಲದ ಜಾಲತಾಣಗಳಿಗೆ ಸುಳ್ಳು ಹೇಳಿ ಒಳಹೊಗುವುದು ಸೂಕ್ತವಲ್ಲ.

ಇನ್ನು ಸಾಮಾಜಿಕ ಮಾಧ್ಯಮಗಳಾದ (ಸೋಷಿಯಲ್ ಮೀಡಿಯ) ಫೇಸ್‌ಬುಕ್ ಮುಂತಾದವುಗಳಲ್ಲಿ ಭಾಗವಹಿಸುವಾಗ ಸಹಾ ವಿಶೇಷ ಕಾಳಜಿ ಅವಶ್ಯ. ಇಲ್ಲಿ ಅನವಶ್ಯಕವಾಗಿ ಕುಟುಂಬದ ಸದಸ್ಯರ, ಅದರಲ್ಲೂ ಮಕ್ಕಳ ಚಿತ್ರಗಳನ್ನು ಅಪ್‌ಲೋಡ್ ಮಾಡುವುದು ಅನೇಕ ತೊಂದರೆಗಳಿಗೆ ಎಡೆಮಾಡಿಕೊಡಬಹುದು. ಗೆಳೆತನದ ಆಹ್ವಾನಗಳನ್ನು ನೀಡಿ ಹಣ ದೋಚುವ ಪ್ರಸಂಗಗಳು ಇತ್ತೀಚೆಗೆ ತುಂಬಾ ಹೆಚ್ಚುತ್ತಿರುವ ಸಂಗತಿ ದಿನವೂ ಬರುತ್ತಿದೆ.

ನಿಮ್ಮ ಎಲ್ಲಾ ಸೈಬರ್ ಚಟುವಟಿಕೆಗಳಿಗೂ ಬೆನ್ನೆಲುಬು, ಡೇಟಾ ಎಂದು ಕರೆಯಲ್ಪಡುವ ಮಾಧ್ಯಮ. ಇದರಲ್ಲಿ ಮೊಬೈಲ್ ಡೇಟಾ, ವೈಫೈ ಡೇಟಾಗಳ ಬಳಕೆಯ ಬಗ್ಗೆಯೂ ಎಚ್ಚರವಹಿಸಬೇಕಾದ ಅಗತ್ಯವಿದೆ. ಪುಕ್ಕಟೆಯಾಗಿ ಎಲ್ಲೆಂದರಲ್ಲಿ ಸಿಗುವ ವೈಫೈ ಡೇಟಾ ಬಳಸುವಾಗ ಸಾಕಷ್ಟು ಎಚ್ಚರ ವಹಿಸಬೇಕಾಗುತ್ತದೆ. ಹಣಕಾಸಿನ ವ್ಯವಹಾರಗಳನ್ನೊಳಗೊಂಡ ಯಾವುದೇ ಜಾಲತಾಣಗಳನ್ನು ಸಾರ್ವಜನಿಕವಾಗಿ ಸಿಗುವ ವೈಫೈ ಡೇಟಾ ಬಳಸಿ ಮಾಡಲೇ ಬಾರದು. ಸಾಧ್ಯವಾದಷ್ಟು ಮನೆಯಲ್ಲಿನ, ನಂಬಲರ್ಹವಾದ ಸ್ಥಳದಲ್ಲಿನ ವೈಫೈ ಡೇಟಾ ಬಳಸುವುದು ಯಾವಾಗಲೂ ಸುರಕ್ಷಿತ.

ಮೊಬೈಲ್‌ಗಳಲ್ಲಿ ನಿಮಿಷ ನಿಮಿಷಕ್ಕೂ ಆಪ್‌ಗಳು ಪ್ರತಿಷ್ಠಾಪನೆಗೊಳ್ಳುತ್ತಿರುತ್ತವೆ. ಪ್ಲೇ ಸ್ಟೋರ್ ಅಥವಾ ಆಪಲ್ ಸ್ಟೋರ್‌ನಲ್ಲಿ ಸ್ಥಾಪಿತವಾಗಿರುವ ಆಪ್‌ಗಳು ಸ್ವಲ್ಪಮಟ್ಟಿಗೆ ನಂಬಲರ್ಹವಾಗಿರುತ್ತವೆ. ಯಾವುದೋ ಕರೆಯ ಮೂಲಕ

ಆಪ್ ಸ್ಥಾಪಿಸುವಂತೆ ಬರುವ ಆದೇಶಗಳನ್ನು ನಿರಾಕರಿಸುವುದು ಒಳ್ಳೆಯದು. ಇಂತಹವುಗಳು ಕುತಂತ್ರಾಂಶಗಳಾಗಿರಬಹುದು. ನಿಮ್ಮ ಅಥವಾ ನೀವು ಬಳಸುತ್ತಿರುವ ನಿಮ್ಮ ಪೋಷಕರ ಮೊಬೈಲ್‌ಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕುವ ಸಾಧ್ಯತೆಗಳಿರುತ್ತವೆ.

ಮೇಲೆ ತಿಳಿಸಿರುವಂತೆ ನಿಮ್ಮ ಪೋಷಕರ ಪರವಾಗಿ ಅವರ ಮೊಬೈಲ್ ಅಥವಾ ಕಂಪ್ಯೂಟರ್ ಬಳಸಿ ಯಾವುದೇ ಹಣಕಾಸಿನ ವ್ಯವಹಾರ –ನೆಟ್‌ಬ್ಯಾಂಕಿಂಗ್ ಅಂದುಕೊಳ್ಳಿ– ಮಾಡುವಾಗ ಅದಕ್ಕೆ ಸಂಬಂಧಿಸಿದ ಜಾಲತಾಣಗಳು ಸೂಚಿಸುವ ಸುರಕ್ಷತಾ ನಿಯಮಗಳನ್ನು ತಪ್ಪದೇ ಪರಿಶೀಲಿಸಿ ಹಾಗೂ ಪಾಲಿಸಿ. ಹೆಚ್‌ಟಿಟಿಪಿಎಸ್ (https) ಗುರುತುಳ್ಳ ಜಾಲತಾಣಗಳು, ಟು ಫ್ಯಾಕ್ಟರ್ ಅಥೆಂಟಿಕೇಶನ್ (two factor authentication) ಮುಂತಾದ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿದುಕೊಳ್ಳಿ. ಇವುಗಳ ಬಗ್ಗೆ ಹಾಗೂ ಇನ್ನೂ ಅನೇಕ ತಾಂತ್ರಿಕ ವಿಷಯಗಳ ಬಗ್ಗೆ ಸರಳ ಕನ್ನಡದಲ್ಲಿ ಮಾಹಿತಿ ನೀಡುವ ಜಾಲತಾಣ ejnaana.com ಗೆ ಭೇಟಿ ಕೊಟ್ಟು ತಾಜಾ ಮಾಹಿತಿಗಳನ್ನು ಪಡೆದುಕೊಳ್ಳಿ.

*****

ಸಾಹಿತ್ಯ ದಾಸೋಹ – ಕವನಗಳ ಜುಗಲ್‌ಬಂದಿ

ಬೆಂ.ಶ್ರೀ. ರವೀಂದ್ರ – ಮತ್ತು – ಜಿ.ವಿ. ಅರುಣ

ಪುಟ 43ರಲ್ಲಿನ ಶ್ರೀ ಬೆಂ.ಶ್ರೀ. ರವೀಂದ್ರರ ಕವನಕ್ಕೆ ಶ್ರೀ ಜಿ.ವಿ. ಅರುಣ ಅವರ ಪ್ರತಿಕ್ರಿಯಾ ಕವನ:

ನಿಮಗೆ ಗೊತ್ತೇ!?

– ಜಿ.ವಿ. ಅರುಣ

ಕವಿತೆ ಹುಟ್ಟುವ ಸಮಯ,
ಕಥೆ ಬೆಳೆಯುವ ಸಮಯ
ನಿಮಗೆ ಗೊತ್ತೇ?

ಮನದಲೆಲ್ಲೋ ಅವಿತಿದ್ದು,
ಗೊತ್ತಿಲ್ಲದೇ ಕುದ್ದು
ಉಕ್ಕುವ ಸಮಯ ಗೊತ್ತೇ?

ಎನುತ ಮಲಂಗಿದವಗೆ
ಎಲ್ಲವೂ ನಿರಾಳ,
ಸೋಮಾರಿಗಿಹ ಸುಖ ಗೊತ್ತೇ!

ಎಚ್ಚರಿಸಿತು ಚಬಕಿನ ಸಪ್ಪಳ
ಕೇಳಿಸಿತು ರವಿಯ ಅಶರೀರವಾಣಿ
"ಚಾವಟಿಯ ರುಚಿ ಗೊತ್ತೇ!?"

ದಡಬಡಿಸಿ ಎದ್ದು ಕೇಳದೆ,
ಕಥೆ, ಕವನಗಳ ನಿಮಿಷದಿ
ಬರೆಯಬಲ್ಲೆ, ನಿಮಗೆ ಗೊತ್ತೇ?

ಡೆಡ್‌ಲೈನ್ ವೀರರು ನಾವು
ನೋಡಿಯೋ ರತ್ನಗಳು
ನಮಗೆ ನಾವೇ ಸಾಟಿ, ನಿಮಗೆ ಗೊತ್ತೇ!

***

ಶ್ರೀ ಜಿ.ವಿ.ಅರುಣರ ಈ ಕವನಕ್ಕೆ ಶ್ರೀ ಬೆಂ.ಶ್ರೀ. ರವೀಂದ್ರರ ಕವನ ಪ್ರತಿಕ್ರಿಯೆ: ಪುಟ 56 ನೋಡಿ

ವೇದಗಳಲ್ಲಿ ಲೌಕಿಕ ಸೂಕ್ತಗಳು

- ಶಾಂತಾ ನಾಗಮಂಗಲ

ಸಾಮಾನ್ಯವಾಗಿ ವೇದಗಳು ಎಂದರೆ ಮಡಿ ಮಡಿಯಾಗಿ, ಕಚ್ಚೆಪಂಚೆ ಅಥವಾ ಕಚ್ಚೆಹಾಕದೆ ಪಂಚೆ ಉಟ್ಟು ಶಲ್ಯ ಹೊದ್ದು, ಹಣೆಯಲ್ಲಿ ಢಾಳಾಗಿ ವಿಭೂತಿಯ ಪಟ್ಟೆ ಇಟ್ಟು, ಶ್ರುತಿಮಧುರವಾದ ಏರಿಳಿತಗಳೊಂದಿಗೆ ಪಠಣಮಾಡುವ ಶ್ಲೋಕ ಅಥವಾ ಪದ್ಯದಂತಹ ರಚನೆ ಎಂಬುದೇ ಹೆಚ್ಚು ಪ್ರಚಲಿತ. ಸಂಸ್ಕೃತ ಅದೂ ವೈದಿಕ ಸಂಸ್ಕೃತದಲ್ಲಿರುವ ವೇದಗಳ ಅರ್ಥಪಠಣದಲ್ಲಿ ತಿಳಿಯುವುದು ಕಷ್ಟವೇ. ಓದಿದರೂ ಸಂಸ್ಕೃತ ಬಲ್ಲವರಿಗೂ ಸುಲಭವಾಗಿ ಕೈಗೆಟುಕುವಂತದಲ್ಲ. ಸಾಯಣರ ಭಾಷ್ಯವಿಲ್ಲದಿದ್ದರೆ ವೇದಾರ್ಥ ಕೈಗೆಟುಕುತ್ತಲೇ ಇರಲಿಲ್ಲವೇನೋ ಈಗಿನವರಿಗೆ. ಈ ನಿಗೂಢತೆಯಿಂದಾಗಿ, ವೇದಗಳು ಎಂದರೆ ಬಹುತೇಕ ಹೋಮ ಹವನ, ಯಾಗ ಯಜ್ಞಗಳಲ್ಲಿ, ದೇವತಾ ಪೂಜೆಗಳ, ರಥೋತ್ಸವಗಳ ಸಂದರ್ಭಗಳಲ್ಲಿ ಬಳಸುವ ಋಚೆಗಳು, ಮಂತ್ರಗಳು, ಸೂಕ್ತಗಳು ಎನ್ನುವಲ್ಲಿಗೆ ಸೀಮಿತವಾಗಿವೆ. ವೇದದ ಬಹುಪಾಲು ಯಜ್ಞದ ವಿನಿಯೋಗಕ್ಕೇ ಇವೆಯಾದರೂ, ಜಾನಪದಕ್ಕೆ ಬಹಳ ಹತ್ತಿರವಾದ ಅಥವಾ ಆ ಹೊತ್ತಿನ ಆಡುಭಾಷೆಯಾಗಿದ್ದ ಸಂಸ್ಕೃತದಲ್ಲಿರುವ ಜಾನಪದ ಸಾಹಿತ್ಯವೇ ಆಗಿರುವ ವೇದಗಳು ಲೋಕಜೀವನಕ್ಕೆ ಬಲು ಹತ್ತಿರವಾಗಿವೆ. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಸೂಕ್ತಗಳಲ್ಲದೆ ಕುತೂಹಲ ಕೆರಳಿಸುವ, ಜನಜೀವನದ ಇತರ ಮಗ್ಗಲುಗಳ ವಿಷಯಗಳಿಗೆ ಸಂಬಂಧಿಸಿದ ಸೂಕ್ತಗಳೂ ವೇದದದಲ್ಲಿ ಹೇರಳವಾಗಿ ಕಂಡುಬರುತ್ತವೆ.

ಲೋಕಕ್ಕೆ ಸಂಬಂಧಿಸಿದ್ದು ಲೌಕಿಕ. ಮದುವೆ, ಮಕ್ಕಳು, ಬದುಕಿನ ದಿನದಿನದ ಜಂಜಾಟಗಳು, ಮಾನವ ಸಹಜವಾದ ದೌರ್ಬಲ್ಯಗಳು, ಮೋಸ-ವಂಚನೆ, ದ್ವೇಷ-ಅಸೂಯೆ, ಮಾಟ-ಮದ್ದು, ಮರಣದಂತಹ ವಿಪ್ಲವವನ್ನು ತರುವ ಸಂಗತಿಗಳು, ಹಾಸ್ಯ, ಧರ್ಮ- ಎಲ್ಲವೂ ಲೋಕಜೀವನದಲ್ಲಿ ಎಲ್ಲ ಕಾಲದಲ್ಲೂ ಇದ್ದೇ ಇವೆ. ವೇದಕಾಲದ ಸಮಾಜದಲ್ಲೂ ಇವೆಲ್ಲವೂ ಈಗಿರುವಷ್ಟೇ ಪ್ರಚುರಮಾತ್ರೆಯಲ್ಲಿ ಇದ್ದವು ಎನ್ನಬಹುದು. ಅಂಥಹವನ್ನು ಕಂಡ ವೇದದ ಋಷಿಗಳು ಅವನ್ನೂ ನಿಷ್ಪಕ್ಷಪಾತ ಮನೋಭಾವದಿಂದ, ಯಾವ ಭಿಡೆ, ಸಂಕೋಚಗಳಿಲ್ಲದೆ ಸೂಕ್ತಗಳಲ್ಲಿ ದಾಖಲಿಸಿದ್ದಾರೆ. ಈ ಸೂಕ್ತಗಳೇ ನಮಗೆ ವೇದಕಾಲೀನ ಜನಜೀವನದ, ಸಮಾಜದ ಪರಿಚಯವನ್ನು ನಮಗೆ ಮಾಡಿಸಿಕೊಡುತ್ತವೆ. ಇಂಥಹ ಸೂಕ್ತಗಳನ್ನು ಆಧುನಿಕ ವಿದ್ವಾಂಸರು "ಲೌಕಿಕ ಸೂಕ್ತಗಳು" ಎಂದು ಕರೆದು ವರ್ಗೀಕರಿಸಿದ್ದಾರೆ. ವೇದದಲ್ಲಿ ಕಂಡುಬರುವ ಲೌಕಿಕ ಸೂಕ್ತಗಳೆಂದರೆ-

- ದಾನಸ್ತುತಿಗಳು
- ಔರ್ಧ್ವದೈಹಿಕ ಸೂಕ್ತಗಳು
- ಸಂವಾದ ಸೂಕ್ತಗಳು
- ಐತಿಹಾಸಿಕ ಸೂಕ್ತಗಳು
- ಬ್ರಹ್ಮೋದ್ಯಗಳು
- ಮಂಡೂಕ ಸೂಕ್ತಗಳು
- ಅಕ್ಷಸೂಕ್ತ
- ವಿವಾಹಸೂಕ್ತ
- ಅಭಿಚಾರಕ ಸೂಕ್ತಗಳು

ಮೇಲಿನ ಪಟ್ಟಿಯ ಎಲ್ಲಾ ಸೂಕ್ತಗಳಿಗೆ ಅವುಗಳದೇ ಆದ ವಿಶೇಷ ಮಹತ್ವಗಳಿವೆ. ಆದರೂ ನನಗೆ ನನಗೆ ಬಹಳ ಕುತೂಹಲ ಹುಟ್ಟಿಸಿದ್ದು "ಅಕ್ಷಸೂಕ್ತ". ಇದಕ್ಕೆ "ಕಿತವಸೂಕ್ತ" ಎಂಬ ಹೆಸರೂ ಇದೆ.

ಈ ಅಕ್ಷಸೂಕ್ತವು ಋಗ್ವೇದದ ದಶಮಮಂಡಲದಲ್ಲಿ 34ನೇ ಸೂಕ್ತವಾಗಿದೆ. ಅಕ್ಷಸೂಕ್ತ ಅಥವಾ ಕಿತವಸೂಕ್ತವೆಂದರೆ ಜೂಜು ಮತ್ತು ಜೂಜುಕೋರನ ಜೂಜಿನ ಕುರಿತಾದ ದೌರ್ಬಲ್ಯ, ಜೂಜಿನ ದಾಳಗಳ ತಪ್ಪಿಸಿಕೊಳ್ಳಲಾಗದ ಸೆಳೆತ, ಎಲ್ಲವನ್ನೂ ಕಳೆದುಕೊಂಡಿರುವ ಜೂಜುಕೋರನ ಸ್ವಗತ– ಎಲ್ಲವನ್ನೂ ಬಣ್ಣ ಬಣ್ಣವಾಗಿ ಬಣ್ಣಿಸುವ ಸೂಕ್ತಗಳು. ಕಿತವ ಎಂದರೆ ಜೂಜುಕೋರ ಎಂದರ್ಥ.

ದಾಳಗಳ ಮತ್ತು ಬಣ್ಣ ಬಣ್ಣದ ಕಾಯಿಗಳ ಸೆಳೆತಕ್ಕೆ ಒಳಗಾಗಿ ತಾನು ಹೇಗೆ ತನ್ನ ಸಂಸಾರ ಸುಖವನ್ನು ಕಳೆದುಕೊಂಡೆ, ಹೇಗೆ ಮಡದಿ ಮಕ್ಕಳ ಕಣ್ಣಿಗೆ ಹೀನಾಯವಾದೆ ಎಂದೆಲ್ಲಾ ಒಬ್ಬ ಜೂಜುಕೋರ ಇಲ್ಲಿ ತೋಡಿಕೊಳ್ಳುತ್ತಿದ್ದಾನೆ.

ಜೂಜುಕೋರನಿಗೆ ಕಾಯಿ ಮತ್ತು ದಾಳಗಳನ್ನು ನೋಡುವುದರಿಂದಲೇ ಮದವೇರುತ್ತದೆ. ಹರ್ಷೋನ್ಮಾದವೇರಿ ಅದರತ್ತ ಧಾವಿಸುತ್ತಾನೆ ಎನ್ನುತ್ತದೆ ಈ ಕೆಳಗಿನ ಮಂತ್ರ–

ಪ್ರಾವೇಪಾ ಮಾ ಬೃಹತೋ ಮಾದಯಂತಿ
ಪ್ರವಾತೇಜಾ ಇರಿಣೇ ವರ್ವೃತಾನಾಃ ।
ಸೋಮಸ್ಯೇವ ಮೌಜವತಸ್ಯ ಭಕ್ಷೋ
ವಿಭೀದಕೋ ಜಾಗೃವಿರ್ಮಹ್ಯಮಚ್ಛಾನ್ ॥

ಮೂಜವಾನ್ ಪರ್ವತದ ಮೇಲೆ ಬೆಳೆದ ಸೋಮಲತೆಯ ಪಾನ ಯಜ್ಞದಲ್ಲಿ ಯಜಮಾನನಿಗೂ ದೇವತೆಗಳಿಗೂ ಮದವನ್ನುಂಟು ಮಾಡುವಂತೆ, ಸೋಲು, ಗೆಲುವು, ಹರ್ಷ ಶೋಕಗಳಿಂದ ಕೂಡಿದ ಜಾಗರಣೆಗೆ ಕಾರಣವಾದ ವಿಭೀತ ಫಲಗಳಿಂದಾದ ದಾಳಗಳು ಉರುಳಿದಾಗ ನನಗೆ ಅದು ಮದವನ್ನುಂಟು ಮಾಡುತ್ತವೆ– ಎನ್ನುತ್ತಾ ತನ್ನ ದೌರ್ಬಲ್ಯವನ್ನು ಒಪ್ಪಿಕೊಳ್ಳುತ್ತಾನೆ ಜೂಜುಕೋರ.

ಈ ದೌರ್ಬಲ್ಯದ ಕಾರಣದಿಂದಲೇ ನಿರಪರಾಧಿನಿಯಾದ, ಚಿನ್ನದಂತಹ ಮಡದಿಯನ್ನು ಮನೆಯಿಂದ ಓಡಿಸಿಬಿಟ್ಟೆ ನಾನು ಎಂದು ದುಃಖಿಸುವ ಚಿತ್ರಣ ಈ ಕೆಳಗಿನ ಮಂತ್ರದ್ದು–

ನ ಮಾ ಮಿಮೇಥ ನ ಜಿಹೀಳ ಏಷಾ
ಶಿವಾ ಸಖಿಭ್ಯ ಉತ ಮಹ್ಯಮಾಸೀತ್ ।
ಅಕ್ಷಸ್ಯಾಹಮೇಕಪರಸ್ಯ ಹೇತೋಃ
ಅನುವ್ರತಾಮಪ ಜಾಯಾಮರೋಧಮ್ ॥

ಪಾಪ ಅವನ ಮಡದಿ ಇವನ ಜೂಜಿನ ಚಟಕ್ಕೆ ಮೊದಮೊದಲು ಕೋಪಿಸಿಕೊಂಡವಳಲ್ಲವಂತೆ. ಅವನನ್ನು ಅಪಮಾನಿಸಿ ಬೈದದ್ದೂ ಇಲ್ಲವಂತೆ. ಇವನ ಜೊತೆ ಕೂತು ಜೂಜಾಡುತ್ತಿದ್ದ ಗೆಳೆಯರನ್ನು ಬೈದು, ಅಂದು ಮಾಡದೇ ಮೃದುವಾಗಿಯೇ ಇದ್ದಳಂತೆ. ಇವನ ಚಟ ಮಿತಿಮೀರಿ ಮನೆಮುಳುಗಿಸುವ ಮಟ್ಟಕ್ಕೆ ಹೋದಾಗ, ಒಂದು ದಿನ

ವಿರೋಧಿಸಿರಬಹುದು. ಆ ಕಾರಣಕ್ಕೇ ಆ ಪಾಪದ ಸುಶೀಲೆಯನ್ನು, ಅನುಕೂಲೆಯನ್ನು ಈ ದಾಳದ ಆಟಕ್ಕೆ ದಾಸನಾಗಿ (ಅಕ್ಷಸ್ಯಾಹಮೇಕಪರಸ್ಯ ಹೇತೋಃ) ಮನೆಯಿಂದ ದಬ್ಬಿಬಿಟ್ಟಿದ್ದೇನೆ, ನಾನು ಪಾಪಿ– ಎಂದೆಲ್ಲಾ "ಊರು ಸೂರೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರು" ಎಂಬಂತೆ ಈಗ ಗೋಳಾಡುತ್ತಿದ್ದಾನೆ.

ಜೂಜುಕೋರರಿಗೆ ಎಂದೂ ಯಾವ ಸಮಾಜದಲ್ಲೂ ಗೌರವವಿರುವುದಿಲ್ಲ. ಅಂದೂ ಇರಲಿಲ್ಲ. ರಾತ್ರಿಯೆಲ್ಲಾ ಜೂಜಿನಕಟ್ಟೆಯಲ್ಲಿ ದಾಳ ಬಡಿದು, ಎಲ್ಲಾ ಸೋತು ಸುಣ್ಣವಾಗಿ ಮನೆಗೆ ಬರುವ ಅಳಿಯನನ್ನು ಹೆಂಡತಿ ದೂರ ಮಾಡುವುದಿರಲಿ, ಅತ್ತೆಯೂ ಪೊರಕೆ ಸೇವೆ ಮಾಡುವವಳೇ ಎಂದು ತನ್ನ ಸ್ಥಿತಿಯನ್ನು ತಾನೇ ನಿರ್ಲಜ್ಜನಾಗಿ ಹೇಳಿಕೊಳ್ಳುವ ಲಜ್ಜಭಂಡ ಜೂಜುಕೋರನ ಚಿತ್ರಣ ಕೆಳಗಿನ ಮಂತ್ರದಲ್ಲಿ–

ದ್ವೇಷ್ಟಿ ಶ್ವಶ್ರೂರಪ ಜಾಯಾ ರುಣದ್ಧಿ
ನ ನಾಥಿತೋ ವಿಂದತೇ ಮರ್ಡಿತಾರಮ್ ।
ಅಶ್ವಸ್ಯೇವ ಜರತೋ ವಸ್ನ್ಯಸ್ಯ
ನಾಹಂ ವಿಂದಾಮಿ ಕಿತವಸ್ಯ ಭೋಗಮ್ ॥

ಬೇಡುವ ಜೂಜುಕೋರನಿಗೆ ಒಬ್ಬರೂ ದಯೆ ತೋರೋರು ಇರೋದಿಲ್ಲ. ಅವನು ಮಾರಾಟಕ್ಕಿರೋ ಮುದಿ ಕುದುರೆಯಂತೆ, ಕೇಳೋರೇ ಇಲ್ಲ– ಹೀಗೆ ಅವನ ಗೋಳಾಟವನ್ನು ವೇದದ ಋಷಿ ದಾಖಲಿಸ್ತಾ ಹೋಗ್ತಾರೆ. ಇದೆಲ್ಲಕ್ಕಿಂತಲೂ ಹೆಚ್ಚಿನ ಪರಾಭವ ಜೂಜುಕೋರನಿಗೆ ಕಾದಿರುತ್ತದೆ. ಆ ಹೆಚ್ಚಿನ ಪರಾಭವವೇನು ಎಂಬುದನ್ನು ಕೆಳಗಿನ ಮಂತ್ರ ಹೇಳುತ್ತದೆ–

ಅನ್ಯೇ ಜಾಯಾಂ ಪರಿಮೃಶಂತ್ಯಸ್ಯ
ಯಸ್ಯಾಗೃಧದ್ವೇದನೇ ವಾಜ್ಯಕ್ಷಃ ।
ಪಿತಾಮಾತಾ ಭ್ರಾತರ ಏನಮಾಹುಃ
ನ ಜಾನೀಮೋ ನಯತಾ ಬದ್ಧಮೇತತ್ ॥

ಇತರರ ಹಣವನ್ನು ಗೆದ್ದು ಬಾಚಿಕೊಳ್ಳುವ ಅಭಿಲಾಷೆಯಿಂದ ಜೂಜಾಡಿ, ಸೋತು ಸುಣ್ಣವಾದವನ ಹೆಂಡತಿಯನ್ನ ಇತರ ಜೂಜುಕೋರರು ಹಿಡಿದು ಎಳೆದಾಡುತ್ತಾರೆ. (ಯುಧಿಷ್ಠಿರನನ್ನು ನೆನಪಿಸಿಕೊಳ್ಳಬಹುದು) ಇವನ ತಂದೆ ತಾಯಿಗಳು, ಅಣ್ಣತಮ್ಮಂದಿರು "ಇವನು ಯಾರೋ ನಾವು ಕಾಣೆವು. ಇವನನ್ನು ಕಟ್ಟಿ ಎಳೆದೊಯ್ಯಿರಿ. ನಮ್ಮದೇನೂ ಅಭ್ಯಂತರವಿಲ್ಲ" ಎಂದು ಹೇಳಿ ಕೈತೊಳೆದುಕೊಳ್ಳುತ್ತಾರೆ. ಒಟ್ಟಿನಲ್ಲಿ ಜೂಜುಕೋರನಿಗೆ ಸರ್ವನಾಶ ಕಟ್ಟಿಟ್ಟ ಬುತ್ತಿಯೇ. ಹಾಗಾಗಿ ಜೂಜಾಡುವುದು ಎಷ್ಟು ಕೆಟ್ಟ ಚಟ ಎಂಬುದನ್ನು ಅಕ್ಷಸೂಕ್ತಗಳು ಮಾರ್ಮಿಕವಾಗಿ ಹೇಳುತ್ತಾ ಸಾಗುತ್ತವೆ.

ಮತ್ತೊಂದು ಮಂತ್ರದಲ್ಲಿ "ಬಿಟ್ಟೇನೆಂದರು ಬಿಡದೀ ಮಾಯೆ" ಎಂಬ ಜೂಜಿನ ಮಾಯೆಗೆ ಸಿಲುಕುವ ಚಿತ್ರಣ–

ಯದಾದೀಧ್ಯೇನ ದವಿಷಾಣ್ಯೇಭಿಃ
ಪರಾಯದ್ಭ್ಯೋವ ಹೀಯೇ ಸಖಿಭ್ಯಃ ।
ನ್ಯಪ್ತಾಶ್ಚ ಬಭ್ರವೋ ವಾಚಮಕ್ರತಂ
ಏಮೀ ದೇಷಾಂ ನಿಷ್ಕೃತಂ ಜಾರಿಣೀವ ॥

ಜೂಜಾಡುವವನಿಗೆ ಜೂಜಿನಿಂದ ಉಂಟಾಗುವ ಕಷ್ಟನಷ್ಟಗಳು, ಮಾನಾಪಮಾನಗಳು ಗೊತ್ತಿಲ್ಲದೇ ಏನಿಲ್ಲ. ಅಂಗೈ ನೆಲ್ಲಿಯಂತೆ ಎಲ್ಲವೂ ತಿಳಿದಿರುತ್ತವೆ. ಕಣ್ಣೆದುರಿಗೇ ಜೂಜಿನ ಚಟದಿಂದ ದೂರವಿರುವ ಸದ್ಗೃಹಸ್ಥರ ಸುಂದರ

ಸಂಸಾರವನ್ನು, ಅವರ ಸುಖ ನೆಮ್ಮದಿಯ ಜೀವನವನ್ನೂ, ಅವರಿಗೆ ಸಮಾಜ ಕೊಡುವ ಗೌರವವನ್ನೂ ಪ್ರತಿದಿನವೂ ಕಾಣುತ್ತಲೇ ಇರುತ್ತಾನೆ. ಪ್ರತಿದಿನವೂ ತಾನೂ ಇನ್ನು ಈ ಮನೆಹಾಳು ಚಟವನ್ನು ಬಿಟ್ಟೇಬಿಡುವ ಸಂಕಲ್ಪವನ್ನು ಮಾಡುತ್ತಾನೆ. ಜೂಜಿಗೆ ಕರೆಯಲು ಬರುವ ಸ್ನೇಹಿತರ ಹಿಂದೆ ಸುಮ್ಮನೆ ಹೋಗುವೆ. ದಾಳಗಳನ್ನು ಮುಟ್ಟೆನು ಎಂದೆಲ್ಲಾ ಮನಸ್ಸನ್ನು ಗಟ್ಟಿಮಾಡಿಕೊಳ್ಳುತ್ತಾನೆ. ಆದರೆ "ದಬ್ಬೆ ಕಟ್ಟಿದರೂ ನಾಯಿಬಾಲ ನೇರಾಗದು" ಎಂಬಂತೆ, ಬೆಳಗಾಗುತ್ತಿದ್ದಂತೆಯೇ ಜೂಜಿನ ಕಟ್ಟೆಗೆ ಪಾದ ಬೆಳಸುತ್ತಾನೆ. ಅಲ್ಲಿ ಉರುಳುವ ಬೂದುಬಣ್ಣದ ದಾಳಗಳ ಸದ್ದು ಇವನನ್ನು ಕಾಮವ್ಯಸನದಿಂದ, ಕಾಮಾತುರೆಯಾಗಿ ಸಂಕೇತಸ್ಥಾನವನ್ನು ಸೇರುವ ಜಾರಿಣಿಯಂತೆ ಮಾಡಿ, ಸೆಳೆದುಬಿಡುವವಂತೆ ಎಷ್ಟು ಮಾರ್ಮಿಕವಾದ ರೀತಿಯಲ್ಲಿ ಜೂಜಿನ ಚಟದ ತೀವ್ರತೆಯನ್ನು, ಜೂಜುಕೋರರ ಸ್ವಭಾವವನ್ನು ತೆರೆದಿಡುತ್ತಿದೆ ಈ ಮಂತ್ರ.

ಇದೇ ರೀತಿ ಜೂಜುಕೋರನ ಹೆಂಡತಿಯ ನೋವು, ಊರು ಮನೆ ಬಿಡಬೇಕಾದ ಪ್ರಸಂಗ, ಕೈಕಾಲು, ಪ್ರಾಣಗಳೇ ಇಲ್ಲದಿದ್ದರೂ ಎಲ್ಲರನ್ನೂ ಮೆಟ್ಟಿ ನಿಲ್ಲಬಲ್ಲ ದಾಳ ಮತ್ತು ಕಾಯಿಗಳ ಶಕ್ತಿ, ಅವುಗಳನ್ನು ನಿವಾರಿಸಿಕೊಳ್ಳಲಾಗದ ವ್ಯಕ್ತಿಮಟ್ಟದ ದೌರ್ಬಲ್ಯ ಎಲ್ಲವನ್ನೂ ಬಗೆ ಬಗೆಯಾಗಿ ಬಣ್ಣಿಸಿವೆ ಈ ಸೂಕ್ತಗಳು. ಹೀಗೆ ಬಣ್ಣಿಸುವುದರ ಮೂಲಕ ಜೂಜಿನ ಚಟವು ಬಹಳ ನಿಂದ್ಯವಾದದ್ದು, ಅದು ಸಮಾಜಕ್ಕೆ ಮಾರಕವಾದದ್ದು, ಬಿಡಲೇಬೇಕಾದದ್ದು ಎಂಬುದನ್ನು ಕೊರಳೆತ್ತಿ ಸಾರಿವೆ. ಕೊನೆಯದಾಗಿ ಈ ಸಂದೇಶವನ್ನು ಜೂಜುಕೋರನ ಬಾಯಿಂದಲೇ ಹೇಳಿಸಿದೆ ನೋಡಿ–

> ಅಕ್ಷೈರ್ಮಾ ದೀವ್ಯಃ ಕೃಷಿಮಿತ್ ಕೃಷಸ್ವ
> ವಿತ್ತೇ ರಮಸ್ವ ಬಹುಮನ್ಯಮಾನಃ ।
> ತತ್ರ ಗಾವಃ ಕಿತವ ತತ್ರ ಜಾಯಾ
> ತನ್ಮೇ ವಿಚಷ್ಟೇ ಸವಿತಾಯಮರ್ಯಃ ॥

ಅಕ್ಷಗಳಿಂದ ಜೂಜಾಡಬೇಡ. ಕೃಷಿಯನ್ನು ಮಾಡು. ಕೃಷಿಯಿಂದ ಗಳಿಸಿದ ಹಣವನ್ನೇ ಅಧಿಕವೆಂದು ತಿಳಿದು ಸಂತೋಷಪಡು. ಕೃಷಿಯಿಂದಲೇ ಪಶುಸಂಪತ್ತಿಯೂ, ಪತ್ನೀ ಪುತ್ರರೂ ವರ್ಧಿಸುತ್ತವೆ. ಈ ಜೀವನ ಧರ್ಮದ ಗುಟ್ಟನ್ನು ಈಶ್ವರನೂ, ಸವಿತೃದೇವನೂ ನನಗೆ ತಿಳಿಸಿದ್ದಾನೆ. ಹಾಗಾಗಿ, ದಯಮಾಡಿ ಜೂಜನ್ನು ಬಿಟ್ಟುಬಿಡಿ – ಎನ್ನುತ್ತದೆ ಈ ಮಂತ್ರ.

ಅಕ್ಷಸೂಕ್ತಗಳು ಬಹಳ ಮಾರ್ಮಿಕವಾಗಿ, ಮನಕ್ಕೆ ನಾಟುವಂತೆ, ಸುಲಭ ಎಂದು ತೋರುವ ಜೂಜಿನ ಮಾರ್ಗದಲ್ಲಿ ಅಧಿಕವಾದ ಹಣ ಸಂಪಾದಿಸುವುದು ಬೇಡ. ಶ್ರಮಜೀವನದಿಂದ, ದುಡಿಮೆಯಿಂದ ಗಳಿಸಿದ್ದನ್ನು ನೆಮ್ಮದಿಯಿಂದ ಅನುಭವಿಸೋಣ. ಭೋಗಿಸೋಣ, ಇದರಿಂದಲೇ ವ್ಯಕ್ತಿ ಮತ್ತು ಸಮಾಜದ ಶ್ರೇಯಸ್ಸು ಎಂಬ ಸಂದೇಶವನ್ನು, ಉನ್ನತವಾದ ಧ್ಯೇಯ ನಿರೂಪಣೆಯನ್ನು ಮಾಡಿವೆ ಎನ್ನಬಹುದು. ವೇದಕಾಲೀನ ಋಷಿಯ ಜೀವನಮುಖಿಯಾದ ಮನೋಧರ್ಮವನ್ನು ತೋರಿಸಿದ ಸೂಕ್ತ "ಅಕ್ಷಸೂಕ್ತ" ಗಳನ್ನು ಗಮನಿಸಿದಾಗ ವೇದಗಳನ್ನು ಜಾನಪದ, ಜೀವನಮುಖಿಯಾದ ಸಾಹಿತ್ಯ ಎನ್ನಲು ಅಡ್ಡಿಯಿಲ್ಲವಲ್ಲವೇ?

ಅವಕಾಶವಾದಾಗ ಇತರ ಲೌಕಿಕ ಸೂಕ್ತಗಳನ್ನೂ ಗಮನಿಸೋಣ.

*****

ಅಡವಿಟ್ಟ ಬದುಕ ಮತ್ತೆ ಪಡೆಯಬೇಕು

– ಪೋರ

ಆಲಾಪನೆಯಲ್ಲೇ ನಿಂತ ಸ್ವರ
ಗಕ್ಕನೆ ನೆಲಕುರುಳಿದ ಮರ– ಅಪ್ಪ
ಮರ ಬಿದ್ದರೆ ಹಾರದೆ ಮರಿಹಕ್ಕಿ!
ಗೂಡು ಬಿಟ್ಟರೆ ಕಂಡದ್ದು ನಗರದ ನೂರುಮರ.

ಅಪ್ಪನ ಸಕಲ ಸೌಭಾಗ್ಯ– ತಾಳ ತಂಬೂರಿ
ಅಟ್ಟದ ಮೇಲೇ ಇರಿಸಿ
ಶ್ರುತಿ ಮೀರಿ ತನ್ನದೇ ಸ್ವರ ಹುಡುಕಿ
ಡಬ್ಬಿ ಊಟಕ್ಕೆ, ಪಗಾರಕ್ಕೆ ಹೊಸ ಆವಿಷ್ಕಾರ.

ಹಳ್ಳಿಯ ಪುಕ್ಕ ಕಳಚಿ ಹಗಲುವೇಷ ಧರಿಸಿ–
ಜೀನ್ಸು, ಟೀ ಶರಟು, ಶೂನ್ಯದಲಿ ನೆಟ್ಟ ದೃಷ್ಟಿ
ಕುತ್ತಿಗೆಗೆ ತನ್ನದೇ ಹೆಸರು ತೂಗಿ
ಪಿಸುಗುಟ್ಟುವ ಗೋಡೆಗಳಿಂದ ಕಲಿತದ್ದು–

ಏಕಾಂತ, ಮೌನ, ಹೊಸ ತಂತ್ರಜ್ಞಾನ
ಈಗವನು ಯಂತ್ರಗಳ ಜೊತೆ ಸಂವಾದ ತಜ್ಞ
ಇಲ್ಲಿ ಬಟನ್ ಒತ್ತಿದರೆ ಬೇರೆಲ್ಲೋ
ನಿರ್ವಿಘ್ನ ತೆರೆದುಕೊಳ್ಳುವ ಸಂದೇಶ, ವೇಷ

ಹತ್ತಿದ ವಿಮಾನ ಇಳಿಯದೆ ಪ್ರಯಾಣ
ತುಂಬಿದಷ್ಟೂ ಉದ್ದ ಬೆಳೆದ ಜೇಬು
ಬದುಕಲ್ಲಿ ಬರೀ ಆರೋಹಣ
ಹಣದ ಗಂಗಾವತರಣ.

ಹೊಸ ಬದುಕಿಗೆ ಅಂಚಿಲ್ಲದ ಹರವು
ಹೊರಟಿದ್ದು ಎಲ್ಲಿಂದ, ಮರೆತಿದೆ
ಜನಜಂಗುಳಿ ಮಧ್ಯೆಯೂ ಒಂಟಿ ಜೀವನ
ಬೆರಳತುದಿಗಂಟಿದ ಅಂಕಿಅಂಶಗಳ ಧ್ಯಾನ.

ಬದುಕಿನ ಲಯ ತಪ್ಪಿತೆ
ತನ್ನದಲ್ಲದ ಬಟ್ಟೆ ತೊಟ್ಟು
ತಾನೆ ಮರೆಯಾದೆನೆ?
ಜೇಬು ತುಂಬಿದರೆ ತಲೆ ಖಾಲಿಯೆ?

ಸಾಗರದ ಆಳದಲ್ಲಿ ಸಿಹಿನೀರಿಗೆ ಬರ
ದಡ ಸೇರಿ ಉಸಿರಾಡಬೇಕು
ಮಗು ಅಮ್ಮನ ಹುಡುಕಿ ಹೊರಟಂತೆ
ಹಳ್ಳಿಯ ನದಿಬಯಲು ಸೇರಬೇಕು

ಮರಳಬೇಕು ಹಳೆಯ ಲಯಕೆ
ಅಪ್ಪ ಕಲಿಸಿದ ಸಹಜ ಕಲೆಗೆ
ಎಳೆಹುಲ್ಲ ಮೇಲೆ ಅಂಬೆಗಾಲ ನಡಿಗೆಗೆ
ಗರಿಕೆ ತುದಿ ಇಬ್ಬನಿ ಮುತ್ತು ಎಣಿಕೆಗೆ

ಅಪ್ಪನ ನೆಲ ಮತ್ತೆ ಉಳಬೇಕು
ಅಗೆದು ಮಾವು ನೆಡಬೇಕು
ಹಕ್ಕಿಯಾಗಿರಬಹುದೆ ಅಪ್ಪ
ಅಲ್ಲೆ ಹಾಡುತ್ತಿರಬಹುದೆ

ಅವನ ಧ್ವನಿ ಮತ್ತೆ ಕೇಳಬೇಕು
ಅಡವಿಟ್ಟ ಬದುಕ ಮತ್ತೆ ಪಡೆಯಬೇಕು.

***

ಭಾವ ಲಹರಿ

– ಮಾಲತಿ ಶ್ರೀನಿವಾಸನ್

ಮಳಲ ಮೇಲಣ ಹೆಜ್ಜೆ ಮೂಡಿ
ಮರೆಯಾಗುತಿರೆ,
ನಾ ನಿನ್ನಜಾಡನು ಹಿಡಿದು ಹಿಂಬಾಲಿಸುತಿರೆ
ಸ್ಪಷ್ಟತೆಯಲಿ ಮೂಡಿದಹೆಜ್ಜೆಗಳು ,
ಅಲ್ಲೊಮ್ಮೆ ಇಲ್ಲೊಮ್ಮೆ ಅಸ್ಪಷ್ಟತೆಯಲಿ
ಕರಗಿದ ಆಟವೇನೋ?

ಮೂಕಳಾಗಿಸಿತೆನ್ನ ಈ ಶರಧಿಯ ವಿಸ್ತಾರ
ಎಲ್ಲ ಮನುಜರ ಪಾದ/ಪಾಪ ತೊಳೆದು
ಹರಿಯುತಿದೆ ಶಾಂತ, ಸುಂದರ ಗಂಭೀರ
ನಿಗೂಢತೆಯಲಿ,

ಬೇಸರಿಸದೆ ಮುಂಜಾನೆ, ಸಂಜೆಯಲಿ
ನೇಸರನೊಡನೆ ಚೆಲ್ಲಾಟ, ಹೊನ್ನೀರಿನ
ಗಿಂಡಿಯಲಿ ಕೆಂಪು ಓಕಳಿ ಎರಚಾಟ
ಏಕತಾನತೆಯಲಿ ದಿನ ನಿತ್ಯ ಅಲೆಗಳಾ
ಎರಿಳಿತದ ತುಂಟಾಟ.

ನಿನ್ನ ಆಸರೆಯ ಬೆಚ್ಚನೆಯ ಭಾವದಲಿ
ನಡೆದು ಬಂದಿಹೆ ನಾನೆಷ್ಟು ದೂರ ಈ
ಪಯಣದಲಿ, ಶರಧಿಯ ಮಡಿಲಲ್ಲಿ
ಈ ಜಲರಾಶಿಯ ನಾವೆಯ ತೊಟ್ಟಿಲಲಿ
ಮಲಗಿ ನಿದ್ರಿಸುವಾಸೆ, ದೂರದಲ್ಲೊಂದು
ಪುಟ್ಟ ದೀಪದ ಬೆಳಕು, ನಿಂತೆ ನಾನಿಲ್ಲಿ
ನನ್ನೆಲ್ಲ ಚಿಂತೆ ಮರೆತು, ಮನದಿ ಮೂಡಿಸಿತು
ಮುಸ್ಸಂಜೆಯಲಿ ಚೇತನದ ಭಾವಲಹರಿ

*****

ಎಂದಾದರೊಂದು ದಿನ

– ಮಾಲತಿ ಶ್ರೀನಿವಾಸನ್

ಎಂದಾದರೊಂದು ದಿನ ಕೈಸೇರಲು
ಈ ನನ್ನ ಕವನ, ಇದನೋದಿ ನಕ್ಕು
ಹರಿದೆಸೆದು ಮರೆಯುವೆಯ?
ನೆನಪಲ್ಲಿ ಕಾಣುವೆಯ ನನ್ನ ಆ
ಹಳೆ ರೂಪ, ಮುದ ನೀಡಿದ
ಹಳೆ ಒನಪ, ಹರೆಯದ ತುಂಟಾಟ
ಕೋಪ ತಾಪಗಳ ಸೆಣಸಾಟ,
ಜೊತೆಯಲ್ಲಿ ಕಂಡ ನೂರಾರು
ಕನಸುಗಳ ಕಣ್ಣು ಮುಚ್ಚಾಲೆಯಾಟ.

ಬಾಳ ಹೊಸ ಹಾದಿಯಲಿ ಹಳೆಯ
ಭಾವನೆಗಳೆಲ್ಲ ಹಳಸುವುದೇನೋ,
ಗತವೆಲ್ಲ ಚಲಾವಣೆಯಲ್ಲಿರದ ನಾಣ್ಯವೇನೋ?
ಎಲ್ಲ ಮರೆತಂತೆ ದೂರಾಗುವೆಯ?
ಮನವಾಗಿಹುದು ಹಳಿತಪ್ಪಿದ ಬಂಡಿ.

ಮುಗಿದದ್ದು ಮುಗಿದಂತೆ ಅದಕಿಲ್ಲ
ಇಂದಿಲ್ಲ ಸಮಯ, ಅದರೊಡನೆ
ಬದಲಾವಣೆ ನನ್ನಲ್ಲಿ ಅನಿವಾರ್ಯ
ಎನ್ನುತ್ತ, ಕಣ್ಣ ಹಾಯಿಸದೆ, ಹರಿದೆಸೆದು
ದೂರಾಗುವೆಯ?

ಎಂದಾದರೊಂದು ದಿನ ಕೈಸೇರೆ
ಈ ಕವನ

*****

ಅಡುಗೆ ಮನೆಯಿಂದ ಕಾರ್ಖಾನೆಗೆ ಹಾರಿದ ಉಪಕರಣ

– ಜಿ. ವಿ. ಅರುಣ


ಸಾಮಾನ್ಯವಾಗಿ ವೈಜ್ಞಾನಿಕ ಸಂಶೋಧನೆಗಳ ಪರಿಣಾಮವಾಗಿ ಹೊಸ ವಸ್ತುಗಳು, ಉಪಕರಣಗಳು ನಮ್ಮ ಉಪಯೋಗಕ್ಕೆ ಸಿಕ್ಕುತ್ತವೆ. ಇದಕ್ಕೆ ಉದಾಹರಣೆಯಾಗಿ ದೂರಸಂಪರ್ಕ ಸಾಧನಗಳ ದೊಡ್ಡ ಪಟ್ಟಿಯೇ ಇದೆ. ಆದರೆ ಕೆಲವು ವೇಳೆ ನಾವು ದಿನನಿತ್ಯ ಉಪಯೋಗಿಸುತ್ತಿರುವ ವಸ್ತುಗಳು ಕಾರ್ಖಾನೆಗಳಲ್ಲಿ ಹೊಸ ರೂಪದಲ್ಲಿ ದಿಢೀರನೆ ಪ್ರತ್ಯಕ್ಷವಾಗಿಟ್ಟಿರುತ್ತವೆ. ಅವುಗಳನ್ನು ನಾವು ಗುರುತು ಹಿಡಿದರೆ ನಮಗೆ ವಿಶೇಷವಾದ ಸಂತೋಷವಾಗುತ್ತದೆ. ಹಳೆಯ ಪರಿಕಲ್ಪನೆಗಳಿಂದ ಹೊಸ ಉಪಕರಣಗಳ ನಿರ್ಮಾಣವು ವಿಜ್ಞಾನದ ಹಾಸುಹೊಕ್ಕಾದ ಅಂಶವಲ್ಲವೆ?



ಲಟ್ಟಣಿಗೆ, ಇದು ಎಲ್ಲರ ಅಡುಗೆಯ ಮನೆಯಲ್ಲೂ ಇರುವ ಒಂದು ನಿತ್ಯೋಪಯೋಗಿ ಸಾಧನ. ಇದು ಸಾಮಾನ್ಯವಾಗಿ ಮರದಿಂದ ಮಾಡಿದ ಉರುಳೆ.

ಒಮ್ಮೆ ನಾವು ಹೊಸದಾಗಿ ಕೆಲಸಕ್ಕೆ ಸೇರಿ ಬೇರೆಯ ಪ್ರಾಂತ್ಯದಲ್ಲಿದ್ದಾಗ, ಚಪಾತಿ ಮಾಡಲು ನಿರ್ಧರಿಸಿದೆವು. ಹಿಟ್ಟು ಕಲಸಿದ ಮೇಲೆ ನಮಗೆ ನೆನಪಾದದ್ದು ನಮ್ಮ ಬಳಿ ಲಟ್ಟಿಸಲು ಮಣೆಯಾಗಲಿ ಲಟ್ಟಣಿಗೆಯಾಗಲಿ ಇಲ್ಲ ಎಂದು! ತಟ್ಟೆಯ ಹಿಂಭಾಗದ ಮೇಲೆ ಗಾಜಿನ ಬಾಟಲಿನಿಂದ ಲಟ್ಟಿಸಿ ಗೆದ್ದುಕೊಂಡಿದ್ದೆವು.

ಈ ಲಟ್ಟಣಿಗೆಯು ಅಡುಗೆ ಮನೆಯಿಂದ ಕಾರ್ಖಾನೆಗೆ ಹಾರಿದ ಉಪಕರಣ ಎಂದರೆ ನಿಮಗೆ ಆಶರ್ಯವಾಗ ಬಹುದಲ್ಲವೆ. ಗೋಧಿಹಿಟ್ಟಿನ ಸಣ್ಣ ಉಂಡೆಯನ್ನು ಲಟ್ಟಣಿಗೆಯಿಂದ ಲಟ್ಟಿಸಿ ತೆಳುವಾದ ಚಪಾತಿ ಮಾಡುವ ರೀತಿಯಲ್ಲಿ ಕಾಯಿಸಿದ ಲೋಹದ ಉಂಡೆಗಳನ್ನ ಲಟ್ಟಿಸಿ ಲೋಹದ ಹಾಳೆಗಳನ್ನು ಪಡೆಯುವ ಉರುಳೆ ಯಂತ್ರಗಳು ಆವಿಷ್ಕಾರವಾದವು. ಲೋಹ ವಿಜ್ಞಾನವು ಬೆಳೆದಂತೆಲ್ಲ ವಿವಿಧ ಲೋಹ, ಮಿಶ್ರಲೋಹಗಳ ಲಕ್ಷಾಂತರ ವಸ್ತುಗಳು ಬಳಕೆಗೆ ಬಂದುಬಿಟ್ಟವು. ಅದಿರನ್ನು ಸಂಸ್ಕರಿಸಿ ಲೋಹವನ್ನು ಬೇರ್ಪಡಿಸಿದಾಗ ಅದು ಸಾಮಾನ್ಯವಾಗಿ ದ್ರವದ ರೂಪದಲ್ಲಿ ಇರುತ್ತದೆ. ಅದನ್ನು ಎರಕಹೊಯ್ದು ತಮಗೆ ಬೇಕಾದ ಆಕಾರಕ್ಕೆ ತರಬೇಕಾಗಿತ್ತು. ಆದರೆ ಉರುಳೆ ಯಂತ್ರಗಳು ಹಾಳೆಗಳನ್ನು ಮಾಡುವ ಅಪರಿಮಿತ ಅವಕಾಶಗಳನ್ನು ಒದಗಿಸಿದುವು. ಕಬ್ಬಿಣದಿಂದ ಉಕ್ಕನ್ನು ಪಡೆದು ಅದರಿಂದ ಮಾಡಬಹುದಾದ ಉತ್ಪನ್ನಗಳು ಹೆಚ್ಚಾದಂತೆಲ್ಲ ವಿವಿಧ ಮಿಶ್ರಲೋಹದ ಉಕ್ಕಿಗೆ ಬೇಡಿಕೆಗಳ ಹೆಚ್ಚಿದುವು. ಉಕ್ಕಿನ ಉಂಡೆಗಳನ್ನು ಸುಮಾರು 500 ಡಿಗ್ರಿ ಸೆಲ್ಸಿಯಸ್ ತಾಪಕ್ಕೆ ಕಾಯಿಸಿ ಅದನ್ನು ಲಟ್ಟಿಸಿ ದಪ್ಪವಾದ ಹಾಳೆಗಳನ್ನು ಪಡೆಯಲು ಪ್ರಾರಂಭಿಸಿದರು.



ಈ ಉರುಳೆ ಯಂತ್ರಗಳಲ್ಲಿ ಚಪಾತಿ ಮಾಡುವಾಗ ಕೆಳಗೆ ಬಳಸುವ ಮಣೆಯ ಬದಲಿಗೆ ಮತ್ತೊಂದು ಉರುಳೆಯೇ ಇರುತ್ತದೆ. ಎರಡು ಉರುಳೆಗಳನ್ನು ದ್ರವಚಾಲಿತ ಒತ್ತುಗ – ಹೈಡ್ರಾಲಿಕ್ ಪ್ರೆಸ್‌ಗಳ ಮೂಲಕ ಬೇಕಾದ ಎತ್ತರಕ್ಕೆ ಏರಿಸಿ ಇಳಿಸಿ ಮಾಡಬಹುದು. ಹಾಳೆಗಳ ದಪ್ಪವನ್ನು ನಿಯಂತ್ರಿಸಲು ಇದು ಉಪಯೋಗವಾಗುತ್ತದೆ. ಪ್ರತಿ ಬಾರಿ ಇವುಗಳ ಮಧ್ಯೆ ಉರುಳಿಸುವಾಗ ಕ್ರಮೇಣವಾಗಿ ಹಾಳೆಯ ದಪ್ಪವನ್ನು ಕಡಿಮೆ ಮಾಡುತ್ತಾ ಹೋಗಬಹುದು.

ಮೊದಲು ಈ ಎರಡು ಉರುಳೆಗಳಿಗೆ ಉದ್ದದ ಕಬ್ಬಿಣದ ಹಿಡಿಗಳನ್ನು ಜೋಡಿಸಿಟ್ಟಿರುತ್ತಿದ್ದರು. ಅದನ್ನು ತಿರುಗಿಸಲು ಪ್ರತಿ ಬದಿಯ ಹಿಡಿಗಳ ಬಳಿ ಮೂರು ನಾಲ್ಕು ಜನ ಕಾರ್ಮಿಕರು ಸಿದ್ಧವಿರುತ್ತಿದ್ದರು. ಮೇಲಿನ ಉರುಳೆಯನ್ನು ತಿರುಗಿಸಲು ಸೂಕ್ತವಾದ ಅಟ್ಟಣೆಯನ್ನು ನಿರ್ಮಿಸಿರುತ್ತಿದ್ದರು. ಇವೆರಡು ಉರುಳೆಗಳನ್ನು ವಿರುದ್ಧ ದಿಕ್ಕಿನಲ್ಲಿ ತಿರುಗಿಸಿದಾಗ ಅದರ ಮಧ್ಯೆ ಹಾಳೆಯು ಏಕಮುಖವಾಗಿ ದಪ್ಪವನ್ನು ಕಡಿಮೆ ಮಾಡಿಕೊಂಡು ಮುಂದೆ ಬರುತ್ತದೆ. ಇದನ್ನು ಉತ್ತಮಪಡಿಸಲು ಮುಂದೆ ಉರುಳೆಗಳಿಗೆ ಗಿಯರ್‌ಗಳನ್ನೂ ಜೋಡಿಸಿ ತಿರುಗಿಸಲು ಬೇಕಾಗುವ ಬಲವನ್ನು



ಕಡಿಮೆ ಮಾಡಿದರು. ಅನಂತರ ಉರುಳೆಗಳಿಗೆ ನೇರವಾಗಿ ವಿದ್ಯುತ್ ಮೋಟರನ್ನು ಜೋಡಿಸಿ ಉತ್ತಮ ಮಟ್ಟದ ತೆಳುವಾದ ಹಾಳೆಗಳನ್ನು ಉತ್ಪಾದಿಸಲು ಕಾರ್ಖಾನೆಗಳು ನಿರ್ಮಾಣಗೊಂಡವು.

ಆಧುನಿಕ ಉಕ್ಕಿನ ಉರುಳೆ ಗಿರಣಿಗಳ – ರೋಲಿಂಗ್ ಮಿಲ್ಲುಗಳ ಆವಿಷ್ಕಾರವಾಯಿತು. ಉಕ್ಕಿನ ಹಾಳೆಗಳ ಅತಿಹೆಚ್ಚಿನ ಬೇಡಿಕೆಗೆ ಸ್ಪಂದಿಸಲು, ವಿವಿಧ ತೆಳುವಿನ ಹಾಳೆಗಳನ್ನು ಉತ್ಪಾದಿಸಲು ಅನೇಕ ಹೊಸತನಗಳನ್ನು ಈ ಯಂತ್ರಗಳಲ್ಲಿ ಜೋಡಿಸಲಾಯಿತು. ಮೇಲಿನ ಹಾಗೂ ಕೆಳಗಿನ ಉರುಳೆಗಳ ಸಹಾಯದಿಂದ ನಡೆಯುವ ಈ ಯಂತ್ರದಲ್ಲಿ ಕ್ರಮೇಣ ಉರುಳೆಗಳು ಕಮಾನಿನ ಆಕಾರಕ್ಕೆ




ತಿರುಗಿ, ಹಾಳೆಗಳ ದಪ್ಪವು ವ್ಯತ್ಯಾಸವಾಗವಾಗುತ್ತಿತ್ತು. ಇದನ್ನು ಪರಿಹರಿಸಲು ಇವೆರಡು ಉರುಳೆಗಳ ಮೇಲೆ ಮತ್ತೆ ಕೆಳಗೆ ಅವುಗಳಿಗಿಂತ ದಪ್ಪವಾದ ಉರುಳೆಗಳನ್ನು ಅವುಗಳ ಬೆನ್ನೆಲುಬಾಗಿ ಜೋಡಿಸಲಾಯಿತು. ಇವುಗಳಿಂದ ಉತ್ತಮ ಗುಣಮಟ್ಟದ ಉದ್ದ ಅಗಲಗಳಲ್ಲೆಲ್ಲ ಒಂದೇ ಗಾತ್ರದ ತೆಳುವಿರುವ ಹಾಳೆಗಳನ್ನು ಪಡೆಯುವುದು ಸಾಧ್ಯವಾಯಿತು. ಇವುಗಳಿಂದ ಆಕರ್ಷಕ ಉಪಕರಣಗಳನ್ನು ನಿರ್ಮಿಸಲು ಅನುಕೂಲವಾಗುತ್ತದೆ. ಅಲ್ಲದೆ ವ್ಯಾಪಾರವು ಹೆಚ್ಚಾಗಿ ಉದ್ಯಮಿಗಳಿಗೆ ಲಾಭದಾಯಕ ವಾಗುತ್ತದೆ. ಗ್ರಾಹಕರಿಗೂ ಒಂದೇ ಗಾತ್ರದ ಹಾಳೆಗಳಿಂದ ಮಾಡಿದ ಉಪಕರಣವು ಒದಗುತ್ತದೆ.

ಕೆಂಪಗೆ ಚೆನ್ನಾಗಿ ಕಾಯಿಸಿದ ಉಕ್ಕಿನ ಗಟ್ಟಿಗಳಿಂದ ಉರುಳೆಯಂತ್ರದಲ್ಲಿ ತೆಳ್ಳಗೆ ಮಾಡಿ ಪಡೆಯುವ ಹಾಳೆಗಳನ್ನು ಹಾಟ್ ರೋಲ್ಡ್ ಹಾಳೆಗಳು ಎಂದು ಕರೆಯುತ್ತಾರೆ. ಲೋಹಶಾಸ್ತ್ರ ಬೆಳೆದಂತೆಲ್ಲ, ಬಿಸಿಯಾಗಿಲ್ಲದ ತೆಳುವಾಗಿರುವ ಹಾಳೆಗಳನ್ನು ಮತ್ತೆ ಉರುಳೆಯಂತ್ರಗಳಲ್ಲಿ ಅಮುಕಿ ಇನ್ನೂ ತೆಳುವಾಗಿ ಮಾಡುವ ಕಲೆ ಕರಗತವಾಯಿತು. ಈ ರೀತಿಯಿಂದ ಪಡೆದ ಹಾಳೆಗಳ ಭೌತಿಕ ಗುಣಗಳು ಇನ್ನೂ ಉತ್ತಮವಾದವು.





ಇದರಿಂದ ಉತ್ಪಾದಿಸಿದ ವಸ್ತುಗಳ ಗುಣದಲ್ಲೂ ಹೆಚ್ಚುಗಾರಿಕೆ ಕಂಡುಬಂದಿತು. ಈ ರೀತಿ ಬಹಳ ತೆಳುವಾಗಿ ಉತ್ಪಾದಿಸಬಹುದಾದ ಹಾಳೆಗಳನ್ನು ಅನೇಕ ಗೃಹೋಪಯೋಗಿ ವಸ್ತುಗಳಲ್ಲಿ ಬಳಸುತ್ತಾರೆ. ಅಷ್ಟೇ ಏಕೆ? ಕಾರುಗಳ ಹೊರಕವಚಕ್ಕೆ ಉಪಯೋಗಿಸುವುದು ಈ ಸಿ ಆರ್ ಅಂದರೆ ಕೋಲ್ಡ್ ರೋಲ್ಡ್ ಹಾಳೆಗಳನ್ನೇ. ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಕೂಡ ಈ ಸಿ ಆರ್ ಹಾಳೆಗಳಿಂದಲೇ ಮಾಡುವುದು.



ಇನ್ನು ಹಾಳೆಗಳಲ್ಲದೆ ಉಕ್ಕಿನ ಕಂಬಿಗಳನ್ನು ಅಂದರೆ ವಿವಿಧ ಗಾತ್ರದ ವೃತ್ತಾಕಾರದ, ಚಚ್ಚೌಕದ, ಆರು ಮೂಲೆಗಳ ಅಡ್ಡಕೊಯ್ತ – ಕ್ರಾಸ್ ಸೆಕ್ಷನ್ ಇರುವ ಕಂಬಿಗಳನ್ನು ಉರುಳೆ ಯಂತ್ರದಲ್ಲೇ ಪಡೆಯಬಹುದು. ಈ ಆಕಾರವನ್ನು ಪಡೆಯಲು ಉರುಳೆ ಯಂತ್ರದ ಉರುಳೆಗಳಲ್ಲಿ ಸೂಕ್ತವಾದ ತೂತಿನ ಆಕಾರವನ್ನು ನಿರ್ಮಿಸಿರುತ್ತಾರೆ. ವೃತ್ತಾಕಾರದ ಅಡ್ಡಕೊಯ್ತವನ್ನು ಪಡೆಯಲು ಎರಡು ಉರುಳೆಗಳಲ್ಲೂ ಅರ್ಧವೃತ್ತಾಕಾರದ ತೂತನ್ನು ಮಾಡಿ ಹೊಂದಿಸಿಟ್ಟಿರುತ್ತಾರೆ.

ಈಗಂತೂ ಕಂಪ್ಯೂಟರ್ ನಿಯಂತ್ರಿತ ಉರುಳೆಯಂತ್ರಗಳು ಬಂದಿವೆ. ಅದರಿಂದ ಉತ್ಪಾದನೆಯಲ್ಲಿ ಪೋಲಾಗುವ ಉತ್ಪನ್ನಗಳ ಪ್ರಮಾಣ ಕಡಿಮೆಯಾಗಿದೆ. ಹೊರಬರುವ ಉತ್ಪನ್ನಗಳು ಅತ್ಯುತ್ತಮ ಗುಣಮಟ್ಟವನ್ನು ಹೊಂದಿರುತ್ತದೆ.

(ಲೇಖನದಲ್ಲಿ ಜ್ಞಾನ ಪ್ರಸರಣಕ್ಕೆ ಬಳಸಿರುವ ಇಂಟರ್ನೆಟ್ ಚಿತ್ರಗಳಿಗೆ ನಾನು ಋಣಿ – ಜಿ.ವಿ.ಅರುಣ)

*****

ಸಾಹಿತ್ಯ ದಾಸೋಹ – ಕವನಗಳ ಜುಗಲ್‌ಬಂದಿ

ಬೆಂ.ಶ್ರೀ. ರವೀಂದ್ರ – ಮತ್ತು – ಜಿ.ವಿ. ಅರುಣ

ಪುಟ 46ರ ಶ್ರೀ ಶ್ರೀ ಜಿ.ವಿ. ಅರುಣ ಅವರ ಕವನಕ್ಕೆ ಬೆಂ.ಶ್ರೀ. ರವೀಂದ್ರರ ಪ್ರತಿಕ್ರಿಯಾ ಕವನ:

ತಿಳಿಯದು ಸ್ವಾಮಿ

– ಬೆಂ.ಶ್ರೀ. ರವೀಂದ್ರ

ಅರುಣ ಗಿರಿಯಲಿ ಹುಟ್ಟುವ ಸಮಯ ಗೊತ್ತು
ಕರುಣ ಮನದಲಿ ಉಕ್ಕುವ ಸಮಯ ಗೊತ್ತು
ಕವಿತೆ ಹುಟ್ಟುವ ಸಮಯ ತಿಳಿಯದು ಸ್ವಾಮಿ

ಶರೀರ ಸುಸ್ತಾಗಿ ಮಲಗುವ ಸಮಯ ಗೊತ್ತು
ಹಸಿವಿನಿಂ ಅಡಿಗೆ ಮನೆಗಿಣುಕುವ ಸಮಯ ಗೊತ್ತು
ಕವಿತೆ ಹುಟ್ಟವ ಸಮಯ ತಿಳಿಯದು ಸ್ವಾಮಿ

ಗೆಳತಿಗೆದೆ ಮಿಡಿವ ಸಮಯ ಗೊತ್ತು
ಅವಳ ಕಣ್ಣೋಟಗೆ ಕಣ್ಣಾಗುವ ಸಮಯ ಗೊತ್ತು
ಕವಿತೆ ಹುಟ್ಟುವ ಸಮಯ ತಿಳಿಯದು ಸ್ವಾಮಿ

ತಿಂಗಳ ಸಂಬಳ ಬರುವ ಸಮಯ ಗೊತ್ತು
ಉಂಬಳಕೆ ಖರ್ಚಾಗುವ ಸಮಯ ಗೊತ್ತು
ಕವಿತೆ ಹುಟ್ಟುವ ಸಮಯ ತಿಳಿಯದು ಸ್ವಾಮಿ

***

(ಕವನಗಳ ಜುಗಲ್‌ಬಂದಿ ಮುಕ್ತಾಯ)

ನೋಡಿಯೋ ಸಾಹಿತ್ಯ ದಾಸೋಹ 203

ಅಧ್ಯಕ್ಷೀಯ ಅವಲೋಕನ

– ರತ್ನಾ ಮೂರ್ತಿ

1) 'ಅಭಿಮನ್ಯುವಿಗೆ ನ್ಯಾಯ' – ಬೆಂ.ಶ್ರೀ. ರವೀಂದ್ರ:

ನಮ್ಮ ಈ ವೇದಿಕೆಯ ಸಂಸ್ಥಾಪಕ ಸಂಚಾಲಕರಾದ ರವೀಂದ್ರ, ಒಬ್ಬ ವ್ಯಕ್ತಿಯಲ್ಲ. ಒಂದು ಶಕ್ತಿ. ಇಂಥ ಒಂದು ವೇದಿಕೆಯನ್ನು ಸಮರ್ಥವಾಗಿ, ಅಲಿಖಿತ ನಿಯಮಕ್ಕೆ ಬದ್ಧರಾಗಿರುವಂತೆ ನಗುನಗುತ್ತಲೇ ಎಲ್ಲರನ್ನೂ ಶಿಸ್ತಿಗೆ ಒಳಪಡಿಸಿ ಒಂದು ಅನನ್ಯ ಸಾಹಿತ್ಯ ವೇದಿಕೆಯಾಗಿ ರೂಪಿಸಿರುವುದರಲ್ಲಿ ರವೀಂದ್ರರ ಪಾತ್ರವೇ ಹಿರಿದು. ಹೊಸ ಹೊಸ ಪರಿಕಲ್ಪನೆಗಳ ಬತ್ತದ ಝರಿ ಇವರು. ಜಗತ್ತಿನ ಆಗುಹೋಗುಗಳ ಬಗ್ಗೆ ಇವರ ಲೇಖನಿ ಕ್ಷಿಪ್ರವಾಗಿ, ಹರಿತವಾಗಿ, ಆದರೆ ಅಷ್ಟೇ ಶಕ್ತವಾಗಿ ಸ್ಪಂದಿಸುತ್ತದೆ.

ಕಟುಕರೂ ಬೆಚ್ಚಿಬೀಳುವ ರೀತಿಯಲ್ಲಿ ಮತಾಂಧರ ಕ್ರೌರ್ಯಕ್ಕೆ ತುತ್ತಾದ ನಿಷ್ಪಾಪಿ ದರ್ಜಿಯ ಭೀಕರ ಹತ್ಯೆಯ ಚಿತ್ರವನ್ನು ಕೊಡುತ್ತಲೇ ಕವಿಯ ಸಾತ್ವಿಕ ಮನ ನೋವಿನಿಂದ ಆಕ್ರೋಶಗೊಳ್ಳುತ್ತದೆ. ತೀವ್ರವಾಗಿ ಪ್ರತಿಭಟಿಸುತ್ತದೆ. ಮರಳುಗಾಡಿನ ಬಂಟ, ಬತ್ತಿದ ಓಯಸಿಸ್‌ಗಳು, ಸ್ವರ್ಗಕ್ಕೇರಲು ಬಿಸಿಲ್ಗುದುರೆ, ಹೂತು ಹೋಗಿರುವ ಬಿಸಿಲ್ಗುದುರೆಯ ಕಾಲು, ರಕ್ತಬೀಜನ ಸಂತತಿ, ಊರೇ ಕುರುಳು ಇಂತಹ ಸಶಕ್ತ ಪ್ರತಿಮೆಗಳು, ರೂಪಕಗಳು ಕ್ರೌರ್ಯದ ತೀವ್ರತೆಗೆ ರಕ್ತದ ಭಯಂಕರ ರಂಗನ್ನು ತಂದುಕೊಡುತ್ತಿವೆ. ನಾಸ್ತಿಕತೆಯ ಪ್ರತಿಪಾದಕರಾದ ಚಾರ್ವಾಕರೂ ಈ ಕ್ರೌರ್ಯಕ್ಕೆ ಬೆಚ್ಚಿ ಭೀತಿಯಿಂದ ಇನ್ನು ಬಾಯಿಬಿಡಲಾರರು ಎನ್ನುವಲ್ಲಿ ಮತಾಂಧತೆಯ ಭೀಕರತೆಯ ಚಿತ್ರವನ್ನು ಇನ್ನಷ್ಟು ದಟ್ಟವಾಗಿಸುತ್ತಾರೆ. ವಿಚಾರವಾದಿ ಡಾ. ಎಚ್.ನರಸಿಂಹಯ್ಯನವರನ್ನೂ ಪ್ರಶ್ನಿಸುವ ಮೂಲಕ ಜಗತ್ತಿನಲ್ಲಿ ಮತಾಂಧ ಹಿಂಸೆಯ ರುದ್ರ ಪೈಶಾಚಿಕ ಕುಣಿತದಲ್ಲಿ ಎಲ್ಲರೂ ಎಲ್ಲವೂ ಧ್ವನಿ ಕಳೆದುಕೊಂಡುಬಿಡುತ್ತದೇನೋ ಎನ್ನುವ ಧ್ವನಿ ಭೀತಿ ಹುಟ್ಟಿಸುತ್ತದೆ. ಹೀಗೆ ಏಕಾಂಗಿಯಾಗಿ ಅತ್ಯಂತ ಬರ್ಬರವಾಗಿ ಕೊಲೆಯಾದ ಅಭಿಮನ್ಯುವಿನ ಚಿತ್ರವನ್ನೂ ತರುವ ಮೂಲಕ ಇಂತಹ ಪೈಶಾಚಿಕ ಕ್ರೌರ್ಯ ಎಂದಿನಿಂದಲೂ ಇದೆ ಎಂಬ ವಾಸ್ತವಿಕವಾದ ಅಹಿತ ಘೋರ ಸತ್ಯದ ಕಡೆಯೂ ಬೆಟ್ಟುಮಾಡಿ ತೋರಿಸುತ್ತಾರೆ. ಇಂತಹ ಕೊಲೆಗಳಿಗೆ ನ್ಯಾಯ ದೊರಕಿಸಿಕೊಡಲೇಬೇಕು ಎಂಬ ಸಾತ್ವಿಕ ಆಗ್ರಹದೊಡನೆ ಕವನ ಮುಕ್ತಾಯವಾಗುತ್ತದೆ. ಬಹುಕಾಲ ಕಾಡುವ ಕವನ. ಕವಿ ರವೀಂದ್ರರಿಗೆ ನಮೋ ನಮೋ..

2) 'ತಪ್ಪಿದ ದುರಂತ' – ಮಹಾಬಲ:

ಈ ವೇದಿಕೆಯ ಸಂಚಾಲಕರಲ್ಲಿ ಒಬ್ಬರಾದ, ಸುನೀತ, ಪ್ರಗಾಥ, ಹೀಗೆ ಹಲವು ಪಾಶ್ಚಾತ್ಯ ಕಾವ್ಯ ಪ್ರಕಾರಗಳ ಬಗ್ಗೆ, ಛಂದಸ್ಸಿನ ಬಗ್ಗೆ, ಹೀಗೆ ಹಲವು ವಿದ್ವತ್ಪೂರ್ಣ ಲೇಖನಮಾಲೆಯನ್ನೂ, ಈಗ ಹೊಸಗನ್ನಡ ಕಾವ್ಯದ ಮರೆಯಬಾರದ ಕವಿಗಳು ಮಾಲೆಯಲ್ಲಿ ನಿರಂತರವಾಗಿ ಕನ್ನಡನಾಡಿನ ಹೆಮ್ಮೆಯ ಆಸ್ತಿಯಾದ ಹಲವಾರು ಶ್ರೇಷ್ಠ ಕವಿಗಳನ್ನು ಪರಿಚಯಿಸುವ ಮೂಲಕ ವೇದಿಕೆಯ ಮೌಲ್ಯವನ್ನು ಹೆಚ್ಚಿಸುತ್ತಿರುವ ಲೇಖಕರು. ಪ್ರಮುಖವಾಗಿ ಸುನೀತ ಕವಿಯೆಂದೇ

ಗುರುತಿಸಿಕೊಂಡಿರುವ, ಸದಾ ಅಧ್ಯಯನಶೀಲರಾದ ಶ್ರೀ ಕೆ.ಎನ್.ಮಹಾಬಲರ ಲೇಖನ "ತಪ್ಪಿದ ದುರಂತ". ಇತ್ತೀಚೆಗಷ್ಟೇ ಜಾರ್ಖಂಡ್‌ನ ರೋಪ್‌ವೇನಲ್ಲಿ ಎರಡು ಕೇಬಲ್ ಕಾರುಗಳು ಒಂದಕ್ಕೊಂದು ಡಿಕ್ಕಿಹೊಡೆದು ಆದ ಭೀಕರ ದುರಂತವನ್ನು ತಮಗರಿವಿಲ್ಲದೆಯೇ, ಒಂದು ಟ್ರಿಪ್ಪಿನ ಅಂದರೆ 20 ನಿಮಿಷದ ಅಂತರದಲ್ಲಿ ತಪ್ಪಿಸಿಕೊಂಡ ಬಗೆಯನ್ನು ತೆರೆದಿಟ್ಟಿದ್ದಾರೆ. ಓದುತ್ತಿದ್ದಂತೆ ಮೈ ಜುಮ್ಮೆನ್ನಿಸುತ್ತದೆ. ಕಣ್ಣು ಮಿಟುಕಿಸುವಷ್ಟರಲ್ಲೆ ಜೀವಗಳು ಸಾವಿನಿಂದ ಪವಾಡ ಸದೃಶ ರೀತಿಯಲ್ಲಿ ಪಾರಾಗಿಬಿಡುವ, ರೆಪ್ಪೆ ಬಡಿಯುವಷ್ಟರಲ್ಲೆ ಅಪಘಾತಗಳಿಂದ ಮುದುಕರು ಎಳೆಯರೆನ್ನದೆ ಜೀವಗಳು ಮಸಣ ಸೇರಿಬಿಡುವ ಅನೂಹ್ಯ ಘಟನೆಗಳಿಗೆ ನಮ್ಮಲ್ಲಿ ಉತ್ತರವಿದೆಯೇ? ತಪ್ಪು ಯಾರದ್ದು? ಅದು ವಿಧಿಯೇ, ವ್ಯಕ್ತಿಗಳ ಅಜಾಗರೂಕತೆಯೇ? ನಂತರ ಟಿವಿ ಪರದೆಯ ಮೇಲೆ ಪ್ರಸಾರವಾಗುತ್ತಿದ್ದ ಎದೆ ನಡುಗಿಸುವ ಚಿತ್ರಗಳನ್ನು ನೋಡುತ್ತಾ ಮಹಾಬಲರು ಉದ್ಗರಿಸುತ್ತಾರೆ – 'ಸದ್ಯ ಈ ದುರಂತ ನಾಟಕದಲ್ಲಿ ನಾವು ಪಾತ್ರಧಾರಿಗಳಾಗಲಿಲ್ಲ' ಎಂಬುದೇ ಸಮಾಧಾನ. ನೀವು ಪಾರಾಗಿ ಬಂದಿರುವ ಸಮಾಧಾನ ಈಗ ನಮಗೂ ಉಂಟಾಗಿದೆ. ಅದು ಈ ವೇದಿಕೆಯ ಮತ್ತು ನಮ್ಮೆಲ್ಲರ ಪುಣ್ಯ. ಭಗವಂತ ನಿಮಗೆ ಪೂರ್ಣ ಆಯುಸ್ಸನ್ನು ಆರೋಗ್ಯದೊಡನೆ ಕೊಟ್ಟು ಕಾಪಾಡಲಿ. ನಿಮ್ಮ ಸಾಹಿತ್ಯ ಸೇವೆ ನಿರಂತರವಾಗಿ ಸಾಗಲಿ. ನಿಮಗೆ ಅಭಿನಂದನೆಗಳು ಮತ್ತು ಧನ್ಯವಾದಗಳು.

3) 'ಕಾರ್ಮೋಡದಲ್ಲೊಂದು ಸೂರ್ಯಕಿರಣ' – ನಾಗರತ್ನ ಚಂದ್ರಶೇಖರ್:

ನಾಗರತ್ನ ಚಂದ್ರಶೇಖರ್ ವೈವಿಧ್ಯಮಯ ಲೇಖನಗಳಿಂದ ಗಮನ ಸೆಳೆದಿದ್ದರೂ ಲಘು ಹಾಸ್ಯಬರಹಗಳಲ್ಲಿ ಅವರು ತಮ್ಮ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಈ ಒಂದು ಕಥೆ ಕರೋನಾ ಕಾಲದ ಬದಲಾವಣೆಯ ಸಂಕಷ್ಟಗಳನ್ನು ಅದರ ಪರಿಣಾಮಗಳನ್ನು ಪರಿಣಾಮಕಾರಿಯಾಗಿ ಬಿಚ್ಚಿಡುತ್ತದೆ. ಮಕ್ಕಳಿರಲವ್ವ ಮನೆ ತುಂಬ ಎನ್ನುತ್ತಿದ್ದ ಕಾಲ ಎಂದೋ ಗತಕ್ಕೆ ಸರಿದುಹೋಗಿ ಇಂದು ಮಕ್ಕಳೇ ಬೇಡ ಎನ್ನುವಲ್ಲಿಗೂ ಬಂದು, ಹಾಗೆ ನಿರ್ಧರಿಸುವವರ ಸಂಖ್ಯೆಯೂ ಕ್ರಮೇಣ ಜಾಸ್ತಿಯಾಗುತ್ತಿದೆ. ಈ ಕತೆಯ ನಾಯಕಿ ಮಾಧುರಿಯೂ ತಾಯ್ತನಕ್ಕಿಂತ ವೃತ್ತಿಜೀವನ ಮುಖ್ಯ ಎಂಬ ಧೋರಣೆ ಯಲ್ಲಿದ್ದವಳು. ಕರೋನಾದ ಬೈಪ್ರಾಡಕ್ಟ್ ಆದ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆ ಅವಳ ಚಿಂತನೆಯ ದಿಕ್ಕು ತಪ್ಪಿಸಿದ್ದನ್ನು ತಿಳಿದು ಅವಳ ಗೆಳತಿ ಅಭಿನಂದಿಸುವ ಪರಿ, ನಂತರ ಗರ್ಭದಲ್ಲಿರುವುದು ಅವಳಿ ಮಕ್ಕಳು ಎಂದು ತಿಳಿದಾಗ ಗೆಳತಿ ಚುಡಾಯಿಸುವ ರೀತಿ, ಹೆಸರಿನ ಬಗ್ಗೆ ಚಿಂತನೆ ಎಲ್ಲದರಲ್ಲೂ ನಾಗರತ್ನ ಅವರ ಬ್ರಾಂಡ್ ಆದ ನವಿರಾದ ಹಾಸ್ಯ ಮುದಕೊಡುತ್ತದೆ. ಸಂಪೂರ್ಣ ಮನಸ್ಸಿನಿಂದ ಗರ್ಭಿಣಿಯಾಗಿರುವುದನ್ನು ಸ್ವಾಗತಿಸದಿದ್ದರೂ ಮಕ್ಕಳು ಜನಿಸಿ ಅವು ಪಿಳಿಪಿಳಿ ಕಣ್ಣುಬಿಟ್ಟಾಗ ಅವಳ ಮನಸ್ಸಿನ ಯಾವುದೋ ಮೂಲೆಯಲ್ಲಿದ್ದ ಬೇಸರದ ಕಾರ್ಮೋಡ ಕರಗಿ ಸೂರ್ಯಕಿರಣ ಕಂಡಂತಾಯಿತು ಎನ್ನುವಲ್ಲಿ ಕಥಾನಾಯಕಿ ಮಾಧುರಿ ಹೆಣ್ಣಿಗೆ ಸಹಜವಾದ ತಾಯ್ತನವನ್ನು ಸಂತಸದಿಂದ ಸ್ವೀಕರಿಸಿದಳು ಎಂಬ ಧ್ವನಿ ಮೂಡಿಸುತ್ತಾರೆ. ಒಂದು ಸುಂದರ ಸಾಂಸಾರಿಕ ಕತೆ ಕೊಟ್ಟ ನಾಗರತ್ನ ಚಂದ್ರಶೇಖರ್ ಅವರಿಗೆ ಅಭಿನಂದನೆಗಳು.

4) 'ಭಾಗೀರಥಿ' – ಸರಸ್ವತಿ ನಟರಾಜ್:

ಸರಸ್ವತಿ ನಟರಾಜ್ ಅವರದು ಪಳಗಿದ ಪ್ರೌಢ ಬರವಣಿಗೆ. ಈಕೆ ಕವಯತ್ರಿಯೂ ಹೌದು. ಆದರೆ ಕಥೆಗಾರ್ತಿಯಾಗಿ, ಕಾದಂಬರಿಗಾರ್ತಿಯಾಗಿ ಹೆಚ್ಚು ಯಶಸ್ಸನ್ನು ಗಳಿಸಿರುವವರು. ಕತೆ ಕಾದಂಬರಿಗಳ ಪಾತ್ರಗಳ ಭಾವನೆಗಳ ತಾಕಲಾಟ,

ತಲ್ಲಣ, ಆತ್ಮಾವಲೋಕನ ಇತ್ಯಾದಿಗಳನ್ನು ಬಹಳ ಶಕ್ತವಾಗಿ ಪ್ರತಿಬಿಂಬಿಸುವಲ್ಲಿ ಸರಸ್ವತಿಯವರ ಪ್ರತಿಭೆ ಹಿರಿದು. ತನ್ನ ಬೇಕುಬೇಡಗಳನ್ನರಿತು ತುಂಬಾ ಪ್ರೀತಿಯಿಂದ ಕಾಣುತ್ತಿದ್ದ ಪತಿಯನ್ನು ಇಳಿವಯಸ್ಸಿನಲ್ಲಿ ಕಳೆದುಕೊಂಡು ಭಾಗೀರಥಿ ಪಡುವ ಯಾತನೆ, ಸ್ವಲ್ಪ ಸ್ವಲ್ಪವಾಗಿ ಮಗ ಸೊಸೆ ಮನೆಯಲ್ಲಿ ತಮ್ಮ ಆಧಿಪತ್ಯ ವಿಸ್ತರಿಸಿಕೊಳ್ಳುವ ಹಂಚಿಕೆಯನ್ನು ನೋಡುತ್ತಾ ಒಂಟಿತನದ ಯಾತನೆಯ ಜೊತೆ ಅನಾಥ ಭಾವ ಕಾಡಿದರೂ ವಿರೋಧಿಸಲಾಗದೆ ಮೂಕವಾಗಿ ಅನುಭವಿಸುವ ಚಿತ್ರಣ ಬಹಳಷ್ಟು ಹೆಂಗಸರ ಅವ್ಯಕ್ತ ನೋವನ್ನು ಪ್ರತಿನಿಧಿಸುತ್ತದೆ. ಆದರೆ ತನ್ನ ಪತಿ ಕಟ್ಟಿಸಿದ ಮನೆಯೊಡತಿ ತಾನಾಗಿದ್ದರೂ, ತಂದೆಯ ಮರಣದ ನಂತರ ಎಲ್ಲವನ್ನೂ ತನ್ನ ಸುಪರ್ದಿಗೆ ತೆಗೆದುಕೊಂಡು ತಾಯಿಯದೆನ್ನುವುದು ಏನೂ ಇಲ್ಲ ಎನ್ನುವಂತೆ ಮಾಡಹೊರಟ ಮಗನನ್ನು ಕಡೆಗಾದರೂ ಆಕೆ ಸೌಮ್ಯವಾಗಿಯೇ ಆದರೆ ಧೈರ್ಯದಿಂದ ಎದುರಿಸಿ ನಿಲ್ಲುವುದು ಮೆಚ್ಚುಗೆಗೆ ಪಾತ್ರವಾಗುತ್ತದೆ. ಸರಸ್ವತಿಯವರು ಚಿತ್ರಿಸುವ ಸ್ತ್ರೀ ಪಾತ್ರಗಳು ಇಂತಹ ನಡೆಗಳಿಂದ ನಮಗೆ ಆಪ್ತರಾಗುತ್ತಾರೆ. ಸರಸ್ವತಿಯವರಿಗೆ ಅಭಿನಂದನೆಗಳು.

೫) 'ಕ ಕಾರ ಕವನ' – ಶೀಲಾ ಅರಕಲಗೂಡು:

ಬಹಳಷ್ಟು ವರ್ಷ ಶಿಕ್ಷಕಿಯಾಗಿ, ಒಂದು ಬೃಹತ್ ಶಾಲೆಯ ಪ್ರಾಂಶುಪಾಲರಾಗಿ, ಆಪ್ತ ಸಮಾಲೋಚಕಿಯಾಗಿ ಶೀಲಾ ಅವರ ಅನುಭವ ಬಹಳ ವಿಸ್ತಾರವಾದುದು. ಸಾಹಿತ್ಯ ಕ್ಷೇತ್ರಕ್ಕೆ ತುಸು ತಡವಾಗಿ ತಮ್ಮನ್ನು ತೆರೆದುಕೊಂಡರೂ ಅತ್ಯುತ್ಸಾಹದಿಂದ ದಾಪುಗಾಲಿಡುತ್ತಿದ್ದಾರೆ. ವೈವಿಧ್ಯಮಯವಾದ ವಿಷಯಗಳನ್ನು ಆರಿಸಿಕೊಂಡು ನಿರಂತರ ಪ್ರಯೋಗ ಶೀಲರಾಗಿ ಹೊಸಬಗೆಯ ಕವನ, ಷಟ್ಪದಿ, ಮುಕ್ತಕ ಇತ್ಯಾದಿಗಳನ್ನು ಪ್ರಾಸಲಯಬದ್ಧವಾಗಿ ರಚಿಸುತ್ತಾ ಕಲಿಯುತ್ತಾ ಹೋಗುತ್ತಿದ್ದಾರೆ ಶೀಲ. ಈ 'ಕ ಕಾರ ಕವನ' 18 ಚರಣಗಳುಳ್ಳ ಸುದೀರ್ಘ ಕವನ. ಇಡೀ ಕವನವನ್ನು 'ಕ' ಕಾರದಿಂದಲೇ ಕೋದಿರುವುದು ಕವಯಿತ್ರಿಯ ಕರ್ತೃತ್ವ ಶಕ್ತಿಗೆ ಕಿರೀಟವಿಟ್ಟಂತಿದೆ. ಇಲ್ಲಿ ಕನ್ನಡದ ಬಗೆಗೆ ಅಪಾರ ಪ್ರೇಮವಿದೆ. ವನ, ನದಿ, ಪರ್ವತಗಳು, ಕೋಟೆ ಕೊತ್ತಲಗಳು ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳು, ಕ್ರೀಡೆಗಳು, ಹೂ ಹಣ್ಣುಗಳು, ಕಸುಬುಗಳು, ದೇಹದ ಅಂಗಾಂಗಗಳು, ಕರುನಾಡ ತಿಂಡಿ, ಕರುನಾಡ ಪ್ರೇಮ, ಕನ್ನಡ ಪ್ರೇಮ ಎಲ್ಲವನ್ನೂ ಕನ್ನಡದ ಕೂಸಿಗೆ ಕ ಕಾರದ ಪದಗಳಿಂದಲೇ ಪರಿಚಯಿಸುವ ರೀತಿ ವಿಸ್ಮಯ ಹುಟ್ಟಿಸುವುದರ ಜೊತೆಗೆ ಮುದಕೊಡುತ್ತದೆ. ನಿಘಂಟಿನಲ್ಲಿ ದೊರಕುವ ಎಲ್ಲಾ ಕ ಕಾರ ಪದಗಳನ್ನು ಶೀಲಾ ಅವರು ಬರಿದು ಮಾಡಿಬಿಟ್ಟಿದ್ದಾರೆ ಎನಿಸುತ್ತದೆ. ಇದೊಂದು ವಿಶಿಷ್ಟವಾದ ಶ್ಲಾಘನೀಯ ಪ್ರಯತ್ನ. ನಿಮ್ಮ ಶ್ರಮ, ಆಸಕ್ತಿ, ಉತ್ಸಾಹ, ಪ್ರತಿಭೆ ಎಲ್ಲದಕ್ಕೂ ನನ್ನದೊಂದು ದೊಡ್ಡ ಸಲಾಂ ಶೀಲಾ.

೬) 'ಮುಡಿಯಿಂದ ಜಾರಿದ ಹೂವು' – ಗಿರಿಜಾ ರಾಜ್:

ಈ ವೇದಿಕೆಗೆ ನಮ್ಮಷ್ಟು ಹಳಬರಲ್ಲದಿದ್ದರೂ ತಮ್ಮ ವೈಶಿಷ್ಟ್ಯಪೂರ್ಣ ಪ್ರಸ್ತುತಿಗಳ ಚಿಂತನೆಗಳ ಮೂಲಕ ಗಮನ ಸೆಳೆದಿರುವ ಶ್ರೀಮತಿ ಗಿರಿಜಾ ರಾಜ್ ಅವರ ಹಲವಾರು ಲೇಖನಗಳು ಬಹುಕಾಲ ನೆನಪಿರುವಂತವು. ಅವರ ಇಂದಿನ ಪ್ರಸ್ತುತಿ 'ಮುಡಿಯಿಂದ ಜಾರಿದ ಹೂವು'. ಪ್ರಕೃತಿಪ್ರಿಯರಾದ, ವಿಭಿನ್ನ ಅನುಭವಗಳಿಗೆ ತೆರೆದುಕೊಳ್ಳಲು ಸದಾ ಕಾತರಿಸುವ ಲೇಖಕಿ ಪಾರ್ಕಿನಲ್ಲಿ ಕಂಡ ಸುಂದರ ಯುವಕನ ಪರಿಚಯ ಮಾಡಿಕೊಂಡು ಸಹೃದಯತೆಯಿಂದ ಅವನ ಅನಿಸಿಕೆಗಳಿಗೆ ಕಿವಿಯಾಗುತ್ತಾರೆ. ಮನೆಯವರ ಒತ್ತಾಯಕ್ಕೆ ಮಣಿಯದೆ ತನಗಿಷ್ಟದ ಹುಡುಗಿಯನ್ನು ತಾನೇ ಆಯ್ಕೆ

ಮಾಡಿಕೊಳ್ಳಲು ನಿರ್ಧರಿಸಿ ಮನೆ ತೊರೆದು ಬಂದು ತನ್ನ ಗೆಳೆಯನಿಗಾಗಿ ಕಾಯುತ್ತಿದ್ದ ಆ ಯುವಕ. ಮುಹೂರ್ತ ಕೂಡಿಬಂದರೆ ಅವನ ಇಷ್ಟದ ಹುಡುಗಿಯೇ ಸಿಗುವಳು ಎಂದು ಭರವಸೆ ತುಂಬುವ ಲೇಖಕಿ, ನಂತರದ ಘಟನೆಯನ್ನು ಬಹಳ ಕುತೂಹಲಕರವಾಗಿ ರಮ್ಯವಾಗಿ ನಿರೂಪಿಸುತ್ತ, ಯುವಕನ ಅಪೇಕ್ಷೆಯಂತಹ ಒಬ್ಬ ಹುಡುಗಿ ಅಚಾನಕ್ಕಾಗಿ ಅಲ್ಲಿಗೆ ಬಂದು ಕ್ರಮೇಣ ಅವರಿಬ್ಬರೂ ಅಲ್ಪ ಸಮಯದಲ್ಲೆ ಪರಸ್ಪರ ಆಕರ್ಷಿತರಾಗಿ, ಹುಡುಗನಂತೂ ಖುಷಿಯಿಂದ ಕನಸಿನ ಲೋಕದಲ್ಲಿ ತೇಲುತ್ತಾ, ಮುಂದೇನು ಎನ್ನುವ ಕುತೂಹಲ ನಮ್ಮಲ್ಲೂ ಮೂಡುತ್ತಿರುವಂತೆ.. ತಂಗಾಳಿ ಮಾಯವಾಗಿ ಸೂರ್ಯನ ಸುಡುಸುಡುವ ಪ್ರಖರ ಕಿರಣಗಳ ಪ್ರಸ್ತಾಪ ಸಾಂಕೇತಿಕವಾಗಿ ಮುಂದಿನ ಅನೂಹ್ಯ ಘಟನೆಯ ಮುನ್ಸೂಚನೆಯಂತೆ ತೋರಿಸುವುದು ಲೇಖಕಿಯ ಪ್ರತಿಭೆ. ಅವನ ಕನಸಿನ ಕನ್ಯೆ ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದವಳು ಎಂಬ ವಿಷಯ ನಮಗೂ ಆಘಾತವನ್ನುಂಟು ಮಾಡುತ್ತದೆ. ಸತ್ಯ ಘಟನೆಯೆಂಬಷ್ಟೇ ಪರಿಣಾಮಕಾರಿಯಾದ ನಿರೂಪಣೆಯಿಂದ ಕಥೆ ಗೆಲ್ಲುತ್ತದೆ. ಗಿರಿಜಾರಾಜ್ ಅವರಿಗೆ ಅಭಿನಂದನೆಗಳು ಮತ್ತು ಧನ್ಯವಾದಗಳು.

7) 'ಅಮ್ಮಿ ಮಾತ್ರಾ... ನಾವು ಮಾತ್ರಾ' – ವೆಂಕಟೇಷ ಕಾಮತ್:

ಕೊಂಕಣಿ ಮಾತೃಭಾಷೆಯ ಶ್ರೀವೆಂಕಟೇಷ ಕಾಮತ್ ಅವರ ಕನ್ನಡ ಪ್ರೇಮ ತಮ್ಮ ಮಾತೃಭಾಷೆಯಷ್ಟೇ ಗಾಢವಾದುದು. ಅರವತ್ತು ವರ್ಷಗಳಗೂ ಹಿಂದಿನ ನಿರ್ಮಲ, ಶಾಂತ, ಹಿತಕರವಾದ ವಾತಾವರಣದ ಗದ್ದಲ ಗೌಜು ಇಲ್ಲದ ಅಂದಿನ ಬೆಂಗಳೂರಿನ ಪರಿಚಯ ಮಾಡಿಸುವಾಗ ಅಯ್ಯೋ ಈಗ ಹೇಗಾಗಿ ಹೋಗಿದೆಯಲ್ಲ ಎನಿಸದಿರದು. ಆ ಕಾಲದಲ್ಲೆಲ್ಲಾ ಎಲ್ಲರ ಮನೆಗಳೂ – ಚಿಕ್ಕದೋ ದೊಡ್ಡದೋ – ಗಂಡ ಹೆಂಡತಿ ಮಕ್ಕಳು ಎಂಬ ನಾವು ಮಾತ್ರ –ಅಮ್ಮಿ ಮಾತ್ರ– ಎಂಬ ಸಂಸಾರ ಇರಲೇ ಇಲ್ಲವೇನೋ. ಊರಿನಿಂದ ಬರುತ್ತಲಿದ್ದ ನೆಂಟರು ಸ್ನೇಹಿತರಿಂದ ಆಗಾಗ್ಗೆ ಮನೆ ತುಂಬುವಾಗ, ಇದ್ದುದನ್ನೇ ಸಂತೋಷದಿಂದ ಹಂಚಿಕೊಳ್ಳುತ್ತಿದ್ದಾಗ, ಮಕ್ಕಳಿಗೆ ನಾವು ಮಾತ್ರ ಆಗಿ ನಮ್ಮ ಮನೆಯಲ್ಲಿ ನಾವು ಯಾವಾಗ ಇರೋದು ಎಂಬ ಭಾವನೆ ಹಳಹಳಿಕೆ ಉಂಟಾಗುತ್ತಿದ್ದುದೂ ಉಂಟೇನೊ. ತಮ್ಮ ಆ ಬಾಲ್ಯದ ಅಂತಹ ಭಾವನೆಗಳನ್ನು ಮುಚ್ಚುಮರೆಯಿಲ್ಲದೆ ಹೇಳಕೊಳ್ಳುವ ಕಾಮತರು ಮುಂದೆ ಬೆಳೆದು ದೊಡ್ಡವರಾಗುತ್ತಲೂ ತಾವೆಂದು 'ಅಮ್ಮಿ ಮಾತ್ರಾ' ಎಂಬಂತೆ ಇರಲೇಇಲ್ಲ ಎಂದು ಹಳಹಳಸುತ್ತಿದ್ದರಂತೆ. ಆದರೆ ಈಗ ಯಾರ ಮನೆಗೆ ಯಾರೂ ಹೋಗದೆ, ಮೊಮ್ಮಕ್ಕಳ ಬಾಂಧವ್ಯವೂ ಗಾಢವಾಗಿರದೆ, ಈಗ ಬೇಡವೆಂದರೂ ಅಮ್ಮಿ ಮಾತ್ರ... ನಾವು ಮಾತ್ರ ಎಂಬ ಪರಿಸ್ಥಿತಿ ಬಂದಿರುವುದು ಆಧುನಿಕ ಸ್ವಾರ್ಥಪೂರಿತ ಸ್ವಕೇಂದ್ರೀಕೃತ ಬದುಕಿನ ದುರಂತ ಎಂಬುದನ್ನು ಅವ್ಯಕ್ತವಾಗಿಯೇ ಬಿಚ್ಚಿಡುತ್ತಾರೆ. ಚಿಂತನೀಯ ಲೇಖನ ಕೊಟ್ಟ ವೇಂಕಟೇಷ ಕಾಮತರಿಗೆ ಧನ್ಯವಾದಗಳು.

೮) 'ಇರುವುದೆಲ್ಲವ ಬಿಟ್ಟು'– ಸುಜಾತಾ ರವೀಶ್:

ಶ್ರೀಮತಿ ಸುಜಾತಾ ರವೀಶ್ ನಮ್ಮ ವೇದಿಕೆಗೆ ಇತ್ತೀಚೆಗೆ ಸೇರ್ಪಡೆಯಾದವರು. ಅವರ ಕೆಲವೇ ಕವನ, ಲೇಖನಗಳು ಈ ವೇದಿಕೆಯಲ್ಲಿ ಪ್ರಸ್ತುತವಾಗಿದ್ದರೂ ನುರಿತ ಲೇಖಕಿ ಎಂಬುದರಲ್ಲಿ ಸಂಶಯವಿಲ್ಲ. ಇವರ 'ಇರುವುದೆಲ್ಲವ ಬಿಟ್ಟು' ಕತೆ ವಿಭಿನ್ನ ನಡೆಯಿಂದ ವಿಶಿಷ್ಟವೆನಿಸುತ್ತದೆ. ಕಾದಂಬರಿಗಳ ಪ್ರಮುಖ ಪಾತ್ರಗಳೇ ಜೀವಂತವಾಗಿ ಕಾದಂಬರಿಕಾರ್ತಿಯ ಮನೆಗೆ ಬಂದು ತಮ್ಮನ್ನು ರೂಪಿಸಿದ ಪರಿಗೆ ಆಕ್ರೋಶ ವ್ಯಕ್ತಪಡಿಸಿ ತರಾಟೆಗೆ ತೆಗೆದುಕೊಳ್ಳುತ್ತವೆ. ಕಾದಂಬರಿಗಾರ್ತಿಯ ಮರ್ಜಿಯಂತೆ ಪ್ರೀತಿಸುವವನಿಂದ ದೂರಮಾಡಿ ಶ್ರೀಮಂತನ ಜೊತೆ ಮದುವೆ ಮಾಡಿಸಿದ್ದರಿಂದ ತಾನು ಅನುಭವಿಸಿದ

ನಿರಾಶೆ ನೋವಿನ ಬಗ್ಗೆ ಒಬ್ಬಳು ದೂರಿದರೆ, ಇನ್ನೊಬ್ಬಳು ಅಂತರ್ಜಾತೀಯ ವಿವಾಹ ಮಾಡಿಸಿ ಕಾದಂಬರಿ ಮುಗಿಸಿದ ಬಗ್ಗೆ, ಅದು ಮುಕ್ತಾಯವಾಗದೆ ತನ್ನ ಬಾಳಿನ ಹೊಸ ಯಾತನೆಯ ಪರ್ವದ ಆರಂಭವಾದ ಬಗ್ಗೆ ಆಕ್ಷೇಪಿಸಿದರೆ, ಮತ್ತೊಂದು ಪಾತ್ರ ತನ್ನನ್ನು ಗತ್ತು ಗಾಂಭೀರ್ಯ ಅಹಂಕಾರದ ಪಾತ್ರವಾಗಿ ಚಿತ್ರಿಸಿದ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತದೆ. ಇನ್ನೊಂದೇ ಪಾತ್ರ ತನ್ನನ್ನು ಶಾಸ್ತ್ರ ಸಂಪ್ರದಾಯದ ಕಟ್ಟಿನಲ್ಲಿ ಬಂಧಿಸಿ ಗಂಡುಕುಲಕ್ಕೆ ಸಹಾಯ ಮಾಡಿದೆ ಎಂದು ಉರಿದು ಬೀಳುತ್ತಾಳೆ. ಹೀಗೆ ವಿನೂತನವಾದ ತಂತ್ರದಿಂದ ತಮ್ಮ ತಮ್ಮ ಜೀವನಸ್ಥಿತಿಯಿಂದ ತೃಪ್ತಿ ಇರದೆ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ' ಎಂಬ ಕವಿವಾಣಿ ಅದೆಷ್ಟು ಸಾರ್ವಕಾಲಿಕ ಸತ್ಯ ಎಂಬುದನ್ನು ನಿರೂಪಿಸುವ ಈ ಕತೆ ತನ್ನ ವಿಭಿನ್ನತೆಯಿಂದ ಮನ ಸೆಳೆಯುತ್ತದೆ. ಕಾದಂಬರಿಗಾರ್ತಿಗೆ ಈ ಎಲ್ಲ ಪಾತ್ರಗಳು ತನ್ನ ಮೇಲೆ ಈ ರೀತಿ ದಾಳಿ ಮಾಡಿದುದು ಕೇವಲ ಕನಸು ಎಂದು ಅರ್ಥವಾಗಿ ನಿರಾಳವಾದರೂ ಕತೆ ಮನಸ್ಸಿನಲ್ಲಿ ಉಳಿದು ಚಿಂತನೆಗೆ ಹಚ್ಚುತ್ತದೆ. ಹೊಸ ರೀತಿಯ ಕತೆ ಕೊಟ್ಟ ಸುಜಾತಾ ರವೀಶ್ ಅವರಿಗೆ ಅಭಿನಂದನೆಗಳು.

೯) 'ಮೌಲ್ಯಮಾಪನ' – ರೇಣುಕಾ ದೇಸಾಯಿ:

ನಗುಮುಖದಿಂದ ಆತ್ಮೀಯವಾಗಿ ನೋಡಿಯೋ ಸಾಹಿತ್ಯ ದಾಸೋಹಕ್ಕೆ ಎಲ್ಲರನ್ನೂ ಆಹ್ವಾನಿಸುವ ರೇಣುಕಾ ದೇಸಾಯಿ ಎಲ್ಲರಿಗೂ ಪ್ರಿಯರಾದವರು. ಬಹಳ ಆಸ್ಥೆಯಿಂದ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವವರು. ಇವರ 'ಮೌಲ್ಯಮಾಪನ' ಜೀವನೋತ್ಸಾಹವನ್ನು, ಜೀವನ ಪ್ರೀತಿಯನ್ನು ಬಿಂಬಿಸುವ ಧನಾತ್ಮಕ ಅಂಶಗಳನ್ನೊಳಗೊಂಡ ಕತೆ. Cerebral Palsy ಎನ್ನುವ ಚಿಕಿತ್ಸೆಯಿಲ್ಲದ ತೊಂದರೆಯೊಂದಿಗೇ ಹುಟ್ಟಿದ ಮಗುವನ್ನು ಪಡೆದೂ ಆ ಮಗುವಿನಿಂದ ತನ್ನ ಜೀವನ ಉದ್ಧಾರವಾಯ್ತು ಎಂದು ಅದರ ತಾಯಿ ಹೇಳುವಾಗ ಅಚ್ಚರಿಯಾಗುತ್ತದೆ. ಯಾವುದೇ ತರಹದ ವೈಕಲ್ಯ ಹೊಂದಿದ ಸಂತಾನ ಆದರೂ ಹೆತ್ತವರಿಗೆ ಅದು ಅಳಿಸಲಾಗದ ಕೊರಗಾಗುತ್ತದೆ. ಆದರೆ ವಿಭಾ ಮತ್ತು ಅವಳ ಗಂಡ ತಮ್ಮ ಇಂತಹ ಮಗುವನ್ನು ಅದೃಷ್ಟದ ಮಗು ಎಂದು ತಿಳಿದು ಸಾಕುವುದು ಅವರ ಹೃದಯ ವೈಶಾಲ್ಯವನ್ನು ಎತ್ತಿ ತೋರಿಸುತ್ತದೆ. ಆ ಮಗುವಿನ ಕಾರಣದಿಂದಾಗಿಯೇ ಹೆಚ್ಚು ಓದದ ತಾನು ಇಂತಹ ಮಕ್ಕಳನ್ನು ನೋಡಿಕೊಳ್ಳುವ ತರಬೇತಿ ಪಡೆದು ಉನ್ನತಿಗೇರಿರುವ ಬಗ್ಗೆ ಹೇಳುವಾಗ ಎಂಥದೇ ಬದುಕಿನಲ್ಲೂ ಧನಾತ್ಮಕವಾದ ಒಂದು ಅಂಶವನ್ನು ಕಾಣಬಹುದು ಎಂಬುದನ್ನು ಈ ಕತೆ ತೋರಿಸಿಕೊಡುತ್ತದೆ. ವಿಭಾಳಂತಹವರ ಬಗ್ಗೆ ಅಪಾರ ಗೌರವ ಮೂಡುತ್ತದೆ. ಕಡೆಯ ಸಾಲುಗಳಲ್ಲಿ ಪ್ರಿನ್ಸಿಪಾಲ್ ಮೇಡಂಗೆ ಸ್ಫುರಿಸುವ ಭಾವದಲ್ಲಿ ಜೀವನದ ಪಾಠವೇ ಸಂಗ್ರಹಿತವಾಗಿದೆ ಎನಿಸುತ್ತದೆ. ಧನಾತ್ಮಕ ಅಂಶದ ಕತೆಯನ್ನು ಕೊಟ್ಟ ರೇಣುಕಾ ದೇಸಾಯಿಯವರಿಗೆ ಅಭಿನಂದನೆಗಳು

೧೦) 'ಮುದುಕಿಯ ಮನೆಗೆ ಹೋಗುವೆನು' – ಶಾಂತಿ ವಾಸು:

ಲೇಖಕಿಯಾಗಿ, ಕವಯಿತ್ರಿಯಾಗಿ, ಅಧ್ಯಾತ್ಮ ಚಿಂತಕಿಯಾಗಿ, ಉತ್ತಮ ಚಿತ್ರಕಲಾವಿದೆಯಾಗಿ ಹಲವಾರು ಸಾಧನೆಗಳನ್ನು ಮಾಡಿರುವ ಶಾಂತಿಯವರ ಪ್ರಸ್ತುತಿ 'ಮುದುಕಿಯ ಮನೆಗೆ ಹೋಗುವೆನು'. ಹಸುಳೆತನ, ಬಾಲ್ಯ, ಯೌವನ, ತಾರುಣ್ಯ, ವಿವಾಹ, ಸಂಸಾರ, ವೃದ್ಧಾಪ್ಯ ಈ ಎಲ್ಲಾ ಘಟ್ಟಗಳನ್ನೂ ಹಾದುಬರುತ್ತಲೇ ಮನುಷ್ಯ ಮಾಗುತ್ತಾ ಹೋಗುವುದು. ಎಳೆತನದ ಮುಗ್ಧ ಪ್ರಪಂಚವೇ ಬೇರೆ. ಯೌವನಕ್ಕೆ ಕಾಲಿಟ್ಟಾಗ ತನ್ನನ್ನೇತಾನು ಮೋಹಿಸುವಂತೆ ಕನ್ನಡಿ ಯಲ್ಲಿ ಕಾಣುತ್ತಿದ್ದ ತಾನು, ಸತ್ಯವನ್ನೇ ತೋರುವ ಅದೇ ಕನ್ನಡಿ ಈಗ ಪ್ರಾಯ ಸಂದ ಮುದುಕಿಯನ್ನು ತೋರುತ್ತದೆ.

ಈ ನಡುವೆ ತನ್ನ ವಯಸ್ಸಿನ ಸ್ಥಿತ್ಯಂತರಗಳ ಎಷ್ಟೋ ಘಟ್ಟಗಳನ್ನು ನೋಡದೆಯೇ ಪ್ರಪಂಚದಿಂದ ಮರೆಯಾದವರ ಬಗ್ಗೆಯೂ ಹೇಳುವ ಕವಯಿತ್ರಿ 'ಅಲ್ಲಿದೆ ನಮ್ಮ ಮನೆ ಇಲ್ಲಿ ಬಂದೆ ಸುಮ್ಮನೆ' ಎಂಬ ದಾಸರ ನುಡಿಯಂತೆ ಈ ಶರೀರವೆಂಬ ಮನೆ ನಮ್ಮದಲ್ಲ. ಇದು ಬಾಡಿಗೆಯ ಮನೆ. ಶಾಶ್ವತವಲ್ಲ. ತಾನು ತನಗೆ ಉಪಕರಿಸಿದವರನ್ನು ನೆನೆಯುವಂತೆ, 'ಆ' ಮನೆಗೆ ಹೋಗುವ ಮುಂಚೆ ಉಳಿದವರು ತನ್ನನ್ನು ಸದಾಕಾಲ ನೆನೆಯುವಂತೆ ಸತ್ಕಾರ್ಯಗಳನ್ನು ಮಾಡುತ್ತಾ, ಆ ಸತ್ಕಾರ್ಯದ ಸೇತುವೆಯ ಮೂಲಕ ಭವಸಾಗರದಿಂದ ಬಳಸಿ ಬರುವೆ ಎಂಬ ಪುನರ್ಜನ್ಮದ ನಂಬಿಕೆ ಯನ್ನು ಪುಷ್ಟೀಕರಿಸುತ್ತಾರೆನಿಸುತ್ತದೆ. ಅಧ್ಯಾತ್ಮದ ಸೆಲೆಯ ಕವನವನ್ನು ಕೊಟ್ಟ ಶಾಂತಿವಾಸು ಅವರಿಗೆ ಧನ್ಯವಾದಗಳು.

11) 'ಮುಲ್ಲಾ ನಸ್ರುದ್ದೀನನ ಕಥೆಗಳು' – ವಿಠ್ಠಲ್ ಇಜೇರಿ:

ಶ್ರೀ ವಿಠ್ಠಲ್ ಇಜೇರಿಯವರು ನಮ್ಮ ವೇದಿಕೆಯ ಅತ್ಯಂತ ಕ್ರಿಯಾಶೀಲ ಪ್ರತಿಭಾನ್ವಿತ ಸದಸ್ಯರು ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಪ್ರತಿದಿನದ ಪ್ರತಿಯೊಂದು ಪ್ರಸ್ತುತಿಯನ್ನೂ ಆಸ್ಥೆಯಿಂದ ಓದಿ ಸೂಕ್ತವಾಗಿ ಸಹೃದಯತೆಯಿಂದ ತಪ್ಪದೆ ಸ್ಪಂದಿಸುವ ಅವರ ಗುಣ ಅನನ್ಯ. ಹಾಗೇ ಸುಮ್ಮನೆ ಎನ್ನುತ್ತಲೇ ಅವರು ಪ್ರಸ್ತುತಪಡಿಸುತ್ತಿರುವ ಲೇಖನಗಳ ಸಂಖ್ಯೆ, ವಿಷಯ ವೈವಿಧ್ಯ, ಅವರ ಅಧ್ಯಯನದ ವಿಸ್ತಾರ ಬೆರಗು ಹುಟ್ಟಿಸುತ್ತದೆ. ಇಂದಿನ ದಾಸೋಹದ ಅವರ ಲೇಖನ – 'ಕಥಾಪ್ರಪಂಚ' ದಲ್ಲಿ ಟರ್ಕಿ ದೇಶದ ಶ್ರೇಷ್ಠ ತತ್ವಜ್ಞಾನಿ, ಒಂದು ಬಗೆಯ ಸೂಫಿ ಸಂತ, ಮಹಾ ಬುದ್ಧಿವಂತ ಮತ್ತು ಜಗತ್ತಿನಾದ್ಯಂತ ವಿಶಿಷ್ಟಾರ್ಥದ ನೀತಿಕತೆಗಳ ಮೂಲಕ ಜನಪ್ರಿಯನಾಗಿರುವ ಮುಲ್ಲಾ ನಸ್ರುದ್ದೀನನ್ನು ಪರಿಚಯಿಸುತ್ತಾರೆ. ನಸ್ರುದ್ದೀನ್ ಏಕೆ ಮದುವೆಯಾಗಿಲ್ಲ ಎಂಬ ಪ್ರಶ್ನೆಗೆ ಅವನು ಕೊಡುವ ಉತ್ತರ – "ಪರಿಪೂರ್ಣ ಹೆಣ್ಣಿಗಾಗಿ ಹುಡುಕುತ್ತಿದ್ದೇನೆ". ಹಾಗಾದರೆ "ಪರಿಪೂರ್ಣ ಹೆಣ್ಣುಗಳೇ ಇಲ್ಲವೇ?" ಎಂಬ ಮತ್ತೊಂದು ಪ್ರಶ್ನೆಗೆ "ಇದ್ದಾರೆ. ಆದರೆ ಅವರಿಗೂ ಪರಿಪೂರ್ಣ ಗಂಡು ಬೇಕಂತೆ" ಎಂಬ ಉತ್ತರ ಬಹು ಮಾರ್ಮಿಕವಾಗಿದ್ದು ಪುರುಷರ ಪುರುಷತ್ವದ ಅಹಂಗೆ ಚಾಟಿ ಏಟು ಕೊಟ್ಟಂತಿದೆ. ಹಾಗೆಯೇ ಇನ್ನೊಂದು ಕತೆ. ಭಗವಂತ ಕೊಟ್ಟಿರುವ ದೋಷವಿಲ್ಲದೆ ಕೆಲಸಮಾಡುವ ಅಂಗಾಂಗಗಳನ್ನು ಹೊಂದಿದ ಅಮೂಲ್ಯವಾದ ಈ ಅದ್ಭುತ ಶರೀರವನ್ನು ಪಡೆದೂ, ದುಡಿದು ತಿನ್ನಲು ಯತ್ನಿಸದೆ ತಾನು ಬಡವ ಎಂದು ದುಃಖಿಸುತ್ತಾ ಭಿಕ್ಷೆ ಬೇಡುವವರಿಗೆ ಪಾಠ ಕಲಿಸುವಂತಿದೆ. ಜೀವನದಲ್ಲಿ ಪಡೆದಿರುವ ಅನುಗ್ರಹಗಳನ್ನು ಲಕ್ಷಿಸದೆ ಕೊರಗುವವರಿಗೆ ಉತ್ತಮವಾದ ಪಾಠ ಹತ್ತು ಸಾವಿರ ದೀನಾರ ಕೊಡುವ ಕತೆ. ಮುಲ್ಲಾ ನಸ್ರುದ್ದೀನನ ಇಂಥ ಸಾವಿರಾರು ಕತೆಗಳು ಜೀವನದ ಪಾಠವನ್ನು ಹೇಳುತ್ತಲೇ ಜೀವನದ ನಶ್ವರತೆಯನ್ನು ತಿಳಿಸಿ ಅಧ್ಯಾತ್ಮಿಕತೆಯ ಕಡೆ ಮನಸ್ಸನ್ನು ತಿರುಗಿಸುವಂತಿವೆ. ಇಷ್ಟು ಉತ್ತಮ ರೀತಿಯಲ್ಲಿ ಮುಲ್ಲಾ ನಸ್ರುದ್ದೀನನ ಪರಿಚಯ ಮಾಡಿದ ಶ್ರೀ ವಿಠ್ಠಲ್ ಇಜೇರಿಯವರಿಗೆ ಅಭಿನಂದನೆಗಳು ಮತ್ತು ಧನ್ಯವಾದಗಳು.

12) 'ರಿಪಬ್ಲಿಕ್ ಆಫ್ ನೌರು' – ರಾಧಿಕಾ ಗುಜ್ಜರ್:

ವಿಠ್ಠಲ್ ಇಜೇರಿಯವರನ್ನು ಬಿಟ್ಟರೆ ಪ್ರತಿಯೊಂದು ಪ್ರಸ್ತುತಿಗೂ ಸ್ಪಂದಿಸುವವರು ರಾಧಿಕಾ ಗುಜ್ಜರ್. ಮನೆ ಮಾತು ಮರಾಠಿಯಾದರೂ ಅಪಾರ ಕನ್ನಡ ಪ್ರೇಮ. ಅರ್ಥಪೂರ್ಣವಾದ ಕವನ, ಲೇಖನಗಳು ಅವರ ಲೇಖನಿಯಿಂದ ಮೂಡಿಬರುತ್ತಿರುತ್ತವೆ. 'ರಿಪಬ್ಲಿಕ್ ಆಫ್ ನೌರು' ಎಂಬ ವಿಶ್ವದ ಮೂರನೇ ಅತೀ ಚಿಕ್ಕ ರಾಷ್ಟ್ರವನ್ನು ಪರಿಚಯಿಸುವ ಈ

ಲೇಖನದ ತುಂಬಾ ರಾಧಿಕಾರವರ ಆಸಕ್ತಿ, ಮಾಹಿತಿಗಳನ್ನು ಕಲೆ ಹಾಕುವುದರಲ್ಲಿ ತೋರುವ ಶ್ರದ್ಧೆ ಎದ್ದು ಕಾಣುತ್ತದೆ. ಹಿಂದೆಯೂ ಇಂತಹ ಮಾಹಿತಿಪೂರ್ಣ ವಿಶಿಷ್ಟ ಲೇಖನಗಳನ್ನು ಪ್ರಸ್ತುತಪಡಿಸಿ ವೇದಿಕೆಯವರ ಮನ ಗೆದ್ದಿದ್ದಾರೆ. ವ್ಯಾಟಿಕನ್ ನಗರದ ನಂತರ ಕೇವಲ 10,834ರಷ್ಟು ಕಡಿಮೆ ಜನಸಂಖ್ಯೆಯುಳ್ಳ ದೇಶ ನೌರುವಿನ ಭಾಷೆ, ಧರ್ಮಗಳು, ಜನರ ಸ್ವಭಾವ, ವಿದ್ಯಾಭ್ಯಾಸದ ಮಟ್ಟ, ಆ ದೇಶದ ಭೌಗೋಳಿಕ ವ್ಯಾಪ್ತಿ, ಚಲಾವಣೆಯಲ್ಲಿರುವ ಹಣ, ವಾತಾವರಣ, ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ, ಆಹಾರ ಪದ್ಧತಿ, ಧ್ವಜ, ರಾಷ್ಟ್ರದ ನೈಸರ್ಗಿಕ ಸಂಪತ್ತು ಹೀಗೆ ಒಂದು ದೇಶವನ್ನು ಸ್ಥೂಲವಾಗಿಯಾದರೂ ಎಷ್ಟು ಸಮಗ್ರವಾಗಿ ಪರಿಚಯಿಸಬಹುದು ಎಂದು ಈ ಮೂಲಕ ತೋರಿಸಿಕೊಟ್ಟಿದ್ದಾರೆ. ರಾಧಿಕಾ ಅವರ ಆಸಕ್ತಿಯ ವಿಷಯಗಳಲ್ಲಿ ಹೊಸ ಹೊಸ ದೇಶಗಳು, ಬೇರೆ ಬೇರೆ ದೇಶಗಳ ಜಾನಪದ ನೃತ್ಯಗಳ ಬಗ್ಗೆ ತಿಳಿದುಕೊಳ್ಳುವುದು ಇವೂ ಸೇರಿವೆ. ನೌರು ದೇಶದ ಭೂಪಟ, ಭೂಮಿಯಲ್ಲಿ ಅದರ ಸ್ಥಾನ ಮತ್ತು ಧ್ವಜದ ಚಿತ್ರವನ್ನೂ ಒದಗಿಸಿ ಲೇಖನಕ್ಕೆ ಸ್ವಲ್ಪಮಟ್ಟಿನ ಸಮಗ್ರತೆಯನ್ನೂ ತಂದುಕೊಟ್ಟಿದ್ದಾರೆ. ಇಂತಹ ಅಪೂರ್ವ ದೇಶವನ್ನು ಪರಿಚಯಿಸಿದ ರಾಧಿಕಾ ಅವರಿಗೆ ಅಭಿನಂದನೆಗಳು.

13) 'ಲುನಾನ – ನಾನು ನೋಡಿದ ಒಂದು ಚಲನಚಿತ್ರ' – ಗುರುರಾಜ ಶಾಸ್ತ್ರಿ:

ಪಕ್ಷಿವೀಕ್ಷಣಾ ತಜ್ಞರೂ, ಈ ವೇದಿಕೆಯ ತಂತ್ರಜ್ಞಾನ ಪ್ರವೀಣರಲ್ಲಿ ಒಬ್ಬರೂ ಆದ ಗುರುರಾಜ ಶಾಸ್ತ್ರಿಯವರಿಂದ ಮತ್ತೊಂದು ಪ್ರವಾಸ ಕಥನ ಬರಬಹುದು ಎಂದು ನಿರೀಕ್ಷಿಸಿದ್ದೆ. ಆದರೆ ತಾವು ನೋಡಿದ ಒಂದು ಭೂತಾನ್ ದೇಶದ, ಆಸ್ಕರ್ ಪ್ರಶಸ್ತಿಗೆ ನಾಮ ನಿರ್ದೇಶನಗೊಂಡಿರುವ 'ಲುನಾನ. ಎ ಯಾಕ್ ಇನ್ ದ ಕ್ಲಾಸ್‌ರೂಂ' ಎಂಬ ಚಿತ್ರದ ಬಗ್ಗೆ ಬರೆದಿರುವ ಪರಿಚಯಾತ್ಮಕ ಲೇಖನ ಅಷ್ಟೇ ಖುಷಿಕೊಟ್ಟಿತು. ಮೂಲ ಭೂತಾನ್ ದೇಶದ ಜೋಙ್‌ಕಾ ಭಾಷೆಯ ಈ ಚಿತ್ರ ಹಿಂದಿಗೆ ಡಬ್ ಆಗಿ ಇಂಗ್ಲೀಷ್ ಸಬ್‌ಟೈಟಲ್‌ನೊಂದಿಗೂ ಕಾಣಸಿಗುತ್ತದೆ. ಗುರುರಾಜ ಶಾಸ್ತ್ರಿಯವರು ವನ್ಯಮೃಗ ಪಕ್ಷಿವೀಕ್ಷಣೆಯಲ್ಲಿ ಆಸಕ್ತಿ ವಹಿಸಿರುವಂತೆಯೇ ಸಾಹಿತ್ಯ ರಚನೆಯಲ್ಲಿಯೂ ಅಪಾರ ಆಸಕ್ತಿವಹಿಸಿರುವವರು. ಇದುವರೆಗೂ ಅವರ ಲೇಖನಿಯಿಂದ ಹೊರಬಂದಿರುವ ಲೇಖನಗಳು ಅವರೊಬ್ಬ ಉತ್ತಮ ಬರಹಗಾರರಾಗುವ ಲಕ್ಷಣಗಳನ್ನು ತೋರಿಸುತ್ತವೆ. ಲುನಾನಾ ಚಿತ್ರದ ಬಗೆಗಿನ ಲೇಖನವನ್ನೂ ಬಹಳ ಯುಕ್ತವಾಗಿ ಕುತೂಹಲ ಕೆರಳಿಸುವಂತೆ ಚಿತ್ರದ ನಾಯಕನ ಹವ್ಯಾಸ ಆಸೆ ಆಕಾಂಕ್ಷೆ ಇವುಗಳೆಲ್ಲವನ್ನು ಚಿತ್ರದಲ್ಲಿರುವಂತೆ ಸರಳವಾಗಿ ಪರಿಚಯಿಸಿದರೂ ಕುತೂಹಲಕರ ಘಟ್ಟದಲ್ಲಿ ನಿಲ್ಲಿಸಿ ನಮ್ಮ ಕುತೂಹಲವನ್ನು ಹಾಗೆಯೇ ಉಳಿಸುವ ರೀತಿ ನಮಗೂ ಸಿನಿಮಾ ನೋಡಬೇಕೆಂಬ ಆಸಕ್ತಿ ಹುಟ್ಟುವಂತೆ ಮಾಡುವುದರಲ್ಲಿ ಇವರ ಬರವಣಿಗೆ ಯಶಸ್ವಿಯಾಗಿದೆ. ಜೀವನೋತ್ಸಾಹದಿಂದ ಪುಟಿಯುವ ಗುರುರಾಜ ಶಾಸ್ತ್ರಿಯವರಿಂದ ಹೀಗೆ ವೈವಿಧ್ಯಮಯ ಲೇಖನಗಳನ್ನು ನಿರೀಕ್ಷಿಸಬಹುದು. ಶಾಸ್ತ್ರಿಯವರಿಗೆ ಧನ್ಯವಾದಗಳು.

14) "ಅಟಿಕುಳ ಕ್ಷಳದಿಂ" – ಗಣಪತಿ ಹೆಗಡೆ:

ಯಕ್ಷಗಾನ ತಾಳಮದ್ದಲೆಯ ಪಟುವೂ ಪುರಾಣಾಂತರ್ಗತ 100 ವಿಶಿಷ್ಟ ಹಾಗೂ ಅಪರಿಚಿತ ಪಾತ್ರಗಳನ್ನು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಪರಿಚಯಿಸಿದ ಗಣಪತಿ ಹೆಗಡೆಯವರು ನಮ್ಮ ಕನ್ನಡದ ಅಕ್ಷರಮಾಲೆಯ ಬಗೆಯೂ ಅಪಾರ ಆಸಕ್ತಿ ತಳೆದು ಅದರ ವೈಶಿಷ್ಟ್ಯತೆಯ ಬಗ್ಗೆ ಈಗಾಗಲೇ ಹಲವಾರು ಲೇಖನಗಳ ಮೂಲಕ ನಮಗೆ ಪರಿಚಯಿಸುತ್ತಾ, ನಾವು

ಮರೆತಿರುವುದನ್ನು ನೆನಪಿಸಿಕೊಳ್ಳುವಂತೆ ಮಾಡುತ್ತಿದ್ದಾರೆ. "ೞಱಕುಳ ಕ್ಷಳದಿಂ" ಈ ಲೇಖನದಲ್ಲಿ ಕನ್ನಡದ ಎರಡು ವಿಶಿಷ್ಟ ವರ್ಣಗಳಾದ ೞ ಮತ್ತು ಱ ದ ವೈಶಿಷ್ಟ್ಯದ ಬಗ್ಗೆ ಮಾಹಿತಿ ಚೆಲ್ಲುತ್ತಾರೆ. ಹಳೆಗನ್ನಡದ ತುಂಬಾ ಚೆಲ್ಲವರಿದಿರುವ ಈ ೞ ಮತ್ತು ಱ ದ ಉಚ್ಚಾರ ರ ಮತ್ತು ಳ ದ ಉಚ್ಚಾರವೇ ಆಗಿದ್ದರೂ ಬರವಣಿಗೆಯಲ್ಲಿ ಅಪಾರ ವ್ಯತ್ಯಾಸವಿದೆ. ತಮಿಳು, ಮಲೆಯಾಳ ಮುಂತಾದ ಎಷ್ಟೋ ಭಾರತೀಯ ಭಾಷೆಗಳಿಗಿಂತ ಹೆಚ್ಚು ವರ್ಣಾಕ್ಷರಗಳನ್ನು ಹೊಂದಿರುವ ಕನ್ನಡ ಭಾಷೆ ಅತ್ಯಂತ ಶ್ರೀಮಂತ ಭಾಷೆ ಎಂದು ತಿಳಿಸುವುದಲ್ಲದೆ, 'ಎ', 'ಒ' ಸ್ವರಗಳಿಲ್ಲದ 'ಳ' ವರ್ಣವಿರದ ಸಂಸ್ಕೃತ ಭಾಷೆಗಿಂತ ಈ ಅಕ್ಷರಗಳನ್ನು ಹೊಂದಿರುವ ಕನ್ನಡ ಭಾಷೆಯ ಶ್ರೀಮಂತಿಕೆಯನ್ನೂ ಎತ್ತಿ ತೋರಿಸುತ್ತಾರೆ. ಈಗ ೞ ಹಾಗೂ ಱ ಗೆ ಪರ್ಯಾಯವಾಗಿ ರ ಮತ್ತು ಳ ಅಕ್ಷರಗಳನ್ನೇ ಉಪಯೋಗಿಸಿದರೂ, ಉಚ್ಚಾರ ಒಂದೇ ಆಗಿದ್ದರೂ ೞ ಱ ಹೊಂದಿದ ಶಬ್ದಗಳ ಅರ್ಥವೇ ಬೇರೆ ಇತ್ತು ಎಂಬುದನ್ನು ಸೋದಾಹರಣವಾಗಿ ನಿರೂಪಿಸುತ್ತಾರೆ. ಕೇಶೀರಾಜನ ಶಬ್ದಮಣಿ ದರ್ಪಣದಿಂದಲೂ ಉದಾಹರಣೆಗಳನ್ನು, ಪದ್ಯಗಳನ್ನು ಎತ್ತಿಕೊಂಡು ೞ ಱ ಗಳಿಂದಾಗಿ ಕನ್ನಡ ಭಾಷೆಯ ಶ್ರೀಮಂತಿಕೆಯು, ಕಡಿಮೆ ವರ್ಣಾಕ್ಷರಗಳಿರುವ ಬೇರೆ ಹಲವಾರು ಭಾರತೀಯ ಭಾಷೆಗಳಿಗಿಂತ ಎಷ್ಟು ಸಮೃದ್ಧವಾಗಿದೆ ಎಂದು ತೋರಿಸುವಾಗ ನಮಗೆ ಹೆಮ್ಮೆಯಾಗದಿರದು. ಸಂಗ್ರಹ ಯೋಗ್ಯವಾದ ಲೇಖನಗಳನ್ನು ಕೊಡುತ್ತಿರುವ ಶ್ರೀ ಗಣಪತಿ ಹೆಗಡೆಯವರಿಗೆ ಧನ್ಯವಾದಗಳು.

15) 'ಮಕ್ಕಳಿಗೆ ಸೈಬರ್ ಸುರಕ್ಷತೆಯತ್ತ ನಾಲ್ಕಾರು ಕಿವಿ ಮಾತು' – ಶ್ರೀಧರ ಬಾಣಾವರ:

ನಿಯತವಾಗಿಯಲ್ಲದಿದ್ದರೂ ಆಗೀಗ ಉತ್ತಮವಾದ ಚಿಂತನೀಯ ಲೇಖನಗಳನ್ನು ಪ್ರಸ್ತುತಪಡಿಸುವ ಶ್ರೀಧರ ಬಾಣಾವರ ಅವರ ಈ ಲೇಖನ ಅತ್ಯಂತ ಸಾಂದರ್ಭಿಕವೂ ಅಪೇಕ್ಷಣೀಯವೂ ಅವಶ್ಯವೂ ಆಗಿದೆ. ಮನೆ, ಶಾಲೆ, ಗೆಳೆಯರು, ಆಟ, ಸಂಜೆ ಭಜನೆ, ಓದು ಆಗೀಗ ಸಿನಿಮಾ ನಾಟಕ ಇತ್ಯಾದಿಗಳಿಗಷ್ಟೇ ಸೀಮಿತವಾಗಿತ್ತು ನಮ್ಮೆಲ್ಲರ ಬಾಲ್ಯ. ಆದರೆ ಈಗ ಅತ್ಯಂತ ವಿಸ್ತಾರವಾದ ಆಧುನಿಕ ತಂತ್ರಜ್ಞಾನಗಳಿಗೆ ತೆರೆದುಕೊಂಡು ಉಪಕಾರಿಯಾಗಿರುವಷ್ಟೇ ಅಪಾಯಕಾರಿಯೂ ಆಗಿರುವುದನ್ನೂ ಅದರಿಂದ ವಹಿಸಬೇಕಾದ ಎಚ್ಚರಿಕೆಯನ್ನೂ ಶ್ರೀಧರ ಬಾಣಾವರ ಅವರು ಈಗಿನ ಜನಾಂಗದ ಮೇಲಿನ ಕಾಳಜಿಯಿಂದ ಬಹಳ ಯುಕ್ತವಾದ ರೀತಿಯಲ್ಲಿ ಸರಳ ಸೂಚನೆಗಳೊಂದಿಗೆ ತಿಳಿಸಿಕೊಡುತ್ತಾರೆ. ಅವರೆನ್ನುವಂತೆ ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳ ಬಳಕೆ ಹೆಚ್ಚು ಅಪಾಯಕಾರಿಯಾಗಿ ಪರಿಣಮಿಸಿರುವುದು ಕೊರೋನಾ ಲಾಕ್‌ಡೌನ್ ಕಾಲದಲ್ಲಿ ಅನಿವಾರ್ಯವಾಗಿ ಆನ್‌ಲೈನ್ ಪಾಠಗಳಿಗಾಗಿ ಮಕ್ಕಳಿಗೆ ಒದಗಿಸಿಕೊಡಲೇಬೇಕಾಗಿ ಬಂದ ಈ ಸಲಕರಣೆಗಳಿಂದ. ಮಕ್ಕಳು ಅವುಗಳನ್ನು ದುರುಪಯೋಗಪಡಿಸಿಕೊಳ್ಳದಂತೆ ಪಾಲಕರು, ಹಿರಿಯರು ವಹಿಸಬೇಕಾದ ಮುಂಜಾಗ್ರತೆಯ ಬಗ್ಗೆ ಬಹಳ ಸೂಕ್ಷ್ಮವಾಗಿ ತಿಳಿಸಿಕೊಡುತ್ತಾರೆ. ಅಲ್ಲದೆ ದೊಡ್ಡವರೂ ಸಹ ತಮ್ಮ ಮಾಹಿತಿಗಳು ಕಳುವಾಗದಂತೆ, ಯಾರೂ ದುರುಪಯೋಗ ಮಾಡಿಕೊಳ್ಳದಂತೆ ವಹಿಸಬೇಕಾದ ಎಚ್ಚರಿಕೆಯ ಬಗೆಗೂ ಸವಿಸ್ತಾರವಾಗಿ ತಿಳಿಸುವ ಬಹಳ ಉಪಯುಕ್ತವಾದ ಎಚ್ಚರಿಕೆಯನ್ನು ಕೊಡುತ್ತಾರೆ. ಎಲ್ಲರೂ ಒಂದಲ್ಲ ಹಲವಾರು ಬಾರಿ ಓದಿ ಮನನ ಮಾಡಿಕೊಳ್ಳಬೇಕಾದ ಲೇಖನ. ಸದ್ಯದ ಸಂದರ್ಭಕ್ಕೆ ಅತ್ಯಂತ ಉಪಯುಕ್ತವಾದ ಲೇಖನಕೊಟ್ಟ ಶ್ರೀಧರ ಬಾಣಾವರ ಅವರಿಗೆ ಧನ್ಯವಾದಗಳು.

16) 'ವೇದಗಳಲ್ಲಿ ಲೌಕಿಕ ಸೂಕ್ತಗಳು' – ಶಾಂತಾ ನಾಗಮಂಗಲ:

ಹಲವು ಭಾಷಾ ವಿದುಷಿ ಶಾಂತಾ ನಾಗಮಂಗಲ ಅವರು ಈ ವಿದ್ವತ್ಪೂರ್ಣ ಲೇಖನದ ಮೂಲಕ ಸಾಮಾನ್ಯರಾದ ನಮಗೆ ವೇದಗಳು ಒಳಗೊಂಡಿರುವ ಬೇರೆಯೇ ಆದ ಒಂದು ಲೌಕಿಕ ಮುಖದ ಪರಿಚಯ ಮಾಡಿಕೊಡುತ್ತಾರೆ. ಅವರ ಓದಿನ ಹರಹಿನ ಲಾಭವನ್ನು ತಮ್ಮ ಲೇಖನಗಳ ಮೂಲಕ ಬಹಳ ಸ್ವಾರಸ್ಯಕರವಾಗಿ ನಮಗೆ ಒದಗಿಸಿಕೊಡುತ್ತಿದ್ದಾರೆ. ವೇದದ ಬಹಳಷ್ಟು ಸೂಕ್ತಗಳು ಜಾನಪದಕ್ಕೆ ಹತ್ತಿರವಾಗಿದೆಯೆಂಬ ವಿಷಯ ಕೌತುಕವನ್ನುಂಟು ಮಾಡಿತು. ವೇದದಲ್ಲಿ ಕಂಡುಬರುವ ಲೌಕಿಕ ಸೂಕ್ತಗಳ ವರ್ಗೀಕರಣವೂ ಆಗಿನ ಜನಜೀವನದ ಒಂದು ಪರಿಚಯವನ್ನೂ ಮಾಡಿಕೊಡುತ್ತವೆ. ಹವನ, ಹೋಮ, ಯಾಗ, ಯಜ್ಞ, ದೇವತಾ ಪೂಜೆ, ಋಚೆಗಳು ಮಂತ್ರಗಳ ಪರಿವೇಷದಲ್ಲೇ ವೇದಗಳನ್ನು ನೋಡುತ್ತಿದ್ದ ನಮಗೆ ಜೂಜಾಟದ ಬಗ್ಗೆಯೂ ಸೂಕ್ತಗಳಿವೆ ಎಂದರಿದು ತೀರಾ ಬೆರಗಾಯಿತು. ಜೂಜುಕೋರರು, ಅಭಿಚಾರವನ್ನು ಮಾಡುವವರು ವೇದಕಾಲದಲ್ಲೂ ಇದ್ದರು ಎಂದರಿದಾಗ ಪಂಪನ 'ಮನುಜ ಕುಲಂ ತಾನೊಂದೆ ವಲಂ' ಎಂಬುದು ವೇದ ಕಾಲಕ್ಕೂ ವೇದಪೂರ್ವ ಕಾಲಕ್ಕೂ ಹೊಂದಿಕೆಯಾಗುವ ಮಾತು ಎಂದಾಯಿತು. ಜೂಜಾಡುವವನ ಮನೋದೌರ್ಬಲ್ಯ, ಅವನ ಸಂಸಾರದ ಗತಿ, ವ್ಯಸನಕ್ಕೆ ಮತಿ ಮಾರಿಕೊಂಡವರ ಹೀನ ಸ್ಥಿತಿ ಎಲ್ಲವನ್ನೂ ವೇದ ಸೂಕ್ತಗಳ ಮೂಲಕ ತಿಳಿಸಿ ವೇದಾಂತರಾಳದ ಬೇರೆಯೇ ಮಜಲಿನ ದರ್ಶನ ಮಾಡಿಸಿದ ಶಾಂತಾ ನಾಗಮಂಗಲ ಅವರಿಗೆ ಅನಂತ ಧನ್ಯವಾದಗಳು

17) 'ಅಡವಿಟ್ಟ ಬದುಕು ಮತ್ತೆ ಪಡೆಯಬೇಕು' – ಮೋಲೇನಹಳ್ಳಿ ರಮೇಶ್ (ಮೋರ):

ಮೋಲೇನಹಳ್ಳಿ ರಮೇಶ್ ಅವರು ನಿಯತವಾಗಿ ಬರೆಯದಿದ್ದರೂ ಅವರ ಪ್ರತೀ ಬರಹವೂ ಗಟ್ಟಿ ಕಾಳಿನಂತೆ. ಇಂದಿನ ಕವನ ಹಣದ ಹಿಂದೆ ಓಡುತ್ತಾ ಎಲ್ಲೋ ಒಂದು ಘಟ್ಟದಲ್ಲಿ ಭ್ರಮನಿರಸನವಾಗಿ, ಒದೆದು ಬಂದ ಆ ಹಿಂದಿನ ಸುಂದರ ಬದುಕಿಗೆ ಮರಳುವ, ಆ ದಿನಗಳನ್ನು ಮತ್ತೆ ಹಿಡಿಯಬೇಕೆಂದು ಹಪಹಪಿಸುವ ವ್ಯಕ್ತಿಯ ಪರಿತಾಪವನ್ನು ಸೂಕ್ತವಾದ ಪ್ರತಿಮೆಗಳ ಮೂಲಕ ಕಟ್ಟಿಕೊಡುತ್ತಾರೆ. ಆಲಾಪನೆಯಲ್ಲೇ ನಿಂತ ಸ್ವರ, ಗಕ್ಕನೆ ನೆಲಕ್ಕುರುಳುವ ಮರ, ಪೂರ್ಣಾಯುಸ್ಸನ್ನು ಬಾಳದ ಅಪ್ಪನನ್ನು ಪ್ರತಿನಿಧಿಸಿದರೆ, ಅತ್ಯುತ್ಸಾಹದಿಂದ ನೂರಾರು ಅವಕಾಶಗಳನ್ನರಸಿ ಅದರ ಹಿಂದೆ ಓಡಿ, ತನ್ನದೇ ಸ್ವರ ಹುಡುಕಿ ಮುನ್ನಡೆಯುವ ಹಕ್ಕಿಯ ಚಿತ್ರ, ನಗರದ ವೇಷಭೂಷಕ್ಕೆ ಜೀವನವಿಧಾನಕ್ಕೆ ಮರುಳಾಗಿ, ಹಗಲು ರಾತ್ರಿಯ ಭೇದವರಿಯದೆ ಲ್ಯಾಪ್‌ಟಾಪ್‌ಗಳೇ ಪ್ರಪಂಚವಾದ ಸಾಫ್ಟ್‌ವೇರ್ ಎಂಜಿನಿಯರುಗಳ ಬದುಕಿನ ಬರಡು ಜೀವನವನ್ನು ಬಿಂಬಿಸುತ್ತದೆ. ಪ್ಯಾಕೇಜ್ ಹೆಚ್ಚುತ್ತಾ ಹೋದಷ್ಟೂ ಹಣದ ಥೈಲಿ ಹಿಗ್ಗುತ್ತಾ ಹೋದರೂ, ಅನುಭವಿಸಲು ಸಮಯವೇ ಇಲ್ಲದೆ ಕಾಲ ಉರುಳುತ್ತಿರುವಾಗ ಎಚ್ಚೆತ್ತುಕೊಳ್ಳುವ ಹೊತ್ತಿಗೆ ತನ್ನ ಬದುಕಿನ ಲಯ ತಪ್ಪಿಹೋಗಿರುವುದು ಅರಿವಾಗಿ, ಹಳೆಯ ಪ್ರಕೃತಿಯೊಂದಿಗಿನ ಆ ಸಹಬಾಳ್ವೆ ಅತ್ಯಂತ ಅಮೂಲ್ಯವೆನಿಸಿ ಮತ್ತೆ ಆ ಸುಂದರ ಬದುಕಿಗೆ ಮರಳಬೇಕು, ಆಧುನಿಕ ಜೀವನಕ್ಕಾಗಿ ಅಡವಿಟ್ಟ ಬದುಕನ್ನು ಮರಳಿ ಬಿಡಿಸಿಕೊಳ್ಳಬೇಕು ಎಂಬ ಆಸೆಯೊಂದಿಗೆ ಕವನ ಮುಕ್ತಾಯ ವಾಗುತ್ತದೆ. ಹರಿದು ಹೋದ ನೀರನ್ನು ಪಡೆಯಲೆಂತು? ಬಹಳ ಶಕ್ತವಾದ ಮರು ಓದನ್ನು, ವಿಶ್ಲೇಷಣೆಯನ್ನು ಬೇಡುವ ಕವನ. ಮೋಲೇನಹಳ್ಳಿ ರಮೇಶರಿಗೆ ಅಭಿನಂದನೆಗಳು.

18) 'ಎರಡು ಕವನಗಳು' – ಮಾಲತಿ ಶ್ರೀನಿವಾಸನ್:

ಲವಲವಿಕೆಯ, ಸ್ನೇಹಮಯ ವ್ಯಕ್ತಿತ್ವದ ಮಾಲತಿ ಶ್ರೀನಿವಾಸನ್ ಅವರು ಹಲವಾರು ಲೇಖನ, ಕವನಗಳಿಂದ ಈ ವೇದಿಕೆಯ ಸಾಹಿತ್ಯ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಾ ಬಂದಿರುವವರು. ಇಂದು ತಮ್ಮ ಎರಡು ಕವನಗಳನ್ನು ಪ್ರಸ್ತುತಪಡಿಸಿದ್ದಾರೆ. ಅವರ ಮೊದಲನೆಯ ಕವನ: **'ಭಾವಲಹರಿ'**. ಅಪರಂಪಾರ ಅಪಾರವಾದ ಸಮುದ್ರವನ್ನು ನೋಡುತ್ತಿದ್ದಷ್ಟೂ ಅದು ವಿಸ್ಮಯಗಳ ಸಾಗರ. ದಡದಲ್ಲಿ ಮೂಡಿಸಿದುದೆಲ್ಲವನ್ನೂ ಕೊಚ್ಚಿಹಾಕುವ, ನಿರಂತರ ಗಾಂಭೀರ್ಯದಿಂದ ಭೋರ್ಗರೆಯುವ ಕಡಲನೆದುರು, ಮನುಷ್ಯ ಎಷ್ಟು ಅಲ್ಪ. ಅದೇ ಸಮುದ್ರ, ಕವಯಿತ್ರಿಗೆ ಮನುಜರ ಪಾದವನ್ನೂ ಪಾಪವನ್ನೂ ತೊಳೆವ ಗಂಗೆಯಂತಹ ಪಾವನ ಜಲವಾಗುತ್ತದೆ. ಮುಂಜಾನೆ ಸಂಜೆಯಲ್ಲಿ ಅದು ತಳೆಯುವ ಓಕುಳಿಯಾಟದ ಬಣ್ಣಗಳೊಂದಿಗೆ ಏರಿಳಿತದ ಅಲೆಗಳು ತುಂಟಾಟವಾಡುತ್ತವೆ. ಸಮುದ್ರ ಕವಯಿತ್ರಿಗೆ ಆಸರೆಯ ಬೆಚ್ಚನೆಯ ಭಾವವನ್ನೂ ಕೊಡುತ್ತದೆ ಎಂಬುದು ಮನೋಹರವಾದ ಕಲ್ಪನೆ.

ಎರಡನೆಯ ಕವನ – **'ಎಂದಾದರೊಂದು ದಿನ'**. ಕಾಲನ ಮೂಲಕ ಹಾದು ಸಾಗುವ ಪ್ರತಿಯೊಂದು ಜೀವಿಯೂ ಬಾಲ್ಯ, ಯೌವನ, ತಾರುಣ್ಯ, ವೃದ್ಧಾಪ್ಯಗಳನ್ನು ಅನುಭವಿಸಲೇಬೇಕು. ಹಿಂದಿನ ಯೌವನದ ರೂಪ, ಹರೆಯದ ತುಂಟಾಟ, ಹುಸಿ ಕೋಪತಾಪಗಳ ಸೆಣಸಾಟ ಕನಸುಗಳ ಕಣ್ಣುಮುಚ್ಚಾಲೆಯಾಟ ಬಲು ರಮ್ಯ. ಆ ಸೊಬಗಿನ ಕಾಲವೆಲ್ಲಾ ಕಳೆದು, ಅನಿವಾರ್ಯವಾದ ಬಾಳಿನ ಇಳಿ ಸಂಜೆಯಲ್ಲಿ ಬಂದು ನಿಂತಾಗ ಬರೆದಿರುವ ಈ ಕವನ ಎಂದಾದರೂ ಕೈಸೇರಿದಾಗ ಸಂಗಾತಿಯ ಪ್ರತಿಕ್ರಿಯೆ ಹೇಗಿರಬಹುದು? ಈ ಕಾಲದ ಬದಲಾವಣೆಯನ್ನು ಒಪ್ಪದೆ ಕಣ್ಣು ಹಾಯಿಸದೆ ಹರಿದೆಸೆದು ಮರೆಯುವೆಯಾ? ದೂರಾಗುವೆಯಾ ಎಂಬಲ್ಲಿ ಸಂಗಾತಿ ಹಿಂದಿನಂತೆಯೇ ತನ್ನನ್ನು ಕಾಣುವನೋ ಇಲ್ಲವೋ ಎಂಬ ಸಂಶಯ ನೋವು ಕಾಡುತ್ತಿರುವುದು ಕಾಣುತ್ತದೆ. ಇಳಿವಯಸ್ಸಿನ ಹಲವಾರು ಭಯ, ನೋವು, ತಳಮಳ, ಸಂಶಯಗಳ ಬಗ್ಗೆ ಮಾಲತಿಯವರು ಈಗಾಗಲೇ ರಚಿಸಿರುವ ಹಲವಾರು ಕವನಗಳ ಸಾಲಿಗೆ ಈ ಕವನವೂ ಭಿನ್ನ ರೀತಿಯಲ್ಲಿ ಸೇರ್ಪಡೆಯಾಗುತ್ತದೆ. ಮಾಲತೀ, ನಾವು ಹೆಚ್ಚಿನವರು ಅದೇ ದೋಣಿಯಲ್ಲಿರುವವರು. ಅಭಿನಂದಿಸಲೇ ಧನ್ಯವಾದಗಳನ್ನು ಹೇಳಲೇ??

19) 'ಅಡುಗೆ ಮನೆಯಿಂದ ಕಾರ್ಖಾನೆಗೆ ಹಾರಿದ ಉಪಕರಣ' – ಜಿ. ವಿ. ಅರುಣ:

ಚೆಂಗನ ಸೃಷ್ಟಿಕರ್ತ ಶ್ರೀ ಅರುಣ ನವಿರಾದ ಹಾಸ್ಯ ಬರಹಗಳಿಗೆ ಹೆಸರಾದಂತೆಯೇ ಬಹಳ ಸ್ವಾರಸ್ಯಕರವಾಗಿ ಮಾಹಿತಿ ಭರಿತ ವೈಜ್ಞಾನಿಕ ಲೇಖನಗಳನ್ನೂ ಕೊಡುವುದರಲ್ಲಿ ನಿಷ್ಣಾತರು. ಖ್ಯಾತ ವಿಜ್ಞಾನ ಬರಹಗಾರ ಜಿ.ಟಿ.ಎಲ್. ಸ್ವಾಮಿ ಯವರಂತೆ ಇವರ ವೈಜ್ಞಾನಿಕ ಲೇಖನಗಳಲ್ಲೂ ಅಲ್ಲಲ್ಲಿ ನವಿರಾದ ಹಾಸ್ಯದ ಎಳೆಗಳಿರುತ್ತವೆ. ಇವತ್ತಿನ ಬರಹದ 'ಅಡುಗೆ ಮನೆಯಿಂದ ಕಾರ್ಖಾನೆಗೆ ಹಾರಿದ ಉಪಕರಣ' ಎಂಬ ಶೀರ್ಷಿಕೆಯೇ ಚೋದ್ಯವಾಗಿದೆ. ಲಟ್ಟಣಿಗೆ ಪ್ರತಿಯೊಂದು ಅಡುಗೆಮನೆಯ ಅತ್ಯವಶ್ಯಕ ಸಾಧನ. ಕೆಲಸಕ್ಕೆ ಸೇರಿದ ಹೊಸದರಲ್ಲಿ ಚಪಾತಿಗೆ ಹಿಟ್ಟು ಕಲೆಸಿಯಾದ ಮೇಲೆ ಅದಕ್ಕೆ ಬೇಕಾದ ಲಟ್ಟಣಿಗೆ ಮಣೆ ಎರಡೂ ಇಲ್ಲ ಎಂಬ ಅರಿವಾಗಿ ತಟ್ಟೆಯ ಹಿಂಭಾಗದಲ್ಲಿ ಹಿಟ್ಟನ್ನಿಟ್ಟು ಗಾಜಿನ ಬಾಟಲಿ ಯಿಂದಲೇ ಲಟ್ಟಿಸಿ ಚಪಾತಿ ಮಾಡಿದೆವು ಎಂಬ ನಗುತರಿಸುವ ಸ್ವಾರಸ್ಯಕರವಾದ ಅವರ ಅವಿಷ್ಕಾರದೊಂದಿಗೆ ಆರಂಭವಾಗುವ ಲೇಖನ ಲಟ್ಟಣಿಗೆಯಿಂದ ಸ್ಫೂರ್ತಿ ಪಡೆದು ಕಾಯಿಸಿದ ಲೋಹದ ಉಂಡೆಗಳನ್ನು ಲಟ್ಟಿಸಿ, ಲೋಹದ

ಹಾಳೆಯನ್ನು ತಯಾರುಮಾಡುವ ಉರುಳೆಯಂತ್ರಗಳು ಆವಿಷ್ಕಾರವಾದ ಪರಿಯನ್ನು ತಿಳಿಸುತ್ತಾರೆ. ಮೊದಲಿನ ಕಚ್ಚಾ ಉರುಳೆಯಂತ್ರಗಳನ್ನು ಸುಧಾರಿಸುತ್ತಾ, ಆಧುನಿಕ ರೋಲಿಂಗ್ ಮಿಲ್‌ಗಳಾಗಿ ಹೆಚ್ಚು ಹೆಚ್ಚು ತೆಳ್ಳನೆಯ ಲೋಹದ ಹಾಳೆಗಳನ್ನು ಪಡೆಯುತ್ತಾ ಹೋಗುವಂತೆ ಸುಧಾರಣೆ ಮಾಡುತ್ತಾ ಬಂದ ಪರಿಯನ್ನೂ ಬಹಳ ಸ್ವಾರಸ್ಯಕರವಾಗಿ ವಿವರಿಸುತ್ತಾರೆ. ತೆಳುವಾದ ಆದರೆ ಉತ್ತಮ ಭೌತಿಕ ಗುಣಮಟ್ಟದ ಹಾಳೆಗಳನ್ನೇ ಕಾರುಗಳ ಹೊರಕವಚಗಳಿಗೂ ಬಳಸುವುದು ಮತ್ತು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನೂ ಮಾಡುವುದು ಎಂಬ ಮಾಹಿತಿಯನ್ನೂ ಕೊಡುತ್ತಾರೆ. ಬರೀ ಹಾಳೆಗಳಷ್ಟೇ ಅಲ್ಲ ವಿವಿಧ ಗಾತ್ರದ ವೃತ್ತಾಕಾರದ ಚಚ್ಚೌಕದ ಉಕ್ಕಿನ ಕಂಬಿಗಳನ್ನೂ ಸಹ ಅದಕ್ಕೆಂದೇ ನಿರ್ಮಿತವಾದ ಉರುಳೆಯಂತ್ರಗಳಿಂದಲೇ ತಯಾರುಮಾಡುತ್ತಾರೆ ಎಂದು ತಿಳಿಸುತ್ತಾ ಅಡುಗೆಮನೆಯಿಂದ ಹಾರಿದ ಲಟ್ಟಣಿಗೆಯ ಸ್ಫೂರ್ತಿ ಪಡೆದು ಏನೆಲ್ಲಾ ಹೊಸ ಆವಿಷ್ಕಾರಗಳನ್ನು ಮಾಡಿಕೊಂಡಿದ್ದಾರೆ ಎಂದೆಲ್ಲ ತಿಳಿಸುವ ಈ ಅತ್ಯಂತ ಸ್ವಾರಸ್ಯಕರವಾದ ಲೇಖನದಿಂದ ನಮ್ಮ ಜ್ಞಾನದ ಪರಿಧಿಯನ್ನು ಹಿಗ್ಗಿಸಿದ ಅರುಣ ಅವರಿಗೆ ಅನಂತ ಧನ್ಯವಾದಗಳು. ಇಂತಹ ವೈಜ್ಞಾನಿಕ ಲೇಖನಗಳ ಜೊತೆಗೆ ಚೆಂಗನನ್ನೂ ಆಗಾಗ ಕರೆತರುತ್ತಿರಿ ಎಂದು ನೆನಪಿಸುತ್ತಾ ಹಾರ್ದಿಕವಾಗಿ ಅಭಿನಂದಿಸುವೆ.

ಆತ್ಮೀಯರೇ, ಸಾಹಿತ್ಯ ದಾಸೋಹದ ವೈವಿಧ್ಯಪೂರ್ಣ ಲೇಖನಗಳನ್ನು ಪೂರ್ವಭಾವಿಯಾಗಿಯೇ ವಿರಾಮವಾಗಿ ಓದುವ, ಓದಿ ಆನಂದಿಸುವ ಒಂದು ಹೆಚ್ಚಿನ ಸವಲತ್ತು ಅಧ್ಯಕ್ಷತೆವಹಿಸಿದವರಿಗಿರುತ್ತದೆ. ಈ 203ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆಯ ಗೌರವವನ್ನು ನನಗಿತ್ತ ಸಂಚಾಲಕ ಮಂಡಲಿಗೂ, ತುಸು ದೀರ್ಘವೇ ಎನ್ನಬಹುದಾದ ಅನಿಸಿಕೆಯ ಮಾತುಗಳನ್ನು ತಾಳ್ಮೆಯಿಂದ ಕೇಳಿದ ನಿಮಗೆಲ್ಲರಿಗೂ ನನ್ನ ಅನಂತ ಧನ್ಯವಾದಗಳು.

ನಾನು ವಿಮರ್ಶಕಳಲ್ಲ. ಸಹೃದಯ ಓದುಗಳಷ್ಟೆ. ನನ್ನ ಅವಲೋಕನಕ್ಕೆ ದಕ್ಕಿದ ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದೇನೆ. ನಮಸ್ಕಾರ.

*****

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ,
ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com